# ಕರ್ನಾಟಕ ವಿಧಾನಮಂಡಲ

**ಕರ್ನಾಟಕ ಶಾಸಕಾಂಗ ಪತ್ರಿಕೆ**
**(ತ್ರೈಮಾಸಿಕ ಪತ್ರಿಕೆ)**
**ಜುಲೈ, ಆಗಸ್ಟ್ ಮತ್ತು ಸೆಪ್ಟಂಬರ್ –2025**
**ಸಂಪುಟ–VII ಸಂಖ್ಯೆ – 3**


**ಪ್ರಕಟಣೆ:**
**ಸಂಶೋಧನಾ ಮತ್ತು ಉಲ್ಲೇಖನಾ ಶಾಖೆ,**
**ಕರ್ನಾಟಕ ವಿಧಾನ ಸಭೆ ಸಚಿವಾಲಯ,**
**ಕೊಠಡಿ ಸಂಖ್ಯೆ: 28, ನೆಲಮಹಡಿ, ವಿಧಾನಸೌಧ,**
**ಬೆಂಗಳೂರು – 560 233.**

## ವಿಶೇಷ ಸೂಚನೆ

ಕರ್ನಾಟಕ ಶಾಸಕಾಂಗ ಪತ್ರಿಕೆಯು ಕರ್ನಾಟಕ ವಿಧಾನ ಸಭೆ/ವಿಧಾನ ಪರಿಷತ್ತಿನ ಸದಸ್ಯರುಗಳ ಪರಾಮರ್ಶೆಗಾಗಿ ಪ್ರಕಟಿಸಲಾಗುತ್ತಿದ್ದು, ಇದು ಆಂತರಿಕ ಪ್ರಕಟಣೆಗೆ ಮಾತ್ರ ಸೀಮಿತವಾಗಿರುತ್ತದೆ.

ಈ ಪತ್ರಿಕೆಯಲ್ಲಿ ಅಳವಡಿಸಲಾಗಿರುವ ಮಾಹಿತಿಗಳು ವಿವಿಧ ದಿನ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಸುದ್ದಿಗಳ ಆಧಾರಿತವಾಗಿದ್ದು, ಇದರಲ್ಲಿ ನ್ಯೂನತೆ, ವ್ಯತ್ಯಾಸಗಳಿಂದ ಅಥವಾ ನಿಖರತೆಯ ಕೊರತೆಯಿಂದ ಯಾವುದೇ ವ್ಯಕ್ತಿಗೆ ಉಂಟಾಗಬಹುದಾದ ನಷ್ಟ/ಹಾನಿಗೆ ವಿಧಾನ ಸಭಾ ಸಚಿವಾಲಯವು ಯಾವುದೇ ರೀತಿ ಜವಾಬ್ದಾರವಾಗುವುದಿಲ್ಲ.

**ಸೂಚನೆ:–** ಪತ್ರಿಕೆಯು ವಿಧಾನ ಮಂಡಲದ ಅಂತರ್ಜಾಲ **http://kla.kar.nic.in** ನಲ್ಲೂ ಲಭ್ಯವಿದೆ

## ಮುನ್ನುಡಿ

ಕರ್ನಾಟಕ ವಿಧಾನಮಂಡಲದ ಸಂಶೋಧನಾ ಮತ್ತು ಉಲ್ಲೇಖನಾ ಶಾಖೆಯು ಉಭಯ ಸದನಗಳ ಮಾನ್ಯ ಸದಸ್ಯರುಗಳ ಉಪಯೋಗಕ್ಕಾಗಿ ಕರ್ನಾಟಕ ಶಾಸಕಾಂಗ ತ್ರೈಮಾಸಿಕ ಪತ್ರಿಕೆಯ ಸಂಪುಟ – VII ರ ಮೂರನೇ ಸಂಚಿಕೆಯನ್ನು ಪ್ರಕಟಪಡಿಸುತ್ತಿದೆ.

ತ್ರೈಮಾಸಿಕ ಶಾಸಕಾಂಗ ಪತ್ರಿಕೆಯು ಮುಖ್ಯವಾಗಿ ಕರ್ನಾಟಕ ವಿಧಾನಮಂಡಲದ ಎರಡೂ ಸದನಗಳ ಶಾಸಕಾಂಗದ ಸುದ್ದಿಗಳು, ಲೋಕಸಭೆ, ರಾಜ್ಯಸಭೆಗಳ, ಸಂಸದೀಯ ವ್ಯವಹಾರಗಳಿಗೆ ಸಂಬಂಧಿಸಿದ ಪ್ರಮುಖ ಸುದ್ದಿಗಳು, ರಾಜ್ಯಗಳ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಹಾಗೂ ಇತರೆ ವಿಷಯಗಳನ್ನೊಳಗೊಂಡಿರುತ್ತದೆ.

ಈ ಸಂಚಿಕೆಯಲ್ಲಿ 2025ನೇ ಸಾಲಿನ ಜುಲೈ, ಆಗಸ್ಟ್ ಮತ್ತು ಸೆಪ್ಟಂಬರ್–2025ರ ಮಾಹೆಯ ಅವಧಿಯಲ್ಲಿನ ಪ್ರಮುಖ ಸುದ್ದಿ, ಮಾಧ್ಯಮಗಳಲ್ಲಿ ಪ್ರಕಟವಾದ ದೈನಂದಿನ ಸುದ್ದಿಗಳನ್ನು ಸಂಗ್ರಹಿಸಿ ಪ್ರಕಟಿಸಲಾಗಿದೆ.

ಸಂಶೋಧನಾ ಮತ್ತು ಉಲ್ಲೇಖನಾ ವಿಭಾಗವು ಸಿದ್ಧಪಡಿಸಿ ಹೊರತರುತ್ತಿರುವ ಈ ಪತ್ರಿಕೆಯ ಗುಣಮಟ್ಟವನ್ನು ಉನ್ನತೀಕರಿಸಲು ಹಾಗೂ ಹೆಚ್ಚು ವಿಷಯಾಸಕ್ತವಾಗಿಸಲು ಇದರ ಬೆಳವಣಿಗೆಯ ಸುಧಾರಣೆಗೆ ಮಾನ್ಯ ಸದಸ್ಯರುಗಳಿಂದ ಅಮೂಲ್ಯ ಸಲಹೆ ಮತ್ತು ಸೂಚನೆಗಳನ್ನು ಬರಹ ರೂಪದಲ್ಲಿ ಸ್ವೀಕರಿಸಲು ಸದಾ ಸ್ವಾಗತವಿರುತ್ತದೆ.

ಮಾನ್ಯ ಸದಸ್ಯರುಗಳು ತಮ್ಮ ಲೇಖನಗಳನ್ನು ನೀಡಿದಲ್ಲಿ, ಈ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

**ಎಂ.ಕೆ.ವಿಶಾಲಾಕ್ಷಿ**
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ.

ಬೆಂಗಳೂರು
ದಿನಾಂಕ:31.01.2026

## ಕರ್ನಾಟಕ ಶಾಸಕಾಂಗ ತ್ರೈಮಾಸಿಕ ಪತ್ರಿಕೆಯ ಸಂಪಾದಕ ವರ್ಗ

## ಕರ್ನಾಟಕ ವಿಧಾನ ಸಭೆ ಸಚಿವಾಲಯ

1. ಶ್ರೀಮತಿ ಎಂ.ಕೆ. ವಿಶಾಲಾಕ್ಷಿ : ಕಾರ್ಯದರ್ಶಿ
2. ಶ್ರೀ ಬಿ.ಎಸ್. ಮಹಾಲಿಂಗೇಶ್ : ನಿರ್ದೇಶಕರು
3. ಶ್ರೀ ಬಿ.ಎಂ.ಶಂಭು : ಜಂಟಿ ನಿರ್ದೇಶಕರು
4. ಶ್ರೀಮತಿ ವಿ.ಭಾಗ್ಯ : ಉಪ ನಿರ್ದೇಶಕರು
5. ಶ್ರೀ ಬಿ.ಎ.ಸತೀಶ್ : ಸಹಾಯಕ ನಿರ್ದೇಶಕರು

## ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ

1. ಶ್ರೀಮತಿ ಕೆ. ಆರ್. ಮಹಾಲಕ್ಷ್ಮಿ : ಕಾರ್ಯದರ್ಶಿ
2. ಶ್ರೀಮತಿ ಎಸ್. ನಿರ್ಮಲ : ಕಾರ್ಯದರ್ಶಿ–2

# ಕರ್ನಾಟಕ ಶಾಸಕಾಂಗ ಪತ್ರಿಕೆ
## (ತ್ರೈಮಾಸಿಕ ಪತ್ರಿಕೆ)

## ಜುಲೈ, ಆಗಸ್ಟ್ ಮತ್ತು ಸೆಪ್ಟೆಂಬರ್–2025
## ಸಂಪುಟ–VII ಸಂಖ್ಯೆ– 3

## ಪರಿವಿಡಿ
## ಭಾಗ–1
## ಕರ್ನಾಟಕ ವಿಧಾನ ಮಂಡಲದ ಸುದ್ದಿಗಳು


| ಕ್ರಮ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| 1 | ಸನ್ಮಾನ್ಯ ಸಭಾಪತಿಗಳು ಹಾಗೂ ಸನ್ಮಾನ್ಯ ಸಭಾಧ್ಯಕ್ಷರ ಕಾರ್ಯಕ್ರಮಗಳು | 01–49 |
| 2 | ಸಭಾಪತಿ ಹೊರಟ್ಟಿಗೆ 2 ಪ್ರಶಸ್ತಿ | 50 |
| 3 | ಸುವರ್ಣ ಸದಸ್ಯತ್ವದ ಹಾದಿಯಲ್ಲಿ ಸಭಾಪತಿ ಹೊರಟ್ಟಿ | 50 |
| 4 | Retain 3-language formula: Horatti writes to CM | 50–51 |
| 5 | ವಿಧಾನ ಪರಿಷತ್‌ಗೆ ಮಹಿಳೆಯರೂ ಸಭಾಪತಿಯಾಗಲಿ: ಸಭಾಪತಿ ಹೊರಟ್ಟಿ | 51 |
| 6 | ಸ್ಟ್ಯಾನ್‌ಫೋರ್ಡ್ ವಿವಿಯೊಂದಿಗೆ ಸಹಭಾಗಿತ್ವಕ್ಕೆ ಒಲವು | 52 |
| 7 | ಅಮೇರಿಕದ ಬೋಸ್ಟನ್ ಶೃಂಗಸಭೆಯಲ್ಲಿ ಹೊರಟ್ಟಿ ನಿಯೋಗ | 52–53 |
| 8 | ಮೇಲ್ಮನೆಯಲ್ಲಿ ಸಭಾಪತಿ ಹೊರಟ್ಟಿ ಗುಣಗಾನ | 53–54 |
| 9 | ಗ್ರೇಟರ್ ಬೆಂಗಳೂರು ಆಡಳಿತ ತಿದ್ದುಪಡಿ ವಿಧೇಯಕ ಪಾಸ್ | 54–55 |
| 10 | ವಿಧಾನಸಭಾ ಅಧ್ಯಕ್ಷರ ಮಾದರಿ ವ್ಯಕ್ತಿತ್ವ | 55 |
| 11 | ಬೆಂಗಳೂರಿನಲ್ಲಿ ಸೆ.11ರಿಂದ 4 ದಿನಗಳ ಕಾಮನ್‌ವೆಲ್ತ್ ಸಂಸದೀಯ ಸಮ್ಮೇಳನ | 55–56 |
| 12 | 'ಸದನ ಇರುವುದು ಜನರ ಒಳಿತಿಗಾಗಿ' | 56 |
| 13 | ಶಾಸನ ಸಭೆಗಳಲ್ಲಿ ಜನ ಕಲ್ಯಾಣದ ಚರ್ಚೆ ಆಗಲಿ: ಓಂ ಬಿರ್ಲಾ | 57 |


## ಭಾಗ–2
## ಕರ್ನಾಟಕ ವಿಧಾನಮಂಡಲದ ಕಾರ್ಯಚಟುವಟಿಕೆಗಳು


| | | |
|---|---|---|
| 1 | **ವಿಧಾನ ಪರಿಷತ್ತಿನ 156ನೇ ಅಧಿವೇಶನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ** | 61–63 |
| 2 | 2025–26ನೇ ಸಾಲಿನ ವಿಧಾನ ಪರಿಷತ್ತಿನ ವಿವಿಧ ಸಮಿತಿಗಳ ವಿಧಾನ ಮಂಡಲದ ಜಂಟಿ ಸ್ಥಾಯಿ ಸಮಿತಿಗಳ ಚುನಾವಣಾ ಕಾರ್ಯಕ್ರಮದ ವೇಳಾಪಟ್ಟಿ | 64–65 |

| | | |
|---|---|---|
| 3 | ಮಾನ್ಯ ಸಭಾಪತಿ ಮತ್ತು ಮಾನ್ಯ ಉಪ ಸಭಾಪತಿಗಳ ಗೈರು ಹಾಜರಿಯಲ್ಲಿ ಸಭಾಪತಿ ಸ್ಥಾನದಲ್ಲಿ ಪದಧಾರಣ ಮಾಡಲು ಸದಸ್ಯರುಗಳ ನಾಮನಿರ್ದೇಶನ ಮಾಡುವ ಬಗ್ಗೆ | 66 |
| 4 | ಕರ್ನಾಟಕ ವಿಧಾನಮಂಡಲದ ಜಂಟಿ ಸಮಿತಿಗಳು ಹಾಗೂ ವಿಧಾನ ಪರಿಷತ್ತಿನ ಸಮಿತಿಗಳ ಅಧ್ಯಕ್ಷರು ಹಾಗೂ ಸದಸ್ಯರುಗಳನ್ನು ಮುಂದುವರೆಸುವ ಬಗ್ಗೆ | 67 |
| 5 | ಶ್ರೀ ಪುಟ್ಟಣ್ಣ, ವಿಧಾನ ಪರಿಷತ್ತಿನ ಸದಸ್ಯರು, ಇವರ ಅಧ್ಯಕ್ಷತೆಯಲ್ಲಿ ವಿಶೇಷ ಸದನ ಸಮಿತಿ ರಚನೆ | 68–69 |
| 6 | ವಿಶೇಷ ಸದನ ಸಮಿತಿಯ ಪರಿಶೀಲನಾಂಶಗಳು | 70–71 |
| 7 | ವಿಧಾನಮಂಡಲದ ಜಂಟಿ ಸಮಿತಿಗಳಿಗೆ ಹಾಗೂ ವಿಧಾನ ಪರಿಷತ್ತಿನ ಸ್ಥಾಯಿ ಸಮಿತಿಗಳಿಗೆ ಸದಸ್ಯರುಗಳನ್ನು ನಾಮನಿರ್ದೇಶನ ಮಾಡುವ ಬಗ್ಗೆ | 72 |
| 8 | 16ನೇ ವಿಧಾನಸಭೆಯ 7ನೇ ಅಧಿವೇಶನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ | 73–76 |
| 9 | ಕರ್ನಾಟಕ ವಿಧಾನಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ ಉಪ ಸಮಿತಿಯ ಅವಧಿಯನ್ನು ಒಂದು ತಿಂಗಳು ವಿಸ್ತರಿಸುವ ಬಗ್ಗೆ | 77 |
| 10 | Panel of Chairmen: ಸದಸ್ಯರನ್ನು ನಾಮನಿರ್ದೇಶನ ಮಾಡುವ ಬಗ್ಗೆ | 78 |
| 11 | ಕರ್ನಾಟಕ ವಿಧಾನ ಮಂಡಲದ ಸ್ಥಾಯಿ ಸಮಿತಿಗಳಿಗೆ ನಡೆಯುವ ಚುನಾವಣಾ ಕಾರ್ಯಕ್ರಮದ ವೇಳಾಪಟ್ಟಿ | 79–80 |
| 12 | ಕರ್ನಾಟಕ ಭೂ ಕಂದಾಯ(ಎರಡನೇ ತಿದ್ದುಪಡಿ) ವಿಧೇಯಕವನ್ನು ಪರಿಶೀಲಿಸಲು ಸಮಿತಿ ರಚನೆ | 81–82 |


**ಭಾಗ–3**

**ಸಂಸತ್ ಸುದ್ದಿಗಳು**


| | | |
|---|---|---|
| 1 | House disruptions have reduced, productivity has improved: Birla | 85–86 |
| 2 | Parliamentary panel finalises report on Income Tax Bill, 2025 | 86 |
| 3 | Dhankar submits his resignation to president | 86–87 |
| 4 | ಮಸೂದೆ ಸಹಿಗೆ ಕಾಲಮಿತಿ: ರಾಷ್ಟ್ರಪತಿ ಆಕ್ಷೇಪ ಪರಿಶೀಲನೆಗೆ ಸುಪ್ರೀಂ ಒಪ್ಪಿಗೆ | 87–88 |
| 5 | 103 ನಿಮಿಷದ ಸ್ವಾತಂತ್ರ್ಯ ದಿನ ಭಾಷಣ: ಮೋದಿ ದಾಖಲೆ | 88 |
| 6 | Lok Sabha passes Income Tax Bill; officials’ powers broadened | 88–89 |

| | ಭಾಗ–4<br>ಕೇಂದ್ರ ಸರ್ಕಾರ ಸುದ್ದಿಗಳು | |
|---|---|---|
| 1 | ಶೃಂಗ್ಲಾ ನಿಕಮ್ ಸೇರಿ ನಾಲ್ವರು ರಾಜ್ಯಸಭೆಗೆ | 93 |
| 2 | ತಲಾದಾಯ: ದೇಶದಲ್ಲೇ ಕರ್ನಾಟಕಕ್ಕೆ ನಂ.1 ಪಟ್ಟ | 93–94 |
| 3 | ಗಡಿ ಕಾಯುವ ಯೋಧರಿಗಿನ್ನು ಉಚಿತ ಕಾನೂನು ಸೇವೆ ಭಾಗ್ಯ | 94–95 |
| 4 | ನ್ಯಾಯದಾನ ವ್ಯಸ್ಥೆಯಲ್ಲಿ ದೇಶಕ್ಕೆ ಕರ್ನಾಟಕ ನಂ.1 | 95 |
| 5 | ಕ್ರೀಡಾ ಬಿಲ್ ಲೋಕಸಭೆಯಲ್ಲಿ ಪಾಸ್ | 96 |
| 6 | ಮನಿ ಗೇಮಿಂಗ್ ನಿಷೇಧ | 97 |
| 7 | Auto, pharma sectors cheer GST slabs; airlines say wings clipped | 97–98 |

| | ಭಾಗ–5<br>ರಾಜ್ಯ ಸರ್ಕಾರದ ಸುದ್ದಿಗಳು | |
|---|---|---|
| 1 | K’taka records Rs. 1.6L-crore GST revenue, 2nd highest in country | 101 |
| 2 | ರಾಜ್ಯದ ಮತ್ತೊಂದು ಜಿಲ್ಲೆ ಹೆಸರು ಬದಲು | 101–102 |
| 3 | ರಾಜ್ಯ ಸರ್ಕಾರದಿಂದ ದೃಷ್ಟಿ ಗ್ಯಾರಂಟಿ ಯೋಜನೆ | 102–103 |
| 4 | ದೇಶದ 2ನೇ ಉದ್ದದ ತೂಗು ಸೇತುವೆ ಉದ್ಘಾಟಿಸಿ ಹೆಸರು ಘೋಷಿಸಿದ ಗಡ್ಕರಿ | 103 |
| 5 | ಬಿ–ಖಾತಾಗಳಿಗೆ ಎ–ಖಾತಾ ಕಾನೂನು ಮಾನ್ಯತೆ | 103–104 |
| 6 | ರಾಜ್ಯಪಾಲರು 2 ಸಲ ತಿರಸ್ಕರಿಸಿದ 2 ಮಸೂದೆಗೆ ತಿದ್ದುಪಡಿ ಮಾಡಿದ ಸರ್ಕಾರ | 104–105 |
| 7 | SEP emphasises importance of ‘constitutional value Education’ | 105–107 |
| 8 | ದ್ವಿಭಾಷಾ ನೀತಿಗೆ ಶಿಫಾರಸ್ಸು | 107 |
| 9 | ಸಂಪುಟದಿದಂದ ರಾಜಣ್ಣ ಡಿಸ್‌ಮಿಸ್ | 108 |
| 10 | ಬೆಂಗಳೂರು ನಗರ ವಿವಿಗೆ ಮನಮೋಹನಸಿಂಗ್ ಹೆಸರು | 108 |
| 11 | ಸಮಾನತೆಗಾಗಿ ಯತ್ನಿಸಿದ ಅರಸು | 109 |
| 12 | ಕೇಂದ್ರದ ಅನುದಾನ, ತೆರಿಗೆ ಪಾಲು ಬಗ್ಗೆ ಶೀಘ್ರ ‘ಶ್ವೇತ ಪತ್ರ’ ಸಿಎಂ | 109 |
| 13 | Property registration fee doubled in State from 1% to 2% | 109–110 |
| 14 | ಗ್ರೇಟರ್ ಬೆಂಗಳೂರಿಗೆ 5 ಪಾಲಿಕೆ | 111 |
| 15 | ಪೊಲೀಸರ ಆರೋಗ್ಯ ಭಾಗ್ಯ ತಪಾಸಣೆಗೆ ‘ಖುಷಿ’ ಯೋಜನೆ | 111–112 |
| 16 | ಕಲ್ಯಾಣ ಕರ್ನಾಟಕಕ್ಕೆ ಪ್ರತ್ಯೇಕ ಸಚಿವಾಲಯ | 112 |
| 17 | ಮುನಿರತ್ನ ವಿರುದ್ಧ ಪ್ರಕರಣ ರದ್ದು | 112 |

| | ಭಾಗ – 6<br>ನ್ಯಾಯಾಲಯ ಸುದ್ದಿಗಳು | |
|---|---|---|
| 1 | ಬಿಹಾರದಲ್ಲಿ ಮತದಾರರ ವಿಶೇಷ ಪಟ್ಟಿ ಪರಿಷ್ಕರಣೆ ಸಂವಿಧಾನಬದ್ಧ: ಸುಪ್ರೀಂ | 115–116 |
| 2 | ಹೈಕೋರ್ಟ್ ಸಿಜೆ ನ್ಯಾ.ವಿಭು ಶಪಥ | 116–117 |
| 3 | ವಿಧಾನಸಭೆ ಕಾಗದಪತ್ರ ಸಮಿತಿಗೆ ಸೀಮಿತ ಅಧಿಕಾರ: ಹೈಕೋರ್ಟ್ | 117–118 |
| 4 | SC: Parl must review powers of speaker under anti-defection law | 118–119 |
| 5 | ಸ್ಪಂಧಿಸದ ಅಧಿಕಾರಿಗಳ ವರ್ಗಕ್ಕೆ ಶಾಸಕರ ಪತ್ರ ತಪ್ಪಲ್ಲ: ಕೋರ್ಟ್ | 119 |
| 6 | Governors can’t sit over Bills endlessly: SC judges | 119–121 |
| 7 | ಮಾಲೂರು ಶಾಸಕರ ಆಯ್ಕೆಗೆ ಕೋರ್ಟ್ ಕತ್ತರಿ | 121–122 |

| | ಭಾಗ – 7<br>ಹೊರರಾಜ್ಯ ಸುದ್ದಿಗಳು | |
|---|---|---|
| 1 | Bill passed to hike UP MLA’s salary by 30% | 125 |
| 2 | ಆಂಧ್ರದಲ್ಲೂ ಕರ್ನಾಟಕ ರೀತಿ ಸ್ತ್ರೀಯರಿಗೆ ಫ್ರೀ ಬಸ್ | 125 |
| 3 | AP Cabinet approves India’s 1st comprehensive circular economy policy | 126 |

| | ಭಾಗ – 8<br>ಅಂತರರಾಷ್ಟ್ರೀಯ ಸುದ್ದಿಗಳು | |
|---|---|---|
| 1 | Global South’s voice key to contemporary world’s progress: PM | 129 |
| 2 | ಮೋದಿಗೆ ಬ್ರೆಜಿಲ್‌ನ ಉನ್ನತ ನಾಗರಿಕ ಗೌರವ ಪ್ರದಾನ | 129–130 |
| 3 | ಜಗತ್ತಿನ ವಿಶ್ವಾಸಾರ್ಹ ನಾಯಕರಲ್ಲಿ ಪ್ರಧಾನಿ ನರೇಂದ್ರ ಮೋದಿ ನಂ.1 | 130 |
| 4 | ಎಸ್‌ಸಿಒದಲ್ಲಿ ಭಾರತ ವಿಕ್ರಮ | 130–131 |
| 5 | ನೇಪಾಳದಲ್ಲಿ ಸಚಿವ ಸಂಪುಟ ವಿಸ್ತರಣೆ, ಮೂವರ ಸೇರ್ಪಡೆ | 131–132 |
| 6 | ಎಚ್–1ಬಿ ವೀಸಾ ಶುಲ್ಕ 1 ಲಕ್ಷ ಡಾಲರ್‌ಗೆ ಹೆಚ್ಚಳ | 132–133 |

| | ಭಾಗ – 09<br>ಪ್ರಮುಖ ಲೇಖನಗಳು | |
|---|---|---|
| 1 | The free fall of moral leadership | 137–138 |
| 2 | ಕುಶಲಾಧಾರಿತ ಉದ್ಯೋಗ ಸೃಷ್ಟಿಯತ್ತ ಇಂದಿನ ನವ ಭಾರತ | 139–142 |
| 3 | The new Constitutiona Bill, the need for a balancing act | 143–145 |
| 4 | ಮೌಲ್ಯಾಧಾರಿತ ರಾಜಕಾರಣದ ಪ್ರತೀಕ | 146–148 |
| 5 | ಭ್ರಾತೃತ್ವದ ಮೂರ್ತರೂ ಡಾ.ಮೋಹನ್ ಜೀ | 148–150 |

| | ಭಾಗ – 10<br>ಶ್ರದ್ಧಾಂಜಲಿ | |
|---|---|---|
| 1 | ಡಾ:ಎನ್. ತಿಪ್ಪಣ್ಣ, ವಿಧಾನ ಪರಿಷತ್ತಿನ ಮಾಜಿ ಸದಸ್ಯರು | 153 |
| 2 | ಆರ್. ರಾಮಯ್ಯ, ವಿಧಾನ ಸಭೆಯ ಮಾಜಿ ಸದಸ್ಯರು | 154 |


ಸೂಚನೆ: – ಇಲ್ಲಿ ಆಯ್ಕೆ ಮಾಡಿರುವ ಲೇಖನಗಳು ಪ್ರಮುಖ ದಿನಪ್ರತಿಕೆಗಳಿಂದ ಆಯ್ದು ಪ್ರಕಟಿಸಲಾಗಿದೆ. ಇಲ್ಲಿನ ಅಭಿಪ್ರಾಯಗಳು ಸಂಪೂರ್ಣ ಲೇಖಕರದ್ದಾಗಿರುತ್ತದೆ.

# ಭಾಗ–1

# ವಿಧಾನ ಮಂಡಲ ಸುದ್ದಿಗಳು

# 1. ಸನ್ಮಾನ್ಯ ಸಭಾಪತಿಗಳು ಹಾಗೂ ಸನ್ಮಾನ್ಯ ಸಭಾಧ್ಯಕ್ಷರ ಕಾರ್ಯಕ್ರಮಗಳು

## i. ಸನ್ಮಾನ್ಯ ಸಭಾಪತಿಯವರಿಗೆ ಶುಭ ಹಾರೈಕೆ

ಸನ್ಮಾನ್ಯ ಸಭಾಪತಿಗಳಾದ ಶ್ರೀ ಬಸವರಾಜ ಎಸ್. ಹೊರಟ್ಟಿ ಅವರು ಕರ್ನಾಟಕ ವಿಧಾನಪರಿಷತ್ತಿನ ಸದಸ್ಯರಾಗಿ 45 ವರ್ಷಗಳನ್ನು ಪೂರ್ಣಗೊಳಿಸಿರುವ ಸುಸಂದರ್ಭದಲ್ಲಿ ಅವರ ಆಪ್ತ ಕಾರ್ಯದರ್ಶಿ ಹಾಗೂ ಆಪ್ತ ಸಿಬ್ಬಂದಿಯವರು ಶುಭ ಕೋರಿದರು.



## ii. ಶ್ರೀ ಚನ್ನಬಸವೇಶ್ವರ ಗುರುಕುಲದ ವಿದ್ಯಾರ್ಥಿಗಳಿಗೆ ಸನ್ಮಾನ

ದಿನಾಂಕ:05.07.2025ರಂದು ಬೆಂಗಳೂರಿನ ವಿಧಾನಸೌಧದಲ್ಲಿ ಗೌರವಾನ್ವಿತ ಸಭಾಪತಿಗಳಾದ ಸನ್ಮಾನ್ಯ ಶ್ರೀ ಬಸವರಾಜ ಎಸ್. ಹೊರಟ್ಟಿ ಅವರು ಬೀದರ್ ಜಿಲ್ಲೆಯ ಭಾಲ್ಕಿ ತಾಲ್ಲೂಕಿನ ಶ್ರೀ ಚನ್ನಬಸವೇಶ್ವರ ಗುರುಕುಲವು ದೇಶದಲ್ಲಿ ಜೆಇಇ ಅಡ್ವಾನ್ಸ್‌ನಲ್ಲಿ, ದೇಶದಲ್ಲಿ 15, ರಾಜ್ಯದಲ್ಲಿ ಮೊದಲನೇ ರ್‍ಯಾಂಕ್ ಪಡೆದ ಶಶಾಂಕ್ ಹಾಗೂ ನೀಟ್‌ನಲ್ಲಿ 165ನೇ ರ್‍ಯಾಂಕ್, ಕಲ್ಯಾಣ ಕರ್ನಾಟಕ ಭಾಗದಲ್ಲಿ ಪ್ರಥಮ ಸ್ಥಾನ ಪಡೆದ ವೇದಾಂತ ಅವರಿಗೆ ಸನ್ಮಾನ ಮಾಡಿ, ಶುಭಕೋರಿದರು. ಈ ಸಂದರ್ಭದಲ್ಲಿ ಭಾಲ್ಕಿ ಹಿರೇಮಠ ಸಂಸ್ಥಾನದ ಪೀಠಾಧಿಪತಿ ಪೂಜ್ಯ ಶ್ರೀ ಗುರುಬಸವ ಪಟ್ಟದೇವರು, ನಿರ್ದೇಶಕರಾದ ಶಶಿಧರ ಕೋಸಂಬೆ, ಪ್ರಾಚಾರ್ಯ ಬಸವರಾಜ ಮೋಳಕೇರೆ ಹಾಗೂ ಇತರರಿದ್ದರು.



## iii. ದಕ್ಷಿಣ ಕನ್ನಡ ಜಿಲ್ಲೆಯ ಅಭಿವೃದ್ಧಿ ಕುರಿತು ಸಭೆ

ಸನ್ಮಾನ್ಯ ಸಭಾಧ್ಯಕ್ಷರು ದಿನಾಂಕ:05.07.2025ರಂದು ದಕ್ಷಿಣ ಕನ್ನಡ ಜಿಲ್ಲೆಯ ಉಸ್ತುವಾರಿ ಸಚಿವರಾದ ಮಾನ್ಯ ಶ್ರೀ ದಿನೇಶ್ ಗುಂಡೂರಾವ್‌ರವರ ಉಪಸ್ಥಿತಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಮರಳು ಮತ್ತು ಕೆಂಪು ಕಲ್ಲು ಪೂರೈಕೆ, ಸಣ್ಣ ಕೈಗಾರಿಕೆಗಳು ಹಾಗೂ ಇತರೆ ವಿಷಯಗಳ ಬಗ್ಗೆ ದಕ್ಷಿಣ ಕನ್ನಡ ಜಿಲ್ಲಾಧಿಕಾರಿ(ಶ್ರೀ ದರ್ಶನ್ ಹೆಚ್.ವಿ), ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ಕಾರ್ಯದರ್ಶಿ (ಶ್ರೀ ಸಮೀರ್ ಶುಕ್ಲ) ಹಾಗೂ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ನಿರ್ದೇಶಕ(ಶ್ರೀ ಗಿರೀಶ್)ರೊಂದಿಗೆ ಸಭೆ ನಡೆಸಿ ಚರ್ಚಿಸಿದರು. ಈ ಸಭೆಯಲ್ಲಿ **CREDAI** ಸಂಸ್ಥೆಯವರು, ದಕ್ಷಿಣ ಕನ್ನಡ ಜಿಲ್ಲೆಯ ಗಣಿ ಗುತ್ತಿಗೆದಾರರ ಸಂಘದವರು ಹಾಗೂ ಸಂಬಂಧಪಟ್ಟ ವ್ಯಾಪಾರಸ್ಥರು ಪಾಲ್ಗೊಂಡರು.



## iv. ಸಂಸದೀಯ ಪ್ರಶಸ್ತಿ ಪ್ರದಾನ ಸಮಾರಂಭ

ದಿನಾಂಕ:07.07.2025ರಂದು ಹರಪನಹಳ್ಳಿಯ ಟಿಎಂಎಇ ಸಂಸ್ಥೆಯ ಜ್ಞಾನ ಗಂಗೋತ್ರಿ ಆವರಣದಲ್ಲಿ ಕರ್ನಾಟಕ ರಾಜಕೀಯ ಅಕಾಡೆಮಿ ವತಿಯಿಂದ ಆಯೋಜಿಸಿದ ಎಂ.ಪಿ ಪ್ರಕಾಶ್, ಸಂಸದೀಯ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಮಾನ್ಯ ಸಭಾಪತಿ ಶ್ರೀ ಬಸವರಾಜ ಎಸ್ ಹೊರಟ್ಟಿ ಅವರು ಪ್ರಶಸ್ತಿ ಸ್ವೀಕರಿಸಿ ಹಿಂದಿನ ಮತ್ತು ಇಂದಿನ ರಾಜಕಾರಣಿಗಳಿಗೆ, ಎಂ.ಪಿ. ಪ್ರಕಾಶ್‌ರವರು ಮಾದರಿ ವ್ಯಕ್ತಿಯಾಗಿದ್ದು, ಶ್ರೇಷ್ಠ ರಾಜಕಾರಣಿಯಾಗಿದ್ದರು ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿದರು.



## v. ಮಾನ್ಯ ಸಭಾಪತಿಗಳಿಗೆ ಸನ್ಮಾನ

ಮಾನ್ಯ ಸಭಾಪತಿಗಳಾದ ಶ್ರೀ ಬಸವರಾಜ ಎಸ್. ಹೊರಟ್ಟಿ ಅವರ ಬದುಕು, ಸಂಘಟನೆ, ಹೋರಾಟ, ಜೀವಮಾನ ಸಾಧನೆ ಹಾಗೂ ಸನ್ಮಾನ ಕುರಿತು ದಿನಾಂಕ:07.07.2025ರಂದು ಗದುಗಿನ ಶ್ರೀ ತೋಂಟದಾರ್ಯ ಮಠದಲ್ಲಿ ಡಾ. ತೋಂಟದಾರ್ಯ ಸಿದ್ದರಾಮ ಮಹಾಸ್ವಾಮಿಗಳ ಸಾನಿಧ್ಯದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಹಾಗೂ ವಿವಿಧ ಗಣ್ಯರ ಸಮ್ಮುಖದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದ ಅಪರೂಪದ ಸಂತಸದ ಸ್ಮರಣೀಯ ಕ್ಷಣಗಳು.





## vi. ಬೆಳ್ಳಿ ಮಹೋತ್ಸವ

ದಿನಾಂಕ:15.07.2025ರಂದು ಧಾರವಾಡದ ಜೆ.ಎಸ್.ಎಸ್. ಕಾಲೇಜು ಕ್ಯಾಂಪಸ್‌ನ ಉತ್ಸವ ಸಭಾಂಗಣದಲ್ಲಿ, ಧಾರವಾಡ ಮಕ್ಕಳ ಅಕಾಡೆಮಿ ವತಿಯಿಂದ ಬೆಳ್ಳಿ ಮಹೋತ್ಸವ–2025ರ ಅಂಗವಾಗಿ ಧಾರವಾಡದ ಜೆ.ಎಸ್.ಎಸ್ ಸಂಸ್ಥೆಗಳ ಸಮೂಹ ವಿದ್ಯಾಗಿರಿ ಇವರ ಸಹಯೋಗದಲ್ಲಿ ಆಯೋಜಸಿದ್ದ ಚಿಕ್ಕಮಕ್ಕಳ ಆರೋಗ್ಯ ತಪಾಸಣಾ ಸಮಾರಂಭವನ್ನು ಕರ್ನಾಟಕ ವಿಧಾನಪರಿಷತ್ತಿನ ಸಭಾಪತಿಗಳಾದ ಸನ್ಮಾನ್ಯ ಶ್ರೀ ಬಸವರಾಜ ಎಸ್. ಹೊರಟ್ಟಿಯವರು ಉದ್ಘಾಟಸಿ, ಸಂಸ್ಥೆಯವರು ನಿರಂತರ 25 ವರ್ಷಗಳಿಂದ 25,000 ಮಕ್ಕಳ ಆರೋಗ್ಯ ತಪಾಸಣೆಯನ್ನು ಕಾರ್ಯವನ್ನು ಹಮ್ಮಿಕೊಂಡಿದ್ದು ಹಾಗೂ

ನಿರಂತರ 25 ವರ್ಷಗಳಿಂದ ಮಾಡುತ್ತ ಬರುತ್ತಿರುವವುದು ತುಂಬಾ ಶ್ಲಾಘನೀಯವಾದದ್ದು. ಇವತ್ತಿನ ಮಕ್ಕಳು ಚೆನ್ನಾಗಿ ಊಟವನ್ನು ಮಾಡಿ ಅದನ್ನು ಕರಗತ ಮಾಡಿಕೊಳ್ಳಲು ವ್ಯಾಯಾಮ, ಆಟವನ್ನು ಆಡಬೇಕು. ಇದರಿಂದ ದೈಹಿಕವಾಗಿ ಸಧೃಡವಾದಾಗ ಮಾನಸಿಕವಾಗಿ ಕೂಡ ಸಧೃಡವಾಗುತ್ತದೆ ಎಂದು ಶ್ರೀಯುತರು ಹೇಳಿದರು. ಅಲ್ಲದೇ ಇಂದಿನ ಮಕ್ಕಳಿಗೆ ಓದಿನ ಜೊತೆಗೆ ಸಂಸ್ಕಾರ ಕೂಡ ಅಷ್ಟೇ ಮುಖ್ಯ, ಇಂತಹ ಪವಿತ್ರವಾದ ಕಾರ್ಯಕ್ರಮ ಆಯೋಜನೆ ಮಾಡಿದಂತಹ ಆಯೋಜಕರಿಗೆ ಧನ್ಯವಾದಗಳನ್ನು ಸಹ ತಿಳಿಸಿದರು.

ಈ ಸಮಾರಂಭದಲ್ಲಿ ಅಕಾಡೆಮಿ ಅಧ್ಯಕ್ಷರಾದ ಡಾ. ರಾಜನ್ ದೇಶಪಾಂಡೆ, ಡಾ. ಎಂ.ವೈ. ಸಾವಂತ್, ಡಾ. ವಿಜಯ ಕುಲಕರ್ಣಿ, ಡಾ.ನವೀನ, ಡಾ. ಆನಂದ, ಶ್ರೀಮತಿ ರೇಣು ಪಾಟೀಲ್, ಇತರರು ಉಪಸ್ಥಿತರಿದ್ದರು.




## vii. ವಿಧಾನ ಪರಿಷತ್ತಿನ ಇತಿಹಾಸದ ನಡೆಯ ಕುರಿತ ಕಿರುಚಿತ್ರ

ದಿನಾಂಕ:17.07.2025ರಂದು ವಿಕಾಸಸೌಧದ ಸಮ್ಮೇಳನ ಸಭಾಂಗಣದಲ್ಲಿ ವಿಧಾನ ಪರಿಷತ್ತಿನ ಉಗಮ, ನಡೆದು ಬಂದ ಹಾದಿ ಹಾಗೂ ಇತಿಹಾಸದ ನಡೆಯ ಕುರಿತ ಕಿರುಚಿತ್ರವನ್ನು ಮಾನ್ಯ ಸಭಾಪತಿ ಶ್ರೀ ಬಸವರಾಜ ಎಸ್. ಹೊರಟ್ಟಿ ಅವರು ಬಿಡುಗಡೆ ಮಾಡಿದರು. ಈ ಸಮಾರಂಭದಲ್ಲಿ ಮಾನ್ಯ ಕಾನೂನು ಸಚಿವರಾದ ಶ್ರೀ ಹೆಚ್. ಕೆ ಪಾಟೀಲ, ಸಣ್ಣ ನೀರಾವರಿ ಇಲಾಖೆಯ ಸಚಿವರಾದ ಶೀ ಎನ್ ಎಸ್ ಭೋಸರಾಜು, ವಿಧಾನ ಪರಿಷತ್ತಿನ ಸದಸ್ಯರುಗಳು ಹಾಗೂ ಅಧಿಕಾರಿ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.






## viii. ಮಕ್ಕಳ ಸ್ನೇಹಿ ಶಾಸಕರು

ದಿನಾಂಕ:17.07.2025ರಂದು ವಿಧಾನಸೌಧದ ಕೊಠಡಿ ಸಂಖ್ಯೆ:106ರಲ್ಲಿ ಹಮ್ಮಿಕೊಂಡಿದ್ದ ಮಕ್ಕಳ ಹಕ್ಕುಗಳಿಗಾಗಿ ಕರ್ನಾಟಕ ರಾಜ್ಯ ಶಾಸಕರ ವೇದಿಕೆಯ "ಮಕ್ಕಳ ಸ್ನೇಹಿ ಶಾಸಕರು" ಕಾರ್ಯಕ್ರಮದಲ್ಲಿ ಮಾನ್ಯ ಸಭಾಪತಿ ಶ್ರೀ ಬಸವರಾಜ ಎಸ್. ಹೊರಟ್ಟಿ, ಮಾನ್ಯ ಉಪಸಭಾಪತಿ ಶ್ರೀ ಎಂ.ಕೆ ಪ್ರಾಣೇಶ್ ಹಾಗೂ ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಶಾಸಕರುಗಳು ಪಾಲ್ಗೊಂಡಿದ್ದರು.





## ix. ಕರ್ನಾಟಕ ಪಬ್ಲಿಕ್ ಶಾಲೆಯ ಉದ್ಘಾಟನಾ ಸಮಾರಂಭ

ದಿನಾಂಕ:18.07.2025ರಂದು ಚನ್ನಪಟ್ಟಣ ತಾಲ್ಲೂಕಿನ ಹೊಂಗನೂರು ಗ್ರಾಮದಲ್ಲಿ ಕಣ್ವ ಫೌಂಡೇಶನ್ ಟ್ರಸ್ಟ್ ವತಿಯಿಂದ ಶ್ರೀಮತಿ ಚೆನ್ನಮ್ಮ ಮಂಜೇಗೌಡ ಕರ್ನಾಟಕ ಪಬ್ಲಿಕ್ ಶಾಲೆಯ ಉದ್ಘಾಟನಾ ಸಮಾರಂಭದಲ್ಲಿ ವಿಧಾನಪರಿಷತ್ತಿನ ಮಾನ್ಯ ಸಭಾಪತಿಗಳಾದ ಶ್ರೀ ಬಸವರಾಜ ಎಸ್. ಹೊರಟ್ಟಿ, ಮಾನ್ಯ ಉಪ ಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ.ಶಿವಕುಮಾರ್, ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವರಾದ ಶ್ರೀ ಮಧು ಬಂಗಾರಪ್ಪ ಹಾಗೂ ಶಾಸಕರು ಉಪಸ್ಥಿತರಿದ್ದರು.







## x. ಮಾನ್ಯ ಸಭಾಪತಿಗಳು ಮಾನ್ಯ ಮುಖ್ಯಮಂತ್ರಿಗಳೊಂದಿಗೆ

ವಿಧಾನಸೌಧದ ಮಾನ್ಯ ಸಭಾಪತಿಯವರ ಕಛೇರಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಶ್ರೀ ಬಸವರಾಜ ಎಸ್. ಹೊರಟ್ಟಿ ಅವರು ಕುಶಲೋಪರಿ ಮಾತುಕತೆಯೊಂದಿಗೆ ಉಪಾಹಾರ ಸವಿದರು.





## xi. ನ್ಯಾಯಮೂರ್ತಿಗಳ ಪ್ರಮಾಣ ವಚನ

ದಿನಾಂಕ:19.07.2025ರಂದು ರಾಜಭವನದ ಗಾಜಿನ ಮನೆಯಲ್ಲಿ ಹಮ್ಮಿಕೊಳ್ಳಲಾದ ಸಮಾರಂಭದಲ್ಲಿ ಗೌರವಾನ್ವಿತ ರಾಜ್ಯಪಾಲರಾದ ಶ್ರೀ ಥಾವರ್ ಚೆಂದ್ ಗೆಹ್ಲೋಟ್ ಅವರು ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳಾಗಿ, ನ್ಯಾಯಮೂರ್ತಿಗಳಾದ ಶ್ರೀ ಜಯಂತ್ಯಾನಂದ ಮತ್ತು ಶ್ರೀ ದಿನೇಶ್ ಮಾಸಿಂಗ್ ಅವರಿಗೆ ಅಧಿಕಾರ ಪ್ರಮಾಣವಚನ ಬೋಧಿಸಿದರು.






ಈ ಸಂದರ್ಭದಲ್ಲಿ ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಗಳಾದ ಶ್ರೀ ಬಸವರಾಜ ಎಸ್. ಹೊರಟ್ಟಿ, ಕರ್ನಾಟಕ ಉಚ್ಚನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾದ ವಿಭುಬಖ್ರು, ನ್ಯಾಯಮೂರ್ತಿಗಳಾದ ವಿ. ಕಾಮೇಶ್ವರರಾವ್, ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳ ಇಲಾಖೆ ಹಾಗೂ ಪ್ರವಾಸೋದ್ಯಮ ಇಲಾಖೆ ಸಚಿವರಾದ ಶ್ರೀಹೆಚ್.ಕೆ.ಪಾಟೀಲ್, ಮಾನ್ಯ ಕಂದಾಯ ಸಚಿವರಾದ ಶ್ರೀ ಕೃಷ್ಣಬೈರೇಗೌಡ, ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಕಾರ್ಯದರ್ಶಿ ಕೆ.ಜಿ. ಜಗದೀಶ್, ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳು, ಹಿರಿಯ ವಕೀಲರು, ಇತರೆ ಗಣ್ಯರು ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.





## xii. ಪ್ರತಿಭಾ ಪುರಸ್ಕಾರ ಕಾರ್ಯಕ್ರಮ

ಸನ್ಮಾನ್ಯ ಸಭಾಧ್ಯಕ್ಷರು ದಿನಾಂಕ:24.07.2025ರಂದು ಕರ್ನಾಟಕ ವಿಧಾನ ಸಭೆ ಸಚಿವಾಲಯ ನೌಕರರ ಸಂಘದ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಭಾಗವಹಿಸಿ ಸಚಿವಾಲಯದ ಅಧಿಕಾರಿ/ಸಿಬ್ಬಂದಿಗಳ ಮಕ್ಕಳಿಗೆ ಪ್ರಶಸ್ತಿಗಳನ್ನು ವಿತರಿಸಿ ಹಿತವಚನ ನೀಡಿದರು.










## xiii. ಕಾಮನ್‌ವೆಲ್ತ್ ಪಾರ್ಲಿಮೆಂಟರಿ ಅಸೋಸಿಯೇಷನ್‌ನ ಭಾರತ ವಲಯದ ಸಮ್ಮೇಳನದ ಪೂರ್ವ ಸಭೆ

ಸೆಪ್ಟಂಬರ್ 09 ಮತ್ತು 10ನೇ ದಿನಾಂಕಗಳಂದು ಕರ್ನಾಟಕ ವಿಧಾನ ಮಂಡಲದ ವತಿಯಿಂದ ಆಯೋಜಿಸಲ್ಪಡುವ 11ನೇ ಕಾಮನ್‌ವೆಲ್ತ್ ಪಾರ್ಲಿಮೆಂಟರಿ ಅಸೋಸಿಯೇಷನ್‌ನ ಭಾರತ ವಲಯದ ಸಮ್ಮೇಳನ ಕುರಿತು ಸನ್ಮಾನ್ಯ ಸಭಾಧ್ಯಕ್ಷರು ಲೋಕಸಭಾ ಸಚಿವಾಲಯದ ಅಧಿಕಾರಿಗಳೊಂದಿಗೆ, ವಿಧಾನ ಸಭೆ ಕಾರ್ಯದರ್ಶಿ ಹಾಗೂ ಇತರೆ ಅಧಿಕಾರಿಗಳ ಉಪಸ್ಥಿತಿಯಲ್ಲಿ ದಿನಾಂಕ: 25.07.2025ರಂದು ಸಭೆ ನಡೆಸಿ ಚರ್ಚಿಸಿದರು.



## xiv. ಸನ್ಮಾನ್ಯ ಸಭಾಧ್ಯಕ್ಷರ ನೇತೃತ್ವದ ನಿಯೋಗವು ಸ್ಟ್ಯಾನ್‌ಪೋರ್ಡ್ ವಿಶ್ವವಿದ್ಯಾಲಯ ಭೇಟಿ

ದಿನಾಂಕ:03.08.2025ರಂದು ವಿಧಾನಸಭೆ ಸ್ಪೀಕರ್ ಯು.ಟಿ. ಖಾದರ್ ನೇತೃತ್ವದ ನಿಯೋಗವು, ಮಂಜುನಾಥ್ ಭಂಡಾರಿ, ಪಿ.ಎಂ.ಅಶೋಕ್ ಪಟ್ಟಣ್, ದಿನೇಶ್ ಗೂಳಿಗೌಡ, ಶ್ರೀನಿವಾಸ್ ಮಾನೆ, ಗುರುರಾಜ್ ಗಂಟಿಹೊಳೆ, ಸುರೇಶ್ ಬಾಬು, ಅಶೋಕ್ ರೈ ಮತ್ತು ಗುರ್ಮೆ ಸುರೇಶ್ ಶೆಟ್ಟಿ ಅವರೊಂದಿಗೆ ಅಮೆರಿಕದ ಕ್ಯಾಲಿಫೋರ್ನಿಯಾದ ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿತು. ತಮ್ಮ ಭೇಟಿಯ ಭಾಗವಾಗಿ, ನಿಯೋಗವು ಸ್ಟ್ಯಾನ್‌ಫೋರ್ಡ್ ಸ್ಕೂಲ್ ಆಫ್ ಮೆಡಿಸಿನ್‌ನ ಸಹಾಯಕ ಪ್ರಾಧ್ಯಾಪಕ ಮತ್ತು ಸ್ಟ್ಯಾನ್‌ಫೋರ್ಡ್ ಬೈಯರ್ಸ್ ಸೆಂಟರ್ ಫಾರ್ ಬಯೋಡಿಸೈನ್‌ನಲ್ಲಿ ಗ್ಲೋಬಲ್ ಔಟ್ರೀಚ್‌ನ ನಿರ್ದೇಶಕ ಡಾ.ಅನುರಾಗ್ ಮೈರಾಲ್ ನೇತೃತ್ವದ ಬಯೋಡಿಸೈನ್ ಲ್ಯಾಬ್‌ಗೆ ಭೇಟಿ ನೀಡಿದರು. ಶಾಸಕರ ಈ ಭೇಟಿಯನ್ನು ಮಂಜುನಾಥ್ ಭಂಡಾರಿ ಅವರು ಪ್ರಮುಖ ಉದ್ಯಮಿ ಜೆಪಿ ಅವರ ಬೆಂಬಲದೊಂದಿಗೆ ಸಂಯೋಜಿಸಿದ್ದರು.



## XV. ಸಭಾಧ್ಯಕ್ಷರ ನೇತೃತ್ವದ ನಿಯೋಗ –"NCSL's Legislative Summit-2025"

ದಿನಾಂಕ: 4ರಿಂದ 06ನೇ ಆಗಸ್ಟ್ 2025ರವರೆಗೆ ಅಮೇರಿಕ ದೇಶದ ಬೋಸ್ಟನ್‌ನಲ್ಲಿ ನಡೆಯಲಿರುವ **"NCSL's Legislative Summit-2025"**ರಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಸನ್ಮಾನ್ಯ ಸಭಾಪತಿಯವರ ಹಾಗೂ ಸನ್ಮಾನ್ಯ ಸಭಾಧ್ಯಕ್ಷರ ನೇತೃತ್ವದ ನಿಯೋಗವು ಸ್ಯಾನ್‌ಫ್ರಾನ್ಸಿಸ್ಕೋದಲ್ಲಿ ಅಧ್ಯಯನ ಪ್ರವಾಸ ಕೈಗೊಂಡಿತು.






UNIVERSAL STUDIOS
Hollywood


BAKERY AND DELI




PARKING




FOUR POINTS
BY SHERATON



## xvi. ವಿಧಾನಸಭಾ ಅಧಿವೇಶನದ ಪೂರ್ವಸಿದ್ದತಾ ಪರಿಶೀಲನೆ

ದಿನಾಂಕ:11.08.2025 ರಿಂದ 22.08.2025ರವರೆಗೆ ನಡೆದ ವಿಧಾನಸಭಾ ಅಧಿವೇಶನದ ನಿಮಿತ್ತ ಸನ್ಮಾನ್ಯ ಸಭಾಧ್ಯಕ್ಷರು ಪೂರ್ವಸಿದ್ದತಾ ಕಾರ್ಯಗಳ ಕುರಿತು ಪರಿಶೀಲನೆ ನಡೆಸಿದರು.







## xvii. ವಿಧಾನಸಭಾ ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆ

ದಿನಾಂಕ:11.08.2025 ರಿಂದ 22.08.2025ರವರೆಗೆ ನಡೆದ ಅಧಿವೇಶನದ ಕುರಿತು ಕಾರ್ಯಕಲಾಪಗಳನ್ನು ನಡೆಸುವ ಬಗ್ಗೆ ದಿನಾಂಕ:11.08.2025ರಂದು ಸನ್ಮಾನ್ಯ ಸಭಾಧ್ಯಕ್ಷರ ಅಧ್ಯಕ್ಷತೆಯಲ್ಲಿ ವಿಧಾನಸಭಾ ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆ ನಡೆಯಿತು.





## xviii. ರಕ್ಷಾಬಂಧನ

ದಿನಾಂಕ 11ನೇ ಆಗಸ್ಟ್ 2025ರಂದು ರಕ್ಷಾಬಂಧನದ ನಿಮಿತ್ತ ಬ್ರಹ್ಮಕುಮಾರೀಸ್ ಸಂಸ್ಥೆಯವರು ಸನ್ಮಾನ್ಯ ಸಭಾಧ್ಯಕ್ಷರಿಗೆ ರಾಖಿ ಕಟ್ಟಿದರು.





## xix. ದಕ್ಷಿಣ ಕನ್ನಡ ಜಿಲ್ಲಾ ಅಭಿವೃದ್ಧಿ ಸಭೆ

ದಿನಾಂಕ:12.08.2025ರಂದು ನಡೆದ ಸಭೆಯಲ್ಲಿ ಸನ್ಮಾನ್ಯ ಸಭಾಧ್ಯಕ್ಷರು, ದಕ್ಷಿಣ ಕನ್ನಡ ಜಿಲ್ಲೆಯ ಉಸ್ತುವಾರಿ ಸಚಿವರು ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಾದ ಶ್ರೀ ದಿನೇಶ್ ಗುಂಡೂರಾವ್‌ರವರು, ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರಾದ ಶ್ರೀ ಮಂಕಾಳ ಎಸ್. ವೈದ್ಯರವರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರಾದ ಶ್ರೀಮತಿ ಲಕ್ಷ್ಮೀ ಹೆಬ್ಬಾಳ್ಕರ್‌ರವರು ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಶ್ರೀ ಪ್ರಿಯಾಂಕ್ ಖರ್ಗೆರವರುಗಳ ಉಪಸ್ಥಿತಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದಂತೆ ಮರಳು ಮತ್ತು ಕೆಂಪು ಕಲ್ಲು ಪೂರೈಕೆ, ಸಣ್ಣ ಕೈಗಾರಿಕೆ ಹಾಗೂ ಇತರೆ ವಿಷಯಗಳ ಬಗ್ಗೆ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ಕಾರ್ಯದರ್ಶಿ(ಶ್ರೀ ಸಮೀರ್ ಶುಕ್ಲ), ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ ಹಾಗೂ ಇತರೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಚರ್ಚೆ ನಡೆಸಿದರು. ಈ ಸಭೆಯಲ್ಲಿ **CREDAI** ಸಂಸ್ಥೆಯವರು, ದಕ್ಷಿಣ ಕನ್ನಡ ಜಿಲ್ಲೆಯ ಗಣಿ ಗುತ್ತಿಗೆದಾರರ ಸಂಘದವರು ಹಾಗೂ ಸಂಬಂಧಪಟ್ಟ ವ್ಯಾಪಾರಸ್ಥರು ಭಾಗವಹಿಸಿದರು.

ಸದರಿ ಸಭೆಯಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ(KTCP) ಕಾಯ್ದೆಯಡಿ ಕರಾವಳಿ ಕರ್ನಾಟಕದ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಿಗೆ ಪ್ರತ್ಯೇಕ ವಲಯ ನಿಯಮಾವಳಿ ಕೋಸ್ಟಲ್ ಜೋನ್ ರೆಗ್ಯುಲೇಶನ್ಸ್(CZR) ರಚಿಸುವ ಬಗ್ಗೆ ಹಾಗೂ ಪ್ರಸ್ತುತ ಗ್ರಾಮ ಪಂಚಾಯತ್ ವ್ಯಾಪ್ತಿಗಳಲ್ಲಿ ಜಾರಿಯಲ್ಲಿರುವ ವಿನ್ಯಾಸ(4ಕೆ) ಅನುಮೋದನೆ ನಿಯಮಗಳಲ್ಲಿ ಸರಳೀಕರಣ ಮಾಡುವ ಬಗ್ಗೆ ಸಹ ಚರ್ಚಿಸಿದರು.







## XX. ಶಾಲಾ ಶಿಕ್ಷಣ ಕುರಿತು ಚರ್ಚೆ

ದಿನಾಂಕ.13.08.2025ರಂದು ಶಾಲಾಶಿಕ್ಷಣ ಇಲಾಖೆಯ ವಿವಿಧ ಸಮಸ್ಯೆಗಳ ಕುರಿತು ಚರ್ಚಿಸಲು ವಿಧಾನಪರಿಷತ್ ಸಭಾಪತಿ ಮಾನ್ಯ ಶ್ರೀ ಬಸವರಾಜ ಎಸ್. ಹೊರಟ್ಟಿರವರ ಅಧ್ಯಕ್ಷತೆಯಲ್ಲಿ ವಿಧಾನಸೌಧದಲ್ಲಿ ಶಿಕ್ಷಕ ಮತ್ತು ಪದವೀಧರ ಕ್ಷೇತ್ರದ ವಿಧಾನಪರಿಷತ್‌ನ ಸದಸ್ಯರ ಸಮ್ಮುಖದಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಸಚಿವ ಶ್ರೀಮಧು ಬಂಗಾರಪ್ಪನವರೊಂದಿಗೆ ಸವಿಸ್ತಾರವಾಗಿ ಚರ್ಚೆ ನಡೆಸಲಾಯಿತು.

ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿನ 2020ರವರೆಗಿನ ಖಾಲಿ ಹುದ್ದೆಗಳ ಭರ್ತಿ ಕುರಿತು ಕೈಗೊಂಡಿರುವ ಪ್ರಕ್ರಿಯೆ ಬಗ್ಗೆ ಸಚಿವ ಶ್ರೀಮಧುಬಂಗಾರಪ್ಪ ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಮಧ್ಯ ಪ್ರವೇಶಿಸಿದ ಸಭಾಪತಿ ಶ್ರೀ ಬಸವರಾಜ ಎಸ್. ಹೊರಟ್ಟಿ ಈಗಾಗಲೇ ಮಂಜೂರಾದ ಹುದ್ದೆಗಳಲ್ಲಿಯ ಶಿಕ್ಷಕರ ನಿವೃತ್ತಿಯಿಂದ ತೆರವಾಗುವ ಹುದ್ದೆಗಳ ಭರ್ತಿಗೆ ಆರ್ಥಿಕ ಇಲಾಖೆ ಅನುಮತಿ ಏಕೆಬೇಕು ಎಂದು ಪ್ರಶ್ನಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ಶ್ರೀಮಧುಬಂಗಾರಪ್ಪ ಈ ಸಮಸ್ಯೆ ಪರಿಹಾರಕ್ಕೆ ವೇತನಾನುದಾನ ಅಧಿನಿಯಮಕ್ಕೆ ತಿದ್ದುಪಡಿ ತರುವ ಕುರಿತು ಚಿಂತಿಸಲಾಗುವುದು ಎಂದರು. ಶಿಕ್ಷಕ ಮತ್ತು ಪದವೀಧರ ಕ್ಷೇತ್ರದ ಶಾಸಕರುಗಳು, ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ, ಆಯುಕ್ತರು ಹಾಗೂ ಪದವಿಪೂರ್ವ ಶಿಕ್ಷಣ ಇಲಾಖೆಯ ನಿರ್ದೇಶಕರು ಸೇರಿದಂತೆ ಹಿರಿಯ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.





## xxi. ಉನ್ನತ ಶಿಕ್ಷಣ ಕುರಿತು ಚರ್ಚೆ

ದಿನಾಂಕ:18.08.2025ರಂದು ಉನ್ನತ ಶಿಕ್ಷಣ ಇಲಾಖೆಯ ವಿವಿಧ ಸಮಸ್ಯೆಗಳ ಕುರಿತು ಚರ್ಚಿಸಲು ವಿಧಾನಪರಿಷತ್ ಸಭಾಪತಿ ಮಾನ್ಯ ಶ್ರೀ ಬಸವರಾಜ ಎಸ್. ಹೊರಟ್ಟಿ ಇವರ ಅಧ್ಯಕ್ಷತೆಯಲ್ಲಿ ವಿಧಾನಸೌಧದಲ್ಲಿ ಶಿಕ್ಷಕ ಮತ್ತು ಪದವೀಧರ ಕ್ಷೇತ್ರದ ವಿಧಾನಪರಿಷತ್ ಸದಸ್ಯರ ಸಮ್ಮುಖದಲ್ಲಿ ಉನ್ನತಶಿಕ್ಷಣ ಇಲಾಖೆಯ ಸಚಿವ ಡಾ. ಎಂ.ಸಿ. ಸುಧಾಕರ್ ಅವರೊಂದಿಗೆ ಸುದೀರ್ಘವಾಗಿ ಚರ್ಚೆ ನಡೆಸಲಾಯಿತು.

ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತಾಲಯದಲ್ಲಿಯ ಸಿಬ್ಬಂದಿಗಳ ವರ್ತನೆ, ಭ್ರಷ್ಟಾಚಾರಗಳ ಆರೋಪಗಳ ಬಗ್ಗೆ ಹಲವು ಸದಸ್ಯರುಗಳ ಪ್ರಸ್ತಾಪ ಹಿನ್ನಲೆಯಲ್ಲಿ ಈ ಕುರಿತಂತೆ ಕೂಡಲೇ ಆಂತರಿಕ ತನಿಖೆ ನಡೆಸಬೇಕು. ಆರೋಪ ಇರುವ ಸಿಬ್ಬಂದಿಗಳನ್ನು ತತ್‌ಕ್ಷಣವೇ ಎತ್ತಂಗಡಿ ಮಾಡಬೇಕು ಎಂದು ಸಭಾಪತಿ ಶ್ರೀ ಬಸವರಾಜ ಎಸ್. ಹೊರಟ್ಟಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಶಿಕ್ಷಕ, ಪದವೀಧರ ಕ್ಷೇತ್ರದ ಶಾಸಕರುಗಳು, ಉನ್ನತ ಶಿಕ್ಷಣ ಇಲಾಖೆಯ ಪ್ರಧಾನಕಾರ್ಯದರ್ಶಿ, ಆಯುಕ್ತರು ಹಾಗೂ ಉನ್ನತ ಶಿಕ್ಷಣ ಇಲಾಖೆಯ ನಿರ್ದೇಶಕರು ಸೇರಿದಂತೆ ಹಿರಿಯ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.



## xxii. ಕರಾವಳಿ ಅಭಿವೃದ್ಧಿ ಕುರಿತು ಸಭೆ

ದಿನಾಂಕ: 22 ಆಗಸ್ಟ್ 2025ರಂದು ಸನ್ಮಾನ್ಯ ಸಭಾಧ್ಯಕ್ಷರ ನೇತೃತ್ವದಲ್ಲಿ ಸನ್ಮಾನ್ಯ ಉಪ ಮುಖ್ಯಮಂತ್ರಿಗಳು, ಸನ್ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಸಚಿವರು, ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಅವರುಗಳ ಉಪಸ್ಥಿತಿಯಲ್ಲಿ ಕರಾವಳಿ ಪ್ರದೇಶದ ಜೋನಲ್ ರಿಗ್ರೇಷನ್, ಪ್ರವಾಸೋದ್ಯಮ ಹಾಗೂ ಇತರೆ ಸಂಬಂಧಿತ ವಿಷಯಗಳ ಬಗ್ಗೆ ಚರ್ಚೆ ನಡೆಯಿತು.







## xxiii. "ಶರ್ಮಿಷ್ಠೆ" ನಾಟಕ ಪ್ರದರ್ಶನ

ದಿನಾಂಕ:22.08.2025ರಂದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಡಾ. ಉಮಾಶ್ರೀ ಶಾಸಕರು, ಕರ್ನಾಟಕ ವಿಧಾನ ಪರಿಷತ್ತು ಇವರ "ಶರ್ಮಿಷ್ಠೆ" ನಾಟಕ ಪ್ರದರ್ಶನವನ್ನು ಮಾನ್ಯ ಸಭಾಪತಿ ಶ್ರೀ ಬಸವರಾಜ ಎಸ್. ಹೊರಟ್ಟಿ, ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಶಾಸಕರುಗಳು ವೀಕ್ಷಿಸಿದರು.



## xxiv. ದೆಹಲಿ ವಿಧಾನಸಭಾ ಭವನದಲ್ಲಿ ವಿಠಲ್‌ಭಾಯಿ ಪಟೇಲ್ ಸ್ಮರಣೋತ್ಸವ

ಶ್ರೀ ಯು.ಟಿ.ಖಾದರ್ ಫರೀದ್, ಸನ್ಮಾನ್ಯ ಸಭಾಧ್ಯಕ್ಷರು, ಕರ್ನಾಟಕ ವಿಧಾನಸಭೆ ಅವರು ದೆಹಲಿ ವಿಧಾನಸಭೆಯ ವತಿಯಿಂದ ದಿನಾಂಕ 24 ಮತ್ತು 25ರ ಆಗಸ್ಟ್ 2025ರಂದು ಶ್ರೀ ವಿಠಲ್‌ಭಾಯಿ ಪಟೇಲ್ ಅವರಿಗೆ ಗೌರವ ಸೂಚಿಸುವ ಸ್ಮರಣೋತ್ಸವ ನಿಮಿತ್ತ ನಡೆದ ಸಮ್ಮೇಳನದಲ್ಲಿ ಭಾಗವಹಿಸಿದರು.









ಸಮ್ಮೇಳನದಲ್ಲಿ ಭಾಗವಹಿಸಿ ಸನ್ಮಾನ್ಯ ಸಭಾಧ್ಯಕ್ಷರು "ಭಾರತ–ಪ್ರಜಾಸತ್ತಾತ್ಮಕತೆಯ ತಾಯಿ" "India–Mother of Democracy" ಎಂಬ ವಿಷಯದ ಬಗ್ಗೆ ಚರ್ಚೆಯಲ್ಲಿ ಭಾಗವಹಿಸಿ ತಮ್ಮ ನಿಲುವನ್ನು ಮಂಡಿಸಿದರು.

**"Historic Speech by Hon'ble Shri U.T. Khader at the Delhi Legislative Assembly"India – The Mother of Democracy**



Respected Shri Vijender Gupta ji, Hon'ble Speaker, Delhi Legislative Assembly, Presiding Officers of the State Legislatures, Secretaries, and all the distinguished dignitaries gathered here,

I stand before you today not merely as a representative of

Karnataka, but as the voice, the strength, and the reflection of the collective hopes and aspirations of countless people, who believe in the power of democracy and the spirit of India that unites us all.

I carry within me

- Every dream of the farmer, who toils in the fields,

- Every prayer of the mother who nurtures her family with sacrifice, and

- Every ambition of the youth who look towards the future with confidence.

At the very outset, I extend my sincere gratitude to Shri Vijender Gupta, The Hon'ble Speaker of the Delhi Legislative Assembly, for convening this historic conference "India – The Mother of Democracy", in commemoration of the Architect of India's parliamentary spirit Shri Vithalbhai Jhaverbhai Patel.

As the first elected President of the Central Legislative Assembly, Shri Vithalbhai Patel ji showed the British that Indians could run institutions with dignity, discipline, and determination.

- He made the Assembly a temple of democracy, not a rubber stamp of rulers.

- He gave courage to elected members to question, to debate, to demand accountability.

- He proved that in India, the people's voice is supreme.

Therefore, when we speak of India's democratic journey, we cannot forget Vithalbhai Patel, a pioneer of people's power and a torchbearer of parliamentary traditions.

As the Speaker of the Karnataka Legislative Assembly, I feel privileged and blessed to participate in this conference with the theme meaningful theme "India – Mother of Democracy" Because,

- Thousands of years ago, when the world was still searching for systems of governance, our ancestors, our rishis and our Janapadas were already laid the foundations of collective decision-making.

- While others were experimenting, India was practicing.

- While others were imagining models of governance, India had already nurtured vibrant sabhas and samitis.

Today, as we gather in this historic Delhi Assembly, I am reminded of the journey of our democracy. This Assembly is not just a House of debate.

- Every decision here echoes across the nation

- Every law passed here reflects the dreams of crores of citizens.

- It is a temple of people's aspirations.

- It is here that the voice of Delhi's citizens

– Former, labourers, shopkeeper, teacher, students, finds expression.

- It is a forum where Opinions may differ, views may clash, But at the end of the day, all are united by one mission – Nation First.

This is the spirit that keeps India strong, this is the spirit that keeps India moving forward. It tells us that democracy is not about centralisation of power, but about empowerment at every level.

It was here in the city of Delhi, that our freedom struggle found its momentum. From the Khilafat Movement to the voices rising at Jama Masjid, every caste, every creed, every community stood together. Mahatma Gandhi linked it with the Non-Cooperation Movement, giving our India's freedom struggle a united, national identity.

From North to South, from East to West, every state, every region in India, carried the seed of democracy. In Karnataka, as early as the 1880s, under the Mysore Maharaja, elected representatives gathered in assemblies and raised their voice against the British.

The first instance of reservations observed in India decades before the Constitution. To bring social justice and equality in society, in 1918, Mysore Maharaja Nalvadi Krishnaraja Wodeyar appointed the Miller Committee to study the representation. Government jobs and education opened for the oppressed. This pioneering step became the inspiration for social justice across India. When Dr. B. R. Ambedkar framed our Constitution, Mysore's model was remembered with pride.

We also know very well that as early as the 12th century, the great social reformer Jagadguru Basavanna established the Anubhava Mantapa, which is considered as the world's first Parliament. This stands as a living proof before the world, that, India's democracy is not

a gift from the outside world. It is originated in our soil, nurtured by our samskaras, and inscribed in our very DNA.

From the smallest panchayat in a remote village to the grand Lok Sabha in Delhi, every Indian carries with pride, the responsibility of being a stakeholder in governance.

For us, democracy is not merely a system of rule, it is our faith, it is our strength, it is our identity. That is why India is not just the world's largest democracy; India is, indeed, the Mother of Democracy.

When India got independence, the world doubted whether a poor, diverse, multi-lingual nation could survive as a democracy. They said, this country needs dictatorship, this country cannot manage universal franchise.

But what happened?

Today, India has proven them wrong, Not in words, But in action.

- India showed that diversity is not a weakness

-it is our strength.

- Unity does not mean uniformity. Unity means harmony.

- Harmony does not mean erasing our differences.

It means that despite our differences, we respect, we accept, and we walk together. That is the Indian way. That is the Indian tradition. From Kashmir to Kanyakumari, from Kutch to Kamrup, every language, every culture, every tradition adds a new colour to the canvas of India, adds a new glory to the story of India. Even now, seventy-five years later, India's democracy is not only alive, - It is thriving, it is shining, it is guiding. - It is more vibrant, more robust, and more inspiring for the entire world today. India's democracy is not just about elections. - It is about participation. It is about responsibility. - It is about creating opportunities where the poorest of the poor feel empowered. From Gram Sabha to Rajya Sabha, from Panchayat to Parliament, democracy gives equal respect to every voice. It gives every citizen the right to dream, and the strength to achieve. Even a child from the most backward family can rise to the highest position. In this democracy, dreams are not limited by birth, they are powered by effort, by values, by determination. This is the strength of Indian democracy, where no one is too small to be heard, and no one is too big to be questioned. Brothers and Sisters/Dear Friends, When

the world looks at India, They see not just a nation of 140 crore people. - They see the courage of democracy. - They see a civilisation that taught Vasudhaiva Kutumbakam – the world is one family. Let this Assembly remind us every day that, our duty is not only to pass laws but - To uphold the spirit of justice, - To protect equality, and - To safeguard liberty. Above all, our duty is to be the voice of the voiceless, The strength of the powerless, The hope of the hopeless and the faith of the forgotten. India is not merely running a democracy – India is inspiring the world with democracy.

Jai Hind! Jai Bharat!

**ದೆಹಲಿ ವಿಧಾನ ಸಭೆಯಲ್ಲಿ ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀ ಯು.ಟಿ ಖಾದರ್ ಅವರಿಂದ ಐತಿಹಾಸಿಕ ಭಾಷಣ:**

ದೆಹಲಿ ವಿಧಾನ ಸಭೆಯಲ್ಲಿ, ಬ್ರಿಟಿಷ್ ಭಾರತದಲ್ಲಿ ಕೇಂದ್ರ ಶಾಸಕಾಂಗ ಸಭೆಯ ಮೊದಲ ಚುನಾಯಿತ ಅಧ್ಯಕ್ಷರಾಗಿದ್ದ ಶ್ರೀ ವಿಠಲಭಾಯಿ ಪಟೇಲ್ ಅವರ ಸ್ಮರಣಾರ್ಥ ನಡೆದ "ಭಾರತ – ಪ್ರಜಾಪ್ರಭುತ್ವದ ತಾಯಿ" ಎನ್ನುವ ಸಮ್ಮೇಳನದಲ್ಲಿ, ಕರ್ನಾಟಕ ರಾಜ್ಯ ವಿಧಾನಸಭೆಯ ಗೌರವಾನ್ವಿತ ಸಭಾಧ್ಯಕ್ಷರಾದ ಸನ್ಮಾನ್ಯ ಶ್ರೀ ಯು.ಟಿ. ಖಾದರ್ ಅವರು ಭಾಗವಹಿಸಿ, ಅದ್ಭುತ ಭಾಷಣ ಮಾಡಿದರು.

ಸಮ್ಮೇಳನವನ್ನುದ್ದೇಶಿಸಿ ಮಾತನಾಡಿದ ಅವರು, "ಪ್ರಜಾಪ್ರಭುತ್ವವು ಕೇವಲ ನಮ್ಮ ಆಡಳಿತ ವ್ಯವಸ್ಥೆಯಲ್ಲ, ಅದು ನಮ್ಮ ನಂಬಿಕೆ, ಅದು ನಮ್ಮ ಶಕ್ತಿ, ಅದು ನಮ್ಮ ಗುರುತು. ಪ್ರಜಾಪ್ರಭುತ್ವವೆಂದರೆ ಅಧಿಕಾರದ ಧ್ರುವೀಕರಣವಲ್ಲ ಬದಲಾಗಿ ಸಮಾಜದ ಪ್ರತಿಯೊಂದು ವರ್ಗದ, ಪ್ರತಿಯೊಂದು ಹಂತದ ಜನರ ಸಬಲೀಕರಣ ಮಾಡುವ ಮಹಾನ್ ಪ್ರಕ್ರಿಯೆ" ಎಂದರು.

"ಭಾರತವು ಭಾಷೆ, ಸಂಸ್ಕೃತಿ ಮತ್ತು ಆಚರಣೆಗಳಲ್ಲಿ ವೈವಿಧ್ಯತೆ ಹೊಂದಿರುವ, ವೈವಿಧ್ಯತೆಯ ದೇಶ. ಈ ವೈವಿಧ್ಯತೆಯು ನಮ್ಮ ದೌರ್ಬಲ್ಯವಲ್ಲ ಅದು ನಮ್ಮ ಅಸ್ತಿತ್ವದ ಶಕ್ತಿ ಎಂದು ಭಾರತ ಇಡೀ ವಿಶ್ವಕ್ಕೆ ತೋರಿಸಿಕೊಟ್ಟಿದೆ. ಏಕತೆ ಎಂದರೆ ಏಕರೂಪತೆಯಲ್ಲ, ಏಕತಾನತೆಯಲ್ಲ. ಏಕತೆ ಎಂದರೆ ಸಾಮರಸ್ಯ. ಸಾಮರಸ್ಯ ಎಂದರೆ ನಮ್ಮ ಭಿನ್ನಾಭಿಪ್ರಾಯಗಳನ್ನು ಅಳಿಸಿಹಾಕಬೇಕೆಂದಲ್ಲ. ಭಿನ್ನಾಭಿಪ್ರಾಯಗಳನ್ನು ಪರಸ್ಪರ ಗೌರವಿಸಿ, ಸ್ವೀಕರಿಸಿ ಮತ್ತು ಒಗ್ಗಟ್ಟಿನಿಂದ ಮುನ್ನಡೆಯಬೇಕು. ಇದೇ ನಮ್ಮ ಸಂಸ್ಕೃತಿ ಮತ್ತು ನಮ್ಮ ಪರಂಪರೆ. ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ, ಕಚ್‌ನಿಂದ ಕಾಮರೂಪದವರೆಗೆ, ಪ್ರತಿಯೊಂದು ಭಾಷೆ, ಪ್ರತಿಯೊಂದು ಸಂಸ್ಕೃತಿ, ಪ್ರತಿಯೊಂದು ಸಂಪ್ರದಾಯವು ಭಾರತದ ಚಿತ್ರಪಟಕ್ಕೆ ಹೊಸ ಮೆರುಗನ್ನು, ಹೊಸ ವೈಭವವನ್ನು ನೀಡುತ್ತದೆ. ಆದ್ದರಿಂದ ಭಾರತವು ಕೇವಲ ಒಂದು ದೇಶವಲ್ಲ, ಅದು ಜೀವಂತ ನಾಗರಿಕತೆಯೇ, ಶಾಶ್ವತವಾದ ಆಧ್ಯಾತ್ಮಿಕ ಕುಟುಂಬವೇ ಆಗಿದೆ." ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು

ಸ್ವಾತಂತ್ರ್ಯ ಸಂಗ್ರಾಮದಲ್ಲಿ ದೆಹಲಿಯ ಕೊಡುಗೆಯನ್ನು ವಿವರಿಸುತ್ತಾ ಅವರು, "ಈ ಐತಿಹಾಸಿಕ ದೆಹಲಿ ನಗರದಲ್ಲಿ ನಡೆಯುತ್ತಿರುವ ಭಾರತ – ಪ್ರಜಾಪ್ರಭುತ್ವದ ಮಾತೃಭೂಮಿ ಎನ್ನುವ ಈ ಸಮ್ಮೇಳನದಲ್ಲಿ ಪಾಲ್ಗೊಳ್ಳಲು ನನಗೆ ಹೆಮ್ಮೆಯೂ ಸಂತೋಷವೂ ಆಗುತ್ತಿದೆ, ಯಾಕೆಂದರೆ ದೆಹಲಿ

ನಗರವು ಕೇವಲ ಭಾರತದ ರಾಜಧಾನಿ ಮಾತ್ರವಲ್ಲ, ನಮ್ಮ ದೇಶದ ಸ್ವಾತಂತ್ರ್ಯ ಹೋರಾಟದ ಪ್ರಬಲ ವೇದಿಕೆ ಕೂಡ ಆಗಿದೆ. ಖಿಲಾಫತ್ ಚಳವಳಿಯಿಂದ ಜಾಮಾ ಮಸೀದಿಯ ಹೋರಾಟದವರೆಗೆ, ಎಲ್ಲರೂ ಧರ್ಮ, ಜಾತಿ, ಸಮುದಾಯವೆನ್ನದೆ ಸಂಘಟಿತರಾಗಿ ಬ್ರಿಟಿಷರ ವಿರುದ್ಧ ಅಚಲವಾಗಿ ನಿಂತರು. ಮಹಾತ್ಮ ಗಾಂಧಿಯವರು ಈ ಚಳವಳಿಯನ್ನು ಅಸಹಕಾರ ಚಳವಳಿಯೊಂದಿಗೆ ಜೋಡಿಸಿ, ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಒಂದು ಏಕೀಕೃತ, ರಾಷ್ಟ್ರೀಯ ಗುರುತನ್ನು ನೀಡಿ, ರಾಷ್ಟ್ರವ್ಯಾಪಿ ಕ್ರಾಂತಿಗೆ ಕಾರಣರಾದರು." ಎಂದು ಹೇಳಿದರು.

ಕರ್ನಾಟಕದ ಕ್ರಾಂತಿಯನ್ನು ವಿವರಿಸುತ್ತಾ ಅವರು, "ಕರ್ನಾಟಕದಲ್ಲಿ, 1880ರ ದಶಕದಲ್ಲಿ, ಮೈಸೂರು ಮಹಾರಾಜರ ಆಶ್ರಯದಲ್ಲಿ, ಚುನಾಯಿತ ಪ್ರತಿನಿಧಿಗಳು ಸಭೆ ಸೇರಿ ಬ್ರಿಟಿಷ್ ಆಡಳಿತದ ವಿರುದ್ಧ ಧ್ವನಿ ಎತ್ತಿದರು. ಭಾರತ ಸಂವಿಧಾನ ರಚನೆಯ ದಶಕಕ್ಕೂ ಮೊದಲು ಭಾರತದಲ್ಲಿ ಮೀಸಲಾತಿಯ ಮೊದಲ ಅನುಷ್ಠಾನದ ಪ್ರಯತ್ನವು 1918 ರಲ್ಲಿ, ಮೈಸೂರು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ನೇತೃತ್ವದಲ್ಲಿ ನಡೆಯಿತು. ಸಮಾಜದಲ್ಲಿ ಸಾಮಾಜಿಕ ನ್ಯಾಯ ಮತ್ತು ಸಮಾನತೆಯನ್ನು ತರಲು, ಮೀಸಲಾತಿ ಪ್ರತಿನಿಧಿತ್ವವನ್ನು ಅಧ್ಯಯನ ಮಾಡಿ ವರದಿ ನೀಡಲು ಮಿಲ್ಲರ್ ಸಮಿತಿಯನ್ನು ನೇಮಿಸಿದರು. ಇದರಿಂದ ಸರ್ಕಾರಿ ಉದ್ಯೋಗಗಳು ಮತ್ತು ಶಿಕ್ಷಣವು ಹಿಂದುಳಿದ ಹಾಗೂ ಶೋಷಿತ ವರ್ಗದವರಿಗೂ ದೊರಕುವಂತಾಯಿತು. ಈ ಕ್ರಾಂತಿಕಾರಿ ಹೆಜ್ಜೆಯು ಭಾರತದಾದ್ಯಂತ ಸಾಮಾಜಿಕ ನ್ಯಾಯ ಮತ್ತು ಸಮಾನತೆಗೆ ನೀಡಿದ ದೊಡ್ಡ ಕೊಡುಗೆಯಾಯಿತು. ಡಾ. ಬಿ. ಆರ್. ಅಂಬೇಡ್ಕರ್ ನಮ್ಮ ಸಂವಿಧಾನವನ್ನು ರೂಪಿಸಿದಾಗ, ಮೈಸೂರಿನ ಈ ಮಾದರಿಯನ್ನು ಹೆಮ್ಮೆಯಿಂದ ಸ್ಮರಿಸಲಾಯಿತು. ಇಷ್ಟು ಮಾತ್ರವಲ್ಲದೆ, 12 ನೇ ಶತಮಾನದ ಆರಂಭದಲ್ಲಿಯೇ, ಮಹಾನ್ ಸಮಾಜ ಸುಧಾರಕ ಜಗದ್ಗುರು ಬಸವಣ್ಣನವರು ವಿಶ್ವದ ಮೊದಲ ಸಂಸತ್ತು ಎಂದು ಪರಿಗಣಿಸಲಾದ ಅನುಭವ ಮಂಟಪವನ್ನು ಸ್ಥಾಪಿಸಿದರು. ಇದು ಕೇವಲ ಆಧ್ಯಾತ್ಮಿಕ ಕೇಂದ್ರವಾಗಿ ಉಳಿಯದೆ ಎಲ್ಲ ವರ್ಣ, ಲಿಂಗ, ಧರ್ಮ, ಜಾತಿ ಬೇಧವಿಲ್ಲದೆ, ಪ್ರತಿಯೊಬ್ಬರೂ ಸಮಾನ ಹಕ್ಕಿನಿಂದ ತಮ್ಮ ಅಭಿಪ್ರಾಯವನ್ನು ಹಂಚಿಕೊಳ್ಳುವ ವೇದಿಕೆಯಾಗಿತ್ತು.

ಆದ್ದರಿಂದ ಪ್ರಜಾಪ್ರಭುತ್ವವೆಂಬುದು ನಮಗೆ ಹೊರಗಿನ ಪ್ರಪಂಚದಿಂದ ಬಂದ ಉಡುಗೊರೆಯಲ್ಲ, ಅದು ನಮ್ಮ ಮಣ್ಣಿನಲ್ಲೇ ಮೊಳಕೆ ಹೊಡೆದ ಗಿಡ. ನಮ್ಮ ಸಂಸ್ಕಾರಗಳಿಂದ ಪೋಷಿಸಲ್ಪಟ್ಟು ನಮ್ಮೆಲ್ಲರಲ್ಲಿ ರಕ್ತಗತವಾಗಿದೆ. ಹಳ್ಳಿಯಲ್ಲಿರುವ ಚಿಕ್ಕ ಪಂಚಾಯತ್‌ನಿಂದ ಹಿಡಿದು ದೆಹಲಿಯ ಭವ್ಯ ಲೋಕಸಭೆಯವರೆಗೆ, ಪ್ರತಿಯೊಬ್ಬ ಭಾರತೀಯನು ಆಡಳಿತದಲ್ಲಿ ಪಾಲುದಾರನಾಗುವ ಜವಾಬ್ದಾರಿಯನ್ನು, ಹಕ್ಕನ್ನು ಪ್ರಜಾಪ್ರಭುತ್ವವು ನಮಗೆ ನೀಡಿದೆ. ಆದ್ದರಿಂದ ಭಾರತವು ಪ್ರಜಾಪ್ರಭುತ್ವದ ಮಾತೃಭೂಮಿ ಎನ್ನುವುದು ನಿತ್ಯ ಸತ್ಯ." ಎಂದರು. ಈ ಸಮ್ಮೇಳನದಲ್ಲಿ ಕರ್ನಾಟಕ ವಿಧಾನಸಭೆಯ ಉಪ ಸಭಾಪತಿಯವರಾದ ಶ್ರೀ ರುದ್ರಪ್ಪ ಮಾನಪ್ಪ ಲಮಾಣಿಯವರು ಭಾಗವಹಿಸಿದ್ದರು.

*******

## xxv. 11ನೇ ಕಾಮನ್‌ವೆಲ್ತ್ ಪಾರ್ಲಿಮೆಂಟರಿ ಅಸೋಸಿಯೇಷನ್ ಭಾರತ ವಲಯದ ಸಮ್ಮೇಳನದ ಪತ್ರಿಕಾಗೋಷ್ಠಿ

ದಿನಾಂಕ:11.09.2025 ರಿಂದ 15.09.2025ರವರೆಗೆ ಬೆಂಗಳೂರಿನಲ್ಲಿ ನಡೆದ 11ನೇ ಕಾಮನ್‌ವೆಲ್ತ್ ಪಾರ್ಲಿಮೆಂಟರಿ ಅಸೋಸಿಯೇಷನ್, ಭಾರತ ವಲಯದ ಸಮ್ಮೇಳನದ ಕುರಿತು ಸನ್ಮಾನ್ಯ ಸಭಾಧ್ಯಕ್ಷರು 29ನೇ ಆಗಸ್ಟ್ 2025ರಂದು ಪತ್ರಿಕಾಗೋಷ್ಠಿ ನಡೆಸಿ ಸಮ್ಮೇಳನದ ವಿವರಗಳನ್ನು ನೀಡಿದರು. ಈ ಸಂದರ್ಭದಲ್ಲಿ ಸನ್ಮಾನ್ಯ ಸಭಾಧ್ಯಕ್ಷರು ದಿನಾಂಕ:11.08.2025 ರಿಂದ 22.08.2025ರವರೆಗೆ ನಡೆದ ವಿಧಾನ ಸಭೆಯ ಕಾರ್ಯಕಲಾಪಗಳ ವಿವರಗಳನ್ನೂ ಸನ್ಮಾನ್ಯ ಸಭಾಧ್ಯಕ್ಷರು ಹಂಚಿಕೊಂಡರು.






## xxvi. ರಾಷ್ಟ್ರಪತಿ ಸ್ಕೌಟ್ಸ್/ಗೈಡ್ಸ್ ಪ್ರಶಸ್ತಿ

ದಿನಾಂಕ 31 ಆಗಸ್ಟ್ 2025ರಂದು ನವದೆಹಲಿಯಲ್ಲಿ ರಾಷ್ಟ್ರಪತಿ ಸ್ಕೌಟ್/ಗೈಡ್/ರೋವರ್/ ರೇಂಜರ್ ಅವಾರ್ಡ್ ಪ್ರೆಸೆಂಟೇಷನ್ ಸೆರ್ಮನಿಯಲ್ಲಿ ಸನ್ಮಾನ್ಯ ಸಭಾಧ್ಯಕ್ಷರು ಗೌರವಾನ್ವಿತ ಅತಿಥಿಯಾಗಿ ಭಾಗವಹಿಸಿದರು. ಈ ಸಂದರ್ಭದಲ್ಲಿ ಸನ್ಮಾನ್ಯ ರಾಷ್ಟ್ರಪತಿಗಳಿಂದ ಸಹಿಯಾಗಿರುವ 3911 ಪ್ರಮಾಣ ಪತ್ರಗಳನ್ನು ದೇಶಾದ್ಯಂತ ಅರ್ಹ ಯುವಕರಿಗೆ ಪ್ರದಾನ ಮಾಡಲಾಯಿತು. ಈ ಸಂದರ್ಭದಲ್ಲಿ ಕೇಂದ್ರ ಸಚಿವರಾದ ಶ್ರೀ ಮಾನ್‌ಸುಕ್ ಎಲ್ ಮಾಂಡವಿಯಾ, ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್‌ನ ಚೀಫ್

ನ್ಯಾಷನಲ್ ಕಮಿಷನರ್ ಡಾ॥ ಕೆ.ಕೆ.ಖಂಡೆಲ್‌ವಾಲ, ರಾಜ್ಯದ ಚೀಫ್ ಕಮಿಷನರ್ ಆದ ಶ್ರೀ ಪಿ.ಜಿ.ಆರ್.ಸಿಂದ್ಯ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.











**ರಾಷ್ಟ್ರದ ಯುವಜನತೆ ಮತ್ತು ನಾಯಕರ ಗಮನಸೆಳೆದ ಶ್ರೀ ಯು.ಟಿಖಾದರ್ ಅವರ ಪ್ರೇರಣಾದಾಯಕ ಭಾಷಣ:**




ನವ ದೆಹಲಿಯಲ್ಲಿ ನಡೆದ ಭಾರತ್ ಸ್ಕೌಟ್ ಅಂಡ್ ಗೈಡ್ಸ್ ನ ಪ್ರತಿಷ್ಠಿತ ರಾಷ್ಟ್ರಪತಿ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಸುಮಾರು 5,000 ಸಭಿಕರ ಸಮ್ಮುಖದಲ್ಲಿ ಕರ್ನಾಟಕ ರಾಜ್ಯ ವಿಧಾನಸಭೆಯ ಸಭಾಧ್ಯಕ್ಷರಾದ ಸನ್ಮಾನ್ಯ ಶ್ರೀ ಯು.ಟಿ. ಖಾದರ್ ಅವರು ನೀಡಿದ ಸ್ಫೂರ್ತಿದಾಯಕ ಭಾಷಣವು ರಾಷ್ಟ್ರದ ಯುವಜನತೆ ಮತ್ತು ನಾಯಕರ ಗಮನ ಸೆಳೆಯಿತು. ನಾಯಕತ್ವ, ಸೇವಾಭಾವನೆ ಮತ್ತು ರಾಷ್ಟ್ರಪ್ರೇಮವನ್ನು ಒಟ್ಟಿಗೆ ಬೆಳೆಸಿಕೊಳ್ಳುವ ಅಗತ್ಯವನ್ನು ಅವರು ಒತ್ತಿ ಹೇಳಿದಾಗ, ಅಲ್ಲಿ ಉಪಸ್ಥಿತರಿದ್ದ ವಿದ್ಯಾರ್ಥಿಗಳಿಗೆ ತಮ್ಮ ಹೊಣೆಗಾರಿಕೆಯನ್ನು ಅರಿತು, ಬದ್ಧತೆಯೊಂದಿಗೆ ಕಾರ್ಯನಿರ್ವಹಿಸಲು ಪ್ರೇರಣೆ ದೊರಕಿತು.

ಈ ಸಮಾರಂಭದಲ್ಲಿ ಮಾನ್ಯ ಕೇಂದ್ರ ಕಾರ್ಮಿಕ, ಉದ್ಯೋಗ ಮತ್ತು ಯುವಜನ ವ್ಯವಹಾರಗಳು ಮತ್ತು ಕ್ರೀಡಾ ಸಚಿವರಾದ ಶ್ರೀ ಮನ್ಸುಖ್ ಮಾಂಡವಿಯಾ, ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್‌ನ ಮಾಜಿ ಮುಖ್ಯ ರಾಷ್ಟ್ರೀಯ ಆಯುಕ್ತರಾದ ಡಾ. ಕೆ. ಕೆ. ಖಂಡೇಲ್ವಾಲ್, ಛತ್ತೀಸಘಡದ ಮಾಜಿ ಮಾಜಿ ಸಚಿವರು ಹಾಗೂ ಸಂಸದರಾಗಿರುವ ಶ್ರೀ ಬ್ರಿಜ್ ಮೋಹನ್ ಅಗರ್ವಾಲ್, ದೆಹಲಿಯ ಮಾನ್ಯ ಸಂಸದರಾದ ಮನೋಜ್ ತಿವಾರಿ, ಮಾಜಿ ನ್ಯಾಯಧೀಶರದ ಶ್ರೀ ಜಾವೇರಿಯ ಹಾಗೂ ಶ್ರೀಮತಿ ಗೀತಾಂಜಲಿ, ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್‌ನ ಹೆಚ್ಚುವರಿ ಸಹಾಯಕ ಆಯುಕ್ತರಾದ ಶ್ರೀ ಎಂ.ಎ. ಖಾಲಿದ್, ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್‌ನ ರಾಷ್ಟ್ರೀಯ ಮಹಾ ಕಾರ್ಯಾಧ್ಯಕ್ಷರಾದ  ಶ್ರೀ ಪಿ.ಜಿ.ಆರ್. ಸಿಂಧ್ಯಾ ಮುಂತಾದ ನಾಯಕರುಗಳು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಮಾರಂಭವನ್ನುದ್ದೇಶಿಸಿ ಮಾತನಾಡಿದ ಅವರು, "ಇಲ್ಲಿ ಉಪಸ್ಥಿತರಿರುವ ಉತ್ಸಾಹಿ, ಆತ್ಮವಿಶ್ವಾಸಿ ಮತ್ತು ದೃಢ ಮನಸ್ಸಿನ ಯುವ ಸಮಾವೇಶವನ್ನು ನೋಡಿ ನನಗೆ ಭವಿಷ್ಯದ ಭಾರತದ ಬಗ್ಗೆ ಅಪಾರ ಭರವಸೆ ಮತ್ತು ಹೆಮ್ಮೆ ಅನ್ನಿಸುತ್ತಿದೆ.  ಏಕೆಂದರೆ, ನೀವು ಖಂಡಿತವಾಗಿಯೂ ವಿಶ್ವದಲ್ಲಿ ಹಿಂದೆಂದಿಗಿಂತಲೂ ಹೆಚ್ಚು ಬಲಿಷ್ಠ ಮತ್ತು ಪ್ರಗತಿಶೀಲ ರಾಷ್ಟ್ರವಾಗಿ ಮಾನ್ಯತೆ ಪಡೆಯಲಿರುವ ಶ್ರೇಷ್ಠ ಭಾರತದ ವಾಸ್ತುಶಿಲ್ಪಿಗಳಾಗಿದ್ದೀರಿ", ಎಂದರು

"ಸ್ಕೌಟಿಂಗ್ ಮತ್ತು ಗೈಡಿಂಗ್ ಸೇವೆ, ಸಂಸ್ಕಾರ ಮತ್ತು ಸಹಯೋಗ ಎನ್ನುವ ಮೂರು ಸುಂದರ ಸಂಗಮವಾಗಿದೆ. ಈ ಮೂರು ಸ್ತಂಭಗಳು ಸಮಗ್ರ ವ್ಯಕ್ತಿತ್ವ ನಿರ್ಮಾಣಕ್ಕೆ ಪ್ರಬಲ ಚೌಕಟ್ಟಿನಂತೆ ಕಾರ್ಯನಿರ್ವಹಿಸುತ್ತವೆ. ಇದು 'ಸ್ವಯಂ'ದಿಂದ 'ಇತರರ ಸೇವೆ'ಗೆ ಇರುವ ಒಂದು ಪರಿವರ್ತನಾಶೀಲ ಪಯಣವಾಗಿದೆ. ವಿದ್ಯಾರ್ಥಿಗಳನ್ನು ಅಧ್ಯಯನ ಕೊಠಡಿಯಾಚೆಗೆ ಕರೆದೊಯ್ಯುವ, ಅವರನ್ನು ಸಮಾಜದ ಜವಾಬ್ದಾರಿಯುತ ನಾಗರಿಕರನ್ನಾಗಿ ಪರಿವರ್ತಿಸುವ ಪಯಣವಾಗಿದೆ. ಭಾರತದ ನಾರಿ ಶಕ್ತಿಯನ್ನು ಪ್ರತಿನಿಧಿಸುವ ನಮ್ಮ ಹೆಮ್ಮೆಯ ಯುವತಿಯರು ಕೂಡ ನಾಯಕತ್ವದಲ್ಲಿ ಮುನ್ನಡೆಯುವುದು, ಅನ್ವೇಷಣೆಗೆ, ಮತ್ತು ಹೊಸ ಸವಾಲುಗಳನ್ನು ಎದುರಿಸಲು ಸಿದ್ಧರಿರುವುದನ್ನು ನೋಡಿ ನನಗೆ ತುಂಬಾ ಸಂತೋಷವಾಗಿದೆ. ನೀವು ನಿಜವಾಗಿಯೂ ಲಕ್ಷಾಂತರ ಯುವತಿಯರಿಗೆ ಸ್ಫೂರ್ತಿಯ ಚಿಲುಮೆಯಾಗಿದ್ದೀರಿ", ಎಂದು ಹೇಳಿ ವಿದ್ಯಾರ್ಥಿಗಳಿಗೆ ಸ್ಫೂರ್ತಿಯನ್ನು ತುಂಬಿದರು.

ಪ್ರಶಸ್ತಿ ವಿಜೇತರಿಗೆ ಶುಭ ಕೋರುತ್ತಾ ಅವರು, "ಸ್ಕೌಟ್ಸ್,  ಗೈಡ್ಸ್, ರೋವರ್ಸ್ ಮತ್ತು ರೇಂಜರ್ಸ್‌ಗಳ ಸೇವೆ ಮತ್ತು ನಾಯಕತ್ವದಲ್ಲಿನ ಶ್ರೇಷ್ಠತೆಯನ್ನು ಗುರುತಿಸುವ ಈ ಪ್ರತಿಷ್ಠಿತ ರಾಷ್ಟ್ರಪತಿ ಪ್ರಶಸ್ತಿ ಪ್ರದಾನ  ಸಮಾರಂಭವು ಕೇವಲ ಒಂದು ಔಪಚಾರಿಕ ಸಮಾರಂಭವಲ್ಲ, ಇದು ಅವರ ಸಮರ್ಪಣೆ,  ಕಠಿಣ ಪರಿಶ್ರಮ ಮತ್ತು  ಸಾಮಾಜಿಕ ಜವಾಬ್ದಾರಿಯನ್ನು ಗುರುತಿಸಿ,  ಸಮಾಜಕ್ಕಾಗಿ ಅವರು ಇನ್ನಷ್ಟು ತಮ್ಮ ಸೇವಾ ಶಕ್ತಿ ಮತ್ತು ಕೌಶಲ್ಯವನ್ನು ಧಾರೆಯೆರೆದು, ಆ ಮೂಲಕ ಇನ್ನೂ ಹಲವಾರು ಜನರಿಗೆ ಪ್ರೇರಣೆಯಾಗಲಿ ಎನ್ನುವ ಉತ್ತಮ ಆಶಯದೊಂದಿಗೆ ನಡೆಸಲಾಗುತ್ತದೆ.

ನಿಮ್ಮ ಈ ಯಶಸ್ಸು ಅಂತ್ಯವಲ್ಲ, ಇದು ಹೊಸ ಆರಂಭಕ್ಕೆ ಮುನ್ನುಡಿ. ನಿಮ್ಮ ಯಶಸ್ವಿ ಸಾಧನೆಗಳ ಹಿಂದೆ ಇರುವ ಪೋಷಕರು ಮತ್ತು  ತರಬೇತುದಾರರ  ಶ್ರಮ ಮತ್ತು ಬೆಂಬಲಕ್ಕೆ ನಾನು ಹೃತ್ಪೂರ್ವಕ ಧನ್ಯವಾದಗಳನ್ನು ಮತ್ತು ಅಭಿನಂದನೆಗಳನ್ನು ಅರ್ಪಿಸಲು ಈ ಸಂದರ್ಭದಲ್ಲಿ ಇಚ್ಚಿಸುತ್ತೇನೆ . ಮಾತ್ರವಲ್ಲ, ನಿಮ್ಮ ಮಾರ್ಗದರ್ಶನದಿಂದ ಇವರು ಇನ್ನಷ್ಟು ಶ್ರೇಷ್ಠ ಸಾಧನೆಗಳನ್ನೂ ಮಾಡುವಂತಾಗಲಿ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಪರಂಪರೆಯನ್ನು ಇನ್ನಷ್ಟು ಬಲಪಡಿಸಿ, ಸಮಾಜಕ್ಕೆ ಅಮೂಲ್ಯ ಕೊಡುಗೆ ನೀಡುವಂತಾಗಲಿ”, ಎಂದು ನುಡಿದರು.

ತಮ್ಮ ಶಾಲಾ ದಿನಗಳನ್ನು ನೆನಪಿಸುತ್ತಾ ಅವರು, "ನಾನು 5ನೇ ತರಗತಿಯಿಂದ 10ನೇ ತರಗತಿಯವರೆಗೆ ಐದು ವರ್ಷಗಳ ಕಾಲ ಸ್ಕೌಟ್ ಗೈಡ್ ಆಗಿರುವುದು ನನ್ನ ವ್ಯಕ್ತಿತ್ವವನ್ನು ಮಾತ್ರವಲ್ಲ, ಮಾನವೀಯತೆ, ಸಹನಶೀಲತೆ ಮತ್ತು ಗುರಿಯೊಂದಿಗೆ ಮುನ್ನಡೆಯುವ ನಾಯಕತ್ವ ಸಾಮರ್ಥ್ಯವನ್ನೂ ನನಗೆ ನೀಡಿತು. ಸ್ಕೌಟಿಂಗ್ ನನಗೆ ಶಿಸ್ತು, ತಂಡದಲ್ಲಿ ಕೆಲಸ ಮಾಡುವುದು, ಸಮಾಜ ಸೇವೆ, ಸವಾಲುಗಳನ್ನು ಹೇಗೆ ಎದುರಿಸುವುದು ಮತ್ತು ಕಠಿಣ ಸಂದರ್ಭಗಳಲ್ಲಿ ಶಾಂತವಾಗಿ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಹೇಗೆ ಎಂಬುದನ್ನು ಕಲಿಸಿತು. ಇಂದಿನ ಸಮಾಜವು ತಪ್ಪು ಮಾಹಿತಿ, ಧ್ರುವೀಕರಣ ಮತ್ತು ಅಸಮಾನತೆಯಂತಹ ಸವಾಲುಗಳೊಂದಿಗೆ ಹೋರಾಡುತ್ತಿರುವ ಈ ಕಾಲಘಟ್ಟದಲ್ಲಿ, ಸ್ಕೌಟ್ಸ್ ಗೈಡ್ಸ್ ಸಾಮಾಜಿಕ ಸಮಾನತೆ, ಸಾಮರಸ್ಯ ಮತ್ತು ಶಾಂತಿಯುತ ಸಹಬಾಳ್ವೆಯನ್ನು ಮುಂತಾದ ಮೌಲ್ಯಗಳೊಂದಿಗೆ ವಿದ್ಯಾರ್ಥಿ ನಾಯಕರನ್ನು ರೂಪಿಸುವುದು ಶ್ಲಾಘನೀಯವಾಗಿದೆ.", ಎಂದರು.

"ಒಳ್ಳೆಯ ವೈದ್ಯರಾಗಲು ವೈದ್ಯಕೀಯ ಕಾಲೇಜುಗಳಿವೆ, ಉತ್ತಮ ಇಂಜಿನಿಯರ್ ಆಗಲು ಎಂಜಿನೀಯರಿಂಗ್ ಕಾಲೇಜುಗಳಿವೆ. ಹಾಗೆಯೆ, ಉತ್ತಮ ಸತ್ಪ್ರಜೆಯಾಗಲು ಸ್ಕೌಟ್ ಅಂಡ್ ಗೈಡ್ಸ್ ಉತ್ತಮ ವೇದಿಕೆಯಾಗಿದೆ ಎಂದರು. ಮೂವತ್ತು ವರ್ಷಗಳ ಹಿಂದೆ ಸಭಿಕರ ಮಧ್ಯೆ ಕುಳಿತಿದ್ದ ಯು ಟಿ ಖಾದರ್ ಇಂದು ನಿಮ್ಮೆದುರು ನಿಂತು ಮಾತನಾಡುತ್ತಿದ್ದಾರೆ ಎಂದರೆ, ಈ ಅವಕಾಶ ಕೇವಲ ನನಗೆ ಮಾತ್ರ ಅಲ್ಲ, ಮುಂದಿನ ಭವಿಷ್ಯದಲ್ಲಿ ನಿಮಗೂ ದೊರಕಬಹುದು. ನೀವು ಇನ್ನೂ ಹೆಚ್ಚಿನದನ್ನು ಸಾಧಿಸಿ, ಭವಿಷ್ಯದಲ್ಲಿ ನನಗಿಂತ ದೊಡ್ಡ ಸ್ಥಾನಕ್ಕೆ ಹೋಗುವಂತಾಗಲಿ", ಎಂದು ಅವರು ತಮ್ಮ ಆಶಯವನ್ನು ವ್ಯಕ್ತಪಡಿಸಿದರು. ವೈವಿಧ್ಯತೆಯಲ್ಲಿನ ಏಕತೆಯ ಬಗ್ಗೆ ಬೆಳಕು ಚೆಲ್ಲುತ್ತ ಅವರು, "ಸ್ಕೌಟ್ಸ್ ಮತ್ತು ಗೈಡ್ಸ್ ವೈವಿಧ್ಯತೆಯಲ್ಲಿನ ಏಕತೆಯ ಸಹ ಪ್ರತಿನಿಧಿಸುತ್ತದೆ. ದೇಶದ ಬೇರೆ ಬೇರೆ ಪ್ರದೇಶದಿಂದ ಬಂದರೂ, ಬೇರೆಬೇರೆ ಭಾಷೆ ಮಾತನಾಡಿದರೂ, ಬೇರೆ ಬೇರೆ ಧಾರ್ಮಿಕ ನಂಬಿಕೆ, ಆಚರಣೆಯನ್ನು ಹೊಂದಿದರೂ ಕೂಡಾ ಮಾನವೀಯತೆ, ಪ್ರೀತಿ, ವಿಶ್ವಾಸಗಳಿಂದ ಎಲ್ಲರೂ ಜೊತೆಯಾಗಿ ಕೆಲಸ ಮಾಡುತ್ತಾರೆ.

ಸ್ಕೌಟ್, ಗೈಡ್, ರೇಂಜರ್ಸ್ ಮತ್ತು ರೋವರ್ಸ್ ಆಗಿ ಮಾಡುವ ಸಣ್ಣ ಪರಿವರ್ತನೆಯೂ ಸಹ ಸಮಾಜದಲ್ಲಿ ಬದಲಾವಣೆಯ ಅಲೆಯಾಗಿ ಪರಿಣಮಿಸುತ್ತದೆ. . ಅದು ಮರವನ್ನು ನೆಡುವುದಾಗಲಿ, ಜನನಿಬಿಡ ರಸ್ತೆ ದಾಟಲು ಯಾರಿಗಾದರೂ ಸಹಾಯ ಮಾಡುವುದಾಗಲಿ ಅಥವಾ ನ್ಯಾಯದ ಪರವಾಗಿ ಹೋರಾಡುವುದಿರಲಿ ಎಲ್ಲವೂ ಸಾಮಾಜಿಕ ಪರಿವರ್ತನೆಯ ಶಕ್ತಿಯನ್ನು ಪ್ರತಿಬಿಂಬಿತವಾಗುತ್ತದೆ. ಸ್ಕೌಟ್ ಮತ್ತು ಗೈಡ್ ಮೂಲ ತತ್ವವು ನಮಗೆ ಇತರರನ್ನು ಗೌರವಿಸಲು, ವೈವಿಧ್ಯತೆಯಲ್ಲಿ ಏಕತೆಯನ್ನು ಕಾಪಾಡಲು ಮತ್ತು ಸಾಮರಸ್ಯಕ್ಕಾಗಿ ಕೆಲಸ ಮಾಡಲು ಕಲಿಸುತ್ತದೆ.ಆ ಮೂಲಕ ನಮ್ಮ ವ್ಯಕ್ತಿಗತವಾದ ಬೆಳವಣಿಗೆಯ ಜೊತೆಗೆ ನಿಸ್ವಾರ್ಥ ಸೇವೆ, ಸಮಗ್ರತೆ ಮತ್ತು ಶಿಸ್ತಿನಿಂದ ಸಮಾಜದ ಮೇಲೆ ಸಕಾರಾತ್ಮಕ ಪರಿಣಾಮ ಬೀರಿ ಇತರರಿಗೆ ಪ್ರೇರಣೆಯೂ ಮತ್ತು ಮಾದರಿಯೂ ಆಗುತ್ತೇವೆ",ಎಂದರು.

ನಾಯಕತ್ವದ ಬಗ್ಗೆ ಮಾತನಾಡುತ್ತಾ ಅವರು, "ನಿಜವಾದ ನಾಯಕತ್ವ ಮುಂದೆ ನಿಂತು ಆಜ್ಞಾಪಿಸುವುದಲ್ಲ, ಬದಲಾಗಿ ಇತರರನ್ನು ಉತ್ತೇಜಿಸುವುದು, ಪ್ರೇರೇಪಿಸುವುದು ಮತ್ತು ಅವರ ಬದುಕಿಗೆ ಬೆಳಕಾಗುವುದು, ಮಾತ್ರವಲ್ಲ ಸಮಾಜದಲ್ಲಿ ಧ್ವನಿಹೀನರಿಗೆ ಧ್ವನಿಯಾಗಿ, ಕತ್ತಲಲ್ಲಿ ಇರುವವರಿಗೆ ಬೆಳಕಾಗಿ, ಬಡವರಿಗೆ ಆಶಾಕಿರಣವಾಗಿ, ನರಳುವವರಿಗೆ ನೆಮ್ಮದಿ, ಪ್ರೀತಿ ನೀಡುವ ಕಲ್ಪವೃಕ್ಷವಾಗಿ, ಸಮಾಜದ ಕಟ್ಟಕಡೆಯ ವ್ಯಕ್ತಿಗೂ ನ್ಯಾಯ, ದೊರಕಿಸಿಕೊಡುವ ನ್ಯಾಯದೇವತೆಯಾಗಿ, ಎಲ್ಲರನ್ನು ಜೊತೆಗೆ ಸೇರಿಸಿಕೊಂಡು ಮುನ್ನಡೆಯುವುದೇ ನಿಜವಾದ ನಾಯಕತ್ವ.

ನಾಯಕರಾದವರು ಹೆಸರಿಗೋಸ್ಕರ ನೇತೃತ್ವ ವಹಿಸುವುದಲ್ಲ, ಬದಲಾಗಿ ಇತರರನ್ನು ಸಬಲಗೊಳಿಸುವ ಮೂಲಕ ಬದಲಾವಣೆಗೆ ನಾಂದಿ ಹಾಡುತ್ತಾರೆ, ಇಂತಹ ನೈತಿಕ ಮೌಲ್ಯಗಳಿಂದ ಕೂಡಿದ ಸಮೃದ್ಧ ನಾಯಕತ್ವವೇ ನಿಜವಾದ ಸಾಮಾಜಿಕ ಪರಿವರ್ತನೆಗೆ ಕಾರಣವಾಗುತ್ತದೆ. ಹೆಸರು ಹಣ ನಮ್ಮನ್ನು ಹುಡುಕಿಕೊಂಡು ಬರಬೇಕೆ ಹೊರತು ನಾವು ಅದನ್ನು ಹುಡುಕಿಕೊಂಡು ಹೋಗುವುದಲ್ಲ. ಹುಟ್ಟಿದಾಗ ನಮಗೆ ಉಸಿರು, ಇರುತ್ತದೆ ಹೆಸರು ಇರುವುದಿಲ್ಲ, ಸಾಯುವಾಗ ನಮಗೆ ಉಸಿರು ಇರುವುದಿಲ್ಲ ಆದರೆ ನಾವು ಮಾಡಿದ ಒಳ್ಳೆಯ ಕೆಲಸಗಳು ಎಲ್ಲರ ಉಸಿರಾಗಿ ನಮ್ಮನ್ನು ಹಸಿರಾಗಿಸುತ್ತದೆ, ಅಮರವಾಗಿಸುತ್ತವೆ, ಸದಾ ನಮ್ಮನ್ನು ಜನರ ಮನಸ್ಸಲ್ಲಿ ಜೀವಂತವಾಗಿರಿಸುತ್ತವೆ. ಇದರಲ್ಲೇ ಇರುವುದು ಜೀವನದ ಸಾರ್ಥಕತೆ", ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

**********

## xxvii. ಸನ್ಮಾನ್ಯ ಸಭಾಧ್ಯಕ್ಷರು–ಶಿಷ್ಟಾಚಾರ ಸಂಪರ್ಕ ಅಧಿಕಾರಿಗಳಿಗೆ ಮಾರ್ಗದರ್ಶನ

ದಿನಾಂಕ:11.09.2025ರಿಂದ 15.09.2025ರವರೆಗೆ ಬೆಂಗಳೂರಿನಲ್ಲಿ ನಡೆದ 11ನೇ ಕಾಮನ್‌ವೆಲ್ತ್ ಪಾರ್ಲಿಮೆಂಟರಿ ಅಸೋಸಿಯೇಷನ್, ಭಾರತ ವಲಯದ ಸಮ್ಮೇಳನದಲ್ಲಿ ಭಾಗವಹಿಸುವ ಪ್ರತಿನಿಧಿಗಳ ಮಾರ್ಗದರ್ಶನಕ್ಕಾಗಿ ನಿಯೋಜಿಸಲ್ಪಟ್ಟ ಶಿಷ್ಟಾಚಾರ ಸಂಪರ್ಕ ಅಧಿಕಾರಿಗಳಿಗೆ ದಿನಾಂಕ:01.09.2025ರಂದು ಸನ್ಮಾನ್ಯ ಸಭಾಧ್ಯಕ್ಷರು ಅಗತ್ಯ ಸೂಚನೆಗಳನ್ನು ನೀಡಿದರು.





## xxviii. ನೂತನ ಶಾಸಕರುಗಳ ಪ್ರಮಾಣ ವಚನ

ದಿನಾಂಕ:11.09.2025ರಂದು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಕರ್ನಾಟಕ ವಿಧಾನಪರಿಷತ್ತಿನ ನೂತನ ಶಾಸಕರುಗಳಾಗಿ ಶ್ರೀ ಎಫ್ ಹೆಚ್ ಜಕ್ಕಪ್ಪನವರ್, ಡಾ. ಆರತಿ ಕೃಷ್ಣ, ಶ್ರೀ ಶಿವಕುಮಾರ್ ಕೆ ಹಾಗೂ ಶ್ರೀ ರಮೇಶ ಬಾಬುರವರುಗಳು ಮಾನ್ಯ ಸಭಾಪತಿ ಶ್ರೀ ಬಸವರಾಜ ಎಸ್. ಹೊರಟ್ಟಿರವರ ಸಮ್ಮುಖದಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಉಪಮುಖ್ಯಮಂತ್ರಿಗಳು, ಮಾನ್ಯ ಗೃಹ ಸಚಿವರು ಉಪಸ್ಥಿತರಿದ್ದರು.



## xxix. 11ನೇ ಕಾಮನ್‌ವೆಲ್ತ್ ಸಂಸದೀಯ ಸಂಘ(ಸಿಪಿಎ)ಭಾರತ ವಲಯದ ಸಮ್ಮೇಳನದ ಉದ್ಘಾಟನಾ ಸಮಾರಂಭಕ್ಕೆ ಲೋಕಸಭಾ ಸಭಾಧ್ಯಕ್ಷರಿಗೆ ಸ್ವಾಗತ

ದಿನಾಂಕ:11.09.2025ರಂದು ಬೆಂಗಳೂರಿನ ವಿಧಾನಸೌಧದಲ್ಲಿ ನಡೆದ ಕಾಮನ್‌ವೆಲ್ತ್ ಪಾರ್ಲಿಮೆಂಟ್ ಅಸೋಸಿಯೇಷನ್ 11ನೇ ಭಾರತ ವಿಭಾಗದ ಸಮ್ಮೇಳನದ ಉದ್ಘಾಟನಾ ಸಮಾರಂಭಕ್ಕೆ ಲೋಕಸಭಾ ಸಭಾಧ್ಯಕ್ಷರಾದ ಶ್ರೀ ಓಂ ಬಿರ್ಲಾರವರಿಗೆ ಸನ್ಮಾನ್ಯ ಸಭಾಧ್ಯಕ್ಷರು ಆತ್ಮೀಯ ಸ್ವಾಗತ ನೀಡಿದರು.



## xxx. 11ನೇ ಕಾಮನ್‌ವೆಲ್ತ್ ಸಂಸದೀಯ ಸಂಘ(ಸಿಪಿಎ) ಭಾರತ ವಲಯದ ಸಮ್ಮೇಳನದ ಉದ್ಘಾಟನಾ ಸಮಾರಂಭ

ದಿನಾಂಕ:11.09.2025ರಂದು ಬೆಂಗಳೂರಿನ ವಿಧಾನಸೌಧದಲ್ಲಿ, ಕಾಮನ್‌ವೆಲ್ತ್ ಪಾರ್ಲಿಮೆಂಟ್ ಅಸೋಸಿಯೇಷನ್ 11ನೇ ಭಾರತ ವಿಭಾಗದ ಸಮ್ಮೇಳನದ ಉದ್ಘಾಟನಾ ಸಮಾರಂಭವನ್ನು ಸನ್ಮಾನ್ಯ ಲೋಕಸಭಾ ಸಭಾಧ್ಯಕ್ಷರಾದ ಶ್ರೀ ಓಂ ಬಿರ್ಲಾರವರು, ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ, ವಿಧಾನ ಪರಿಷತ್‌ನ ಸನ್ಮಾನ್ಯ ಸಭಾಪತಿಗಳಾದ ಶ್ರೀ ಬಸವರಾಜ್ ಎಸ್. ಹೊರಟ್ಟಿ, ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀ ಯು.ಟಿ.ಖಾದರ್ ಫರೀದ್, ಸನ್ಮಾನ್ಯ ಉಪ ಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ.ಶಿವಕುಮಾರ್, ವಿಧಾನ ಸಭೆಯ ಸನ್ಮಾನ್ಯ ಉಪ ಸಭಾಧ್ಯಕ್ಷರಾದ ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ, ಇತರೆ ರಾಜ್ಯಗಳ ಪೀಠಾಸೀನಾಧಿಕಾರಿಗಳು ಹಾಗೂ ಇತರೆ ಗಣ್ಯರ ಉಪಸ್ಥಿತಿಯಲ್ಲಿ ಉದ್ಘಾಟಿಸಿದರು. ವಿವಿಧ ರಾಜ್ಯಗಳ ವಿಧಾನ ಸಭಾಧ್ಯಕ್ಷರು, ಉಪ ಸಭಾಧ್ಯಕ್ಷರು, ಸಭಾಪತಿಗಳು ಮತ್ತು ಉಪ ಸಭಾಪತಿ,ಗಳು, ಲೋಕಸಭೆ ಮತ್ತು ರಾಜ್ಯ ಸಭೆಯ ಮಹಾ ಕಾರ್ಯದರ್ಶಿಗಳು, ವಿವಿಧ ರಾಜ್ಯಗಳ ವಿಧಾನಸಭೆ, ವಿಧಾನ ಪರಿಷತ್‌ಗಳ ಕಾರ್ಯದರ್ಶಿಗಳು ಹಾಗೂ ಅಧಿಕಾರಿಗಳು ಭಾಗವಹಿಸಿದ್ದರು. ಈ ಸಮಾರಂಭದಲ್ಲಿ ಗಣ್ಯರುಗಳನ್ನು ಹಾಗೂ ವಿಧಾನ ಮಂಡಲದ ಮಾಜಿ ಕಾರ್ಯದರ್ಶಿಗಳನ್ನು ಸನ್ಮಾನಿಸಲಾಯಿತು.







INAUGURAL PROGRAM
11वां सीपीए-भारत क्षेत्र सम्मेलन
11ನೇ ಸಿಪಿಎ-ಭಾರತ ವಲಯದ ಸಮ್ಮೇಳನ
CPA-INDIA REGION CONFERENCE
OM BIRLA
SIDDARAMAIAH




OM BIRLA
SIDDARAMAIAH













ಕರ್ನಾಟಕ ವಿಧಾನ ಮಂಡಲದ ನೇತೃತ್ವದಲ್ಲಿ ಬೆಂಗಳೂರಿನ ತಾಜ್ ವೆಸ್ಟ್ ಎಂಡ್‌ನಲ್ಲಿ ನಡೆದ ಕಾಮನ್‌ವೆಲ್ತ್ ಪಾರ್ಲಿಮೆಂಟರಿ ಅಸೋಸಿಯೇಷನ್(CPA) ಸಮ್ಮೇಳನ ಕಾರ್ಯಕ್ರಮದಲ್ಲಿ ಮಾನ್ಯ ಲೋಕಸಭಾ ಸ್ಪೀಕರ್ ಶ್ರೀ ಓಂ ಬಿರ್ಲಾರವರಿಗೆ, ಮಾನ್ಯ ವಿಧಾನ ಸಭಾಧ್ಯಕ್ಷರಾದ ಶ್ರೀ ಯು.ಟಿ. ಖಾದರ್ ಹಾಗೂ ದೇಶದ ಎಲ್ಲಾ ರಾಜ್ಯಗಳ ವಿಧಾನದ ಮಂಡಲದ ಅಧ್ಯಕ್ಷರುಗಳಿಗೆ ಮಾನ್ಯ ಸಭಾಪತಿ ಶ್ರೀ ಬಸವರಾಜ ಎಸ್. ಹೊರಟ್ಟಿ ಅವರು ನೆನಪಿನ ಕಾಣಿಕೆಯನ್ನು ನೀಡಿ ಗೌರವಿಸಿದರು.





ಬೆಂಗಳೂರಿನ ತಾಜ್ ಹೋಟೆಲ್‌ನಲ್ಲಿ ನಡೆದ ಕಾಮನ್‌ವೆಲ್ತ್ ಪಾರ್ಲಿಮೆಂಟರಿ ಅಸೋಸಿಯೇಷನ್ (CPA) ಸಮ್ಮೇಳನದ ಸಂದರ್ಭದಲ್ಲಿ ಕರ್ನಾಟಕ ವಿಧಾನ ಪರಿಷತ್ ಅಧ್ಯಕ್ಷರಾದ ಬಸವರಾಜ ಎಸ್. ಹೊರಟ್ಟಿ ಅವರಿಗೆ ಗೌರವ ಸೂಚಕವಾಗಿ ಬೆಳ್ಳಿ ಗದೆಯನ್ನು ಪ್ರದಾನ ಮಾಡಲಾಯಿತು. ಗದೆ ಭಾರತೀಯ ಸಂಸ್ಕೃತಿಯಲ್ಲಿ ಶಕ್ತಿ, ಧೈರ್ಯ ಮತ್ತು ನಾಯಕತ್ವದ ಸಂಕೇತವಾಗಿದ್ದು, ಹೊರಟ್ಟಿ ಅವರ ದೀರ್ಘಕಾಲದ ಶಾಸನ ಸೇವೆ, ಶಿಕ್ಷಣ ಕ್ಷೇತ್ರಕ್ಕೆ ನೀಡಿದ ಮಹತ್ವದ ಕೊಡುಗೆ ಹಾಗೂ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಕಾಪಾಡಿದ ಪಾತ್ರವನ್ನು ಪರಿಗಣಿಸಿ ಈ ಗೌರವವನ್ನು ನೀಡಲಾಯಿತು.







ಬೆಂಗಳೂರಿನಲ್ಲಿ ನಡೆದ ಕಾಮನ್‌ವೆಲ್ತ್ ಪಾರ್ಲಿಮೆಂಟರಿ ಅಸೋಸಿಯೇಷನ್(CPA) ಸಮ್ಮೇಳನದಲ್ಲಿ "ವಿಧಾನಮಂಡಲದ ಚರ್ಚೆಗಳು ಜನರ ವಿಶ್ವಾಸ ಗಳಿಸುವುದರೊಂದಿಗೆ ಜನರ ಅಶೋತ್ತರಗಳನ್ನು ಈಡೇರಿಸುವಲ್ಲಿಯ ಪಾತ್ರ" ಕುರಿತ ವಿಚಾರ ಮಂಡಿಸಿದ ಶ್ರೀ ಬಸವರಾಜ ಎಸ್. ಹೊರಟ್ಟಿ, ಚುನಾಯಿತ ಪ್ರತಿನಿಧಿಗಳು ಸಾರ್ವಜನಿಕ ಕಾಳಜಿಗಳನ್ನು ಚರ್ಚಿಸಲು ಸರ್ಕಾರಿ ನೀತಿಗಳನ್ನು ಪರಿಶೀಲಿಸಲು ಮತ್ತು ಕಾನೂನು ರಚನೆಯ ಪ್ರಕ್ರಿಯೆಯಲ್ಲಿ ಭಾಗವಹಿಸಲು ವಿಧಾನಮಂಡಲ ಪರಿಣಾಮಕಾರಿ ವೇದಿಕೆಯಾಗಿದ್ದು ಅದನ್ನು ಸಮರ್ಥವಾಗಿ ಬಳಸಿಕೊಳ್ಳಲು ಜನಪ್ರತಿನಿಧಿಗಳು ಮುಂದಾಗಬೇಕು ಎಂದರು.

ಸದನ ಕಲಾಪಗಳ ಪ್ರಧಾನ ಅಂಶಗಳಾದ ಪ್ರಶ್ನೋತ್ತರ ಅವಧಿ, ಶೂನ್ಯವೇಳೆ ಚರ್ಚೆ, ಅರ್ಧಗಂಟೆಯ ಚರ್ಚೆ, ಕಿರುಸೂಚನೆ ಪ್ರಶ್ನೆಗಳು ಮತ್ತು ಸದನದ ಗಮನಸೆಳೆಯುವ ಪ್ರಸ್ತಾವಗಳ ಮೂಲಕ ಪ್ರತಿಯೊಬ್ಬ ಸದಸ್ಯರು ಸದನದಲ್ಲಿನ ಅವಕಾಶಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಅನುವು ಮಾಡಿಕೊಡುವ ಮೂಲಕ ಸುಗಮ ಮತ್ತು ರಾಜತಾಂತ್ರಿಕ ಮಾರ್ಗಗಳನ್ನು ಪ್ರತಿನಿಧಿಗಳು ಯಾವಾಗಲೂ ಆಯ್ಕೆ ಮಾಡಿಕೊಳ್ಳಬೇಕು ಎಂದು ಸಭಾಪತಿ ಶ್ರೀ ಬಸವರಾಜ ಎಸ್. ಹೊರಟ್ಟಿ ತಿಳಿಸಿದರು.

ಶಾಸಕಾಂಗ ಸದನಗಳಲ್ಲಿ ನನ್ನ 45 ವರ್ಷಗಳ ಅವಧಿಯಲ್ಲಿ ವಿಧಾನ ಪರಿಷತ್ತಿನ ಸಭಾಪತಿಯಾಗಿ 3ನೇ ಬಾರಿಗೆ ಪಡೆದ ಅನುಭವದ ಮೂಲಕ ಹೇಳುವುದಾದರೆ, ಸಾರ್ವಜನಿಕ ಪ್ರತಿನಿಧಿಗಳು ಜನಪರ ಮಹತ್ವದ ವಿಷಯಗಳಿಗೆ ಮಹತ್ವ ನೀಡುವುದರ ಮೂಲಕ ತಮ್ಮ ಜವಾಬ್ದಾರಿ ನಿಭಾಯಿಸಬೇಕು ಎಂದು ನುಡಿದರು.

**11ನೇ ಕಾಮನ್‌ವೆಲ್ತ್ ಸಂಸದೀಯ ಸಂಘ(ಸಿಪಿಎ) ಭಾರತ ವಲಯದ ಸಮ್ಮೇಳನದ ಸಮಾರೋಪ ಸಮಾರಂಭ:**

ದಿನಾಂಕ:12.09.2025ರಂದು ಬೆಂಗಳೂರಿನಲ್ಲಿ ನಡೆದ ಹನ್ನೊಂದನೇ ಕಾಮನ್‌ವೆಲ್ತ್ ಪಾರ್ಲಿಮೆಂಟರಿ ಅಸೋಸಿಯೇಷನ್(ಸಿ.ಪಿ.ಎ) ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಸನ್ಮಾನ್ಯ ರಾಜ್ಯಪಾಲರಾದ ಶ್ರೀ ಥಾವರ್‌ಚಂದ್ ಗೆಹ್ಲೋಟ್‌ರವರು ಭಾಗವಹಿಸಿದರು.







**ಸಮಾರೋಪ ಸಮಾರಂಭದಲ್ಲಿ ಸನ್ಮಾನ್ಯ ಸಭಾಧ್ಯಕ್ಷರಿಂದ ವಂದನಾರ್ಪಣೆ:**



**11ನೇ ಕಾಮನ್‌ವೆಲ್ತ್ ಸಂಸದೀಯ ಸಂಘ(ಸಿಪಿಎ) ಭಾರತ ವಲಯದ ಸಮ್ಮೇಳನದ ಅತಿಥಿಗಳ ಗೌರವಾರ್ಥ ಔತಣಕೂಟ:**

ದಿನಾಂಕ:12.09.2025ರಂದು ಬೆಂಗಳೂರಿನಲ್ಲಿ ನಡೆದ ಹನ್ನೊಂದನೇ ಕಾಮನ್‌ವೆಲ್ತ್ ಪಾರ್ಲಿಮೆಂಟರಿ ಅಸೋಸಿಯೇಷನ್(ಸಿಪಿಎ) ಸಮ್ಮೇಳನಕ್ಕೆ ಆಗಮಿಸಿದ ಗೌರವಾನ್ವಿತ ಅತಿಥಿಗಳಿಗೆ ಏರ್ಪಡಿಸಿದ ಔತಣಕೂಟದಲ್ಲಿ ರಾಜ್ಯಪಾಲರಾದ ಶ್ರೀ ಥಾವರ್‌ಚಂದ್ ಗೆಹ್ಲೋಟ್‌ರವರು ಭಾಗವಹಿಸಿದರು.







**ಅತಿಥಿಗಳ ಗೌರವಾರ್ಥ– Mock Race ವೀಕ್ಷಣೆ:**

ದಿನಾಂಕ:13.09.2025ರಂದು 11ನೇ ಕಾಮನ್‌ವೆಲ್ತ್ ಸಂಸದೀಯ ಸಂಘ(ಸಿಪಿಎ) ಭಾರತ ವಲಯ ಸಮ್ಮೇಳನದ ಅತಿಥಿಗಳ ಗೌರವಾರ್ಥ ಬೆಂಗಳೂರಿನ ಟರ್ಫ್‌ಕ್ಲಬ್‌ನಲ್ಲಿ ಏರ್ಪಡಿಸಿದ Mock Raceನ್ನು ವೀಕ್ಷಿಸಿದ ಸಂದರ್ಭ.





ಈ ಸಂದರ್ಭದಲ್ಲಿ ಸನ್ಮಾನ್ಯ ಸಭಾಪತಿಯವರು ಹಾಗೂ ಸನ್ಮಾನ್ಯ ಸಭಾಧ್ಯಕ್ಷರು ಅತಿಥಿಗಳನ್ನು ಸನ್ಮಾನಿಸಿದರು.






BANGALORE TURF CLUB
Hearty Welcome



## xxxi. ಮೈಸೂರು ದಸರಾ ಸಮಾರಂಭ

ದಿನಾಂಕ:22.09.2025ರಂದು ವಿಶ್ವವಿಖ್ಯಾತ ಮೈಸೂರು ದಸರಾ ಉದ್ಘಾಟನೆ ಸಮಾರಂಭಕ್ಕೆ ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸಭಾಪತಿ ಶ್ರೀ ಬಸವರಾಜ ಎಸ್. ಹೊರಟ್ಟಿರವರು ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯರವರು ಹಾಗೂ ಸಚಿವರುಗಳು ಭಾಗವಹಿಸಿದ್ದರು.



## xxxii. ಹರಿಯಾಣ ವಿಧಾನಸಭೆ– ಲೆಜಿಸ್ಲೇಟಿವ್ ಡ್ರಾಫ್ಟಿಂಗ್ ತರಬೇತಿ ಕಾರ್ಯಕ್ರಮ ಉದ್ಘಾಟನೆ ಸಮಾರಂಭ

ದಿನಾಂಕ 26 ಮತ್ತು 27ನೇ ಸೆಪ್ಟಂಬರ್ 2025ರ ದಿನಗಳಂದು ಹರಿಯಾಣ ವಿಧಾನ ಸಭೆಯು ಲೋಕಸಭೆಯ **Institute of Constitutional and Parliamentary Studies (ICPS)** ನ ಸಹಯೋಗದೊಂದಿಗೆ ಹರಿಯಾಣ ವಿಧಾನಸಭೆ ಮತ್ತು ಹರಿಯಾಣ ಸರ್ಕಾರದ ಅಧಿಕಾರಿ ಸಿಬ್ಬಂದಿಗಳಿಗೆ ಲೆಜಿಸ್ಲೇಟಿವ್ ಡ್ರಾಫ್ಟಿಂಗ್ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಂಡಿತು.

ಈ ಕಾರ್ಯಕ್ರಮದ ಉದ್ಘಾಟನಾ ಸಮಾರಂಭವು ದಿನಾಂಕ:26.09.2025 ರಂದು ನೆರವೇರಿತು. ಹರಿಯಾಣ ವಿಧಾನಸಭೆಯ ಸಭಾಧ್ಯಕ್ಷರ ಆಹ್ವಾನದ ಮೇರೆಗೆ ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀ ಯು.ಟಿ.ಖಾದರ್ ಫರೀದ್‌ರವರು ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿ, ತರಬೇತಿಯಲ್ಲಿ ಪಾಲ್ಗೊಂಡ ಅಧಿಕಾರಿ ಸಿಬ್ಬಂದಿ ವರ್ಗದವರನ್ನು ಉದ್ದೇಶಿಸಿ ಮಾತನಾಡಿದರು. ಸದರಿ ಸಮಾರಂಭವನ್ನು ಸನ್ಮಾನ್ಯ ಲೋಕಸಭಾಧ್ಯಕ್ಷರಾದ ಶ್ರೀ ಓಂ ಬಿರ್ಲಾರವರು ಉದ್ಘಾಟಿಸಿದರು.




Chandigarh




Apply Now !

**ಶ್ರೀ ಯು.ಟಿ.ಖಾದರ್ ಫರೀದ್, ಮಾನ್ಯ ಸಭಾಧ್ಯಕ್ಷರವರು, ಹರಿಯಾಣ ವಿಧಾನಸಭೆಯ ಹಾಗೂ ಸರ್ಕಾರಿ ಅಧಿಕಾರಿಗಳ ತರಬೇತಿ ಕಾರ್ಯಕ್ರಮದಲ್ಲಿ ಮಾಡಿದ ಭಾಷಣ:**

## LEGISLATIVE DRAFTING



Respected Hon'ble Speaker of Lok Sabha, Shri Om Birla ji, Hon'ble Chief Minister of Haryana Shri Nayab Singh ji, Hon'ble Speaker of Haryana Vidhan Sabha, distinguished dignitaries, faculty members of the Institute of Constitutional and Parliamentary Studies, esteemed officers, and dear participants.

It is indeed a privilege and a matter of great satisfaction to be present here today amidst this august gathering for the *Legislative Drafting Training Programme* organized by the Haryana Vidhan Sabha in collaboration with the Institute of Constitutional and Parliamentary Studies (ICPS), Lok Sabha.

At the outset, I wish to commend the Haryana Vidhan Sabha for taking this important initiative. As you are all aware, the Indian democratic system—with the Legislatures and the Parliament as the supreme law-making institutions, often described as the *"Temples of Democracy"*—functions in harmony with our constitutional provisions, well-established conventions, rules, past practices, and procedures. The elected representatives engage themselves in law-making for the welfare of the people and in the larger interest of both the State and the Nation.

Among the many responsibilities of Parliament and State Legislatures, the most important is *legislation*, which demands scrupulous observance of constitutional provisions. We are all bound by our constitutional duties and must work within this structured framework. It is pertinent to note that beyond the Constitution and the Parliamentary Manual, very little is known about the legislative processes in the world's largest democracy. Hence, the need of the hour is to focus on *capacity building* of the personnel engaged in the process of legislative drafting.

## Importance of Legislative Drafting

Legislative drafting lies at the very heart of law-making. The quality of our laws depends, to a large extent, on the *precision, clarity, and foresight* with which they are drafted.

The essence of democracy rests upon laws that are fair, just, and accessible to all. However, even the most well-intentioned law can lose its purpose if it is not drafted with care. Legislative drafting is not merely a technical exercise—it is both a science and an art. It requires legal knowledge, linguistic skill, policy understanding, and above all, a deep sensitivity to meet the needs and aspirations of the people.

Clear and concise drafting ensures that the intent of the legislature is carried forward without ambiguity. Poorly drafted laws often result in misinterpretation, prolonged litigation,

and erosion of public trust. Strengthening drafting skills is, therefore, not only an administrative necessity but also a *democratic imperative.*

## Role of Officers and Officials

Officers and officials of the Government, the Department of Parliamentary Affairs, and the Legislatures play a crucial role in assisting lawmakers. They translate policy decisions into legal language, anticipate possible challenges, and ensure that laws remain consistent with constitutional values.

Though your work often goes unnoticed, its impact is immense. This training programme will further strengthen your capacity to draft laws that are:

- Simple in language, so that even a common citizen can understand them,
- Concise in structure and title,
- Precise in meaning, leaving no room for misinterpretation,
- Consistent with the Constitution and the existing legal framework, and
- Forward-looking, to address emerging social, economic, political, and technological challenges.

## Evolving Needs of Legislative Drafting

Law is an instrument of social change, and we live in an era of rapid socio-economic transformation—be it the digital revolution, environmental concerns, or global economic shifts. Our laws must evolve to keep pace with these changes.

Artificial intelligence, data protection, cyber security, and climate change are examples of areas that demand new legal approaches, requiring special expertise and foresight in drafting. It is, therefore, highly commendable that such training programmes are being institutionalized. They not only enhance professional skills but also create a culture of excellence within our legislatures.

## Karnataka's Experience

In Karnataka too, we have consistently emphasized the importance of legislative support services, capacity building, and research. In this regard we have in place both Karnataka State Law Commission and the "Karnataka Institute for Law and Parliamentary Reforms"(in short known as KILPAR) which are already working identifying subject matters/policies which necessitate framing new laws and also suggesting amendments to various existing laws. In addition to KILPAR we have recently established the "Karnataka Legislature Institute" the aims and objectives of which includes imparting knowledge to both sitting and former legislators on the aspects of strengthening the democratic pattern of administration. Our experience has shown that better training of officers leads to better service to Members, which ultimately results in better laws for the people. I am confident that the Haryana Vidhan Sabha's efforts will set a strong example for other states and union territories.

## Suggestions for Strengthening the Legislative Process

I would like to offer a few suggestions for consideration:

1. **Drafting in Simple Language** – Bills should be drafted on the principle of *"Law for the Layman"*, in simple, common language so that even an ordinary citizen can understand their provisions.
2. **Clarity in Amendment Bills** – When an amendment bill is presented, it should clearly indicate how the relevant provision will read after the amendment is passed, enabling Members to fully understand its impact.
3. **Simplified Subordinate Legislation** – Once a law comes into force, administrative departments frame the rules for its implementation. The language of such subordinate legislation should also be simple so that officials at the grassroots can understand and implement them easily.
4. **Advance Circulation of Bills** – Officers should persuade their Ministers to ensure that Bills are sent to Parliament/Legislatures well in advance, giving Members sufficient time to study and prepare for effective participation.
5. **Consultation within Legislatures** – Though not directly applicable to officials, it is important that Ministers present proposed Bills before the legislature party, so that Members are well-informed about the laws that will be introduced in the House.

**Conclusion**

With these words, I would like to conclude by recalling the words of Dr. B. R. Ambedkar, the principal architect of our Constitution:

***"The Constitution is not a mere lawyers' document; it is a vehicle of life, and its spirit is always the spirit of the age."***

Similarly, legislative drafting is not just about writing laws—it is about shaping the future of our society. I urge all participants to make full use of this opportunity: sharpen your skills, learn from experts, and uphold the spirit of constitutional governance.

I also request the Hon'ble Speaker, Haryana Vidhan Sabha, to organize such training programmes regularly to enhance the efficiency of government and legislative administration. By adopting new technologies, this efficiency can be extended to benefit the common citizen more effectively.

I once again congratulate the Haryana Vidhan Sabha and the ICPS, Lok Sabha for this initiative, and I thank the Hon'ble Speaker for giving me this opportunity to meet all of you and share my thoughts.

**Thank you.**
**Jai Hind, Jai Karnataka.**

## 2. ಸಭಾಪತಿ ಹೊರಟ್ಟಿಗೆ 2 ಪ್ರಶಸ್ತಿ

ಮಂಡ್ಯದ 'ನಂಜಮ್ಮ ಮೋಟೇಗೌಡ ಚಾರಿಟೇಬಲ್ ಮತ್ತು ಎಜ್ಯುಕೇಶನ್ ಟ್ರಸ್ಟ್ ಕೊಪ್ಪ' ಕೊಡಮಾಡುವ 2025ನೇ ಸಾಲಿನ 'ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿಗೆ ವಿಧಾನ ಪರಿಷತ್‌ನ ಸಭಾಪತಿ ಬಸವರಾಜ ಹೊರಟ್ಟಿ ಅವರನ್ನು ಆಯ್ಕೆ ಮಾಡಲಾಗಿದೆ. ಇದಲ್ಲದೇ ಕರ್ನಾಟಕ ರಾಜಕೀಯ ಅಕಾಡೆಮಿಯ 2025 ಸಾಲಿನ ಎಂ.ಪಿ.ಪ್ರಕಾಶ ಸಂಸದೀಯ ಪ್ರಶಸ್ತಿಗೂ ಅವರು ಆಯ್ಕೆ ಆಗಿದ್ದಾರೆ.

**ಆಧಾರ:** ವಿಜಯ ಕರ್ನಾಟಕ, ದಿನಾಂಕ:03.07.2025

## 3. ಸುವರ್ಣ ಸದಸ್ಯತ್ವದ ಹಾದಿಯಲ್ಲಿ ಸಭಾಪತಿ ಹೊರಟ್ಟಿ

ಪ್ರಸ್ತುತ ರಾಜಕಾರಣ, ರಾಜಕೀಯ ಎಂದರೆ ಒಳ್ಳೆಯ ಅರ್ಥ ಕೊಡದಂತಹ ಸ್ಥಿತಿ ಇದೆ. ಆದರೆ ಈ ಮಾತು ನಾಲ್ಕೈದು ದಶಕಗಳ ಹಿಂದೆ ಇರಲಿಲ್ಲ ಸಮಾಜ ಸೇವೆ, ಬದ್ಧತೆ, ಪ್ರಾಮಾಣಿಕತೆ, ನಾಡಿನ ಅಭಿವೃದ್ಧಿಗೆ ರಾಜಕಾರಣ ಅತ್ಯುತ್ತಮ ಮಾರ್ಗ ಎಂದೇ  ಹೆಸರಾಗಿತ್ತು. ಇಂಥ ಅತ್ಯುತ್ತಮ ಮಾರ್ಗ ಇದ್ದ ಕಾಲದಿಂದ ಹೆಜ್ಜೆ ಇಟ್ಟು ಸಾಗಿ ಬಂದಿರುವ ವಿಧಾನಪರಿಷತ್ ಸಭಾಪತಿ ಬಸವರಾಜ ಮಾಡಿದ್ದಾರೆ. ಹೊರಟ್ಟಿ ಈಗ ಸದಸ್ಯರಾಗಿ 45 ವರ್ಷಗಳನ್ನು ಪೂರೈಸಿ ದಾಖಲೆ ಮಾಡಿದ್ದಾರೆ.

ಕಲುಷಿತ ರಾಜಕೀಯದ ಮಧ್ಯ ಕಪ್ಪು ಚುಕ್ಕೆ ಇಲ್ಲದೆ ತಮ್ಮದೇ ಆದ ಛಾಪು ಮೂಡಿಸಿರುವ ಅಜಾತ ಶತ್ರು ಹೊರಟ್ಟಿ ಅವರು ನಿರಂತರವಾಗಿ 1980ರಿಂದ ಶಿಕ್ಷಕರ ಕ್ಷೇತ್ರದಿಂದ ಸದಸ್ಯರಾಗಿರುವುದು ಸಾಮಾನ್ಯ ಮಾತಲ್ಲ, ಇಡೀ ದೇಶದ ರಾಜಕೀಯ ಇತಿಹಾಸದಲ್ಲಿ ಇಷ್ಟೊಂದು ದೀರ್ಘಕಾಲ ನಿರಂತರವಾಗಿ ಸದನದ ಸದಸ್ಯರಾಗಿರುವವರು ಮತ್ತೊಬ್ಬರಿಲ್ಲ. ಅವರು ಶಿಕ್ಷಣ, ಶಿಕ್ಷಕರ ಕ್ಷೇತ್ರಕ್ಕೆ ನೀಡಿರುವ ಕೊಡುಗೆ, ಬದ್ಧತೆ, ಪ್ರಾಮಾಣಿಕತೆ ಅಂಶಗಳ ಕಾರಣ ದಶಕಗಳ ಕಾಲ ಶಿಕ್ಷಕರು ಅವರ ಬೆಂಬಲಕ್ಕೆ ಗಟ್ಟಿಯಾಗಿ ನಿಂತಿದ್ದಾರೆ. ತಮ್ಮನ್ನು ಆಯ್ಕೆ ಮಾಡಿದವರು ಸಹ ಹೆಮ್ಮೆ ಪಡುವ ರೀತಿಯಲ್ಲಿ ಸದಸ್ಯರಾಗಿ, ಸಚಿವರಾಗಿ ತಮ್ಮ ಛಾಪು ಮೂಡಿಸಿದ್ದಾರೆ.

ಶಿಕ್ಷಕರ ಮಗನಾಗಿ, ಸ್ವತಃ ಶಿಕ್ಷಕರಾಗಿ ಕೊನೆಗೆ ಪರಿಷತ್ತಿನಲ್ಲಿ ಶಿಕ್ಷಕರ ಪ್ರತಿನಿಧಿಯಾಗಿ, ಶಿಕ್ಷಣ ಸಚಿವರಾಗಿ ಈಗ ಸಭಾಪತಿಯಾಗಿರುವ ಹೊರಟ್ಟಿ ಅವರು ಒಂದು ರೀತಿಯಲ್ಲಿ ಬಹು ಅದೃಷ್ಟವಂತರು. ಹಲವು ಮುಖ್ಯಮಂತ್ರಿಗಳು, ವಿವಿಧ ಸರ್ಕಾರ, ನೂರಾರು ಸಚಿವರು, ಅಧಿಕಾರಿಗಳ ಆಡಳಿತ ವೈಖರಿಗೆ ಸಾಕ್ಷಿಯಾಗಿದ್ದಾರೆ. ಶಿಕ್ಷಕರು, ಶಿಕ್ಷಣದ ಸಮಸ್ಯೆಯನ್ನು ತಳಮಟ್ಟದಿಂದ ಅರಿತಿರುವ ಹೊರಟ್ಟಿ ಅವರು ಪಟ್ಟು ಹಿಡಿದು ಪರಿಹರಿಸುತ್ತಾ ಬಂದಿದ್ದಾರೆ. ಯಾವುದೇ ಪಕ್ಷ ಇರಲಿ, ಸರ್ಕಾರ ಇರಲಿ, ಶಿಕ್ಷಕರ ವಿಚಾರದಲ್ಲಿ ಮುಲಾಜಿಲ್ಲದೆ ಚಾಟಿ ಬೀಸಿ ಸರ್ಕಾರದ ತಪ್ಪು–ಒಪ್ಪುಗಳನ್ನು ಹೇಳುವಂತಹ ಗುಣ ಅಪರೂಪ.

**ಆಧಾರ:** ಕನ್ನಡ ಪ್ರಭ, ದಿನಾಂಕ:07.07.2025

## 4. Retain 3-language formula: Horatti writes to CM

Amid debate over whether or not Karnataka should opt for a two language policy in education, Legislative Council Chairman Basavaraj Horatti has batted for the existing three language formula.

In a letter addressed to Chief Minister Siddaramaiah, School Education and Literacy Minister Madhu Bangarappa, Chief Secretary Shalini Rajaneesh, and officers, Horatti recalled that the Kothari Commission had considered the three-language formula as a key policy to promote multilingualism and national integration.

Horatti opined that he marks secured by students Hindi help them improve their overall performance in results, while the two language policy would be detrimental for around 15,000 Hindi teachers in government and aided high schools.

Horatti, who has been an MLC representing teachers since 45 years continuously, stated that two language policy may trouble communication due to lack of knowledge of languages.

"Future generations should not deprived of opportunities. More than 17,909 students had scored 100 marks out of 100 Hindi in SSLC examinations which is the maximum among all the subjects," he added.

**Courtesty:**Deccan Herold dated:15.07.2025

## 5. ವಿಧಾನ ಪರಿಷತ್‌ಗೆ ಮಹಿಳೆಯರೂ ಸಭಾಪತಿಯಾಗಲಿ: ಸಭಾಪತಿ ಹೊರಟ್ಟಿ

ಇಡೀ ದೇಶದಲ್ಲಿ ಅತ್ಯುತ್ತಮ ವಿಧಾನ ಪರಿಷತ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಕರ್ನಾಟಕ ವಿಧಾನ ಪರಿಷತ್‌ಗೆ ಮುಂದಿನ ದಿನಗಳಲ್ಲಿ ಮಹಿಳೆಯರೂ ಸಭಾಪತಿ ಸ್ಥಾನ ಅಲಂಕರಿಸುವಂತಾಗಲಿ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಎಸ್. ಹೊರಟ್ಟಿ ಆಶಿಸಿದರು.

ವಿಕಾಸಸೌಧದ ಸಮ್ಮೇಳನ ಸಭಾಂಗಣದಲ್ಲಿ ದಿನಾಂಕ:17.07.2025ರಂದು ನಡೆದ 'ಕರ್ನಾಟಕ ವಿಧಾನ ಪರಿಷತ್ತಿನ ಉಗಮ, ನಡೆದು ಬಂದ ಹಾದಿ ಹಾಗೂ ಇತಿಹಾಸದ ನಡೆ' ಕುರಿತ ಕಿರುಚಿತ್ರದ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಾಜ್ಯದ ವಿಧಾನ ಪರಿಷತ್‌ಗೆ ಇಡೀ ದೇಶದಲ್ಲಿ ಅತ್ಯುತ್ತಮ ಹೆಸರಿದೆ. ಚುನಾಯಿತ ಪ್ರತಿನಿಧಿಗಳ ಜತೆಗೆ ವಿವಿಧ ಕ್ಷೇತ್ರಗಳ ಸಾಧಕರು ಸದಸ್ಯರಾಗಿ ಕೆಲಸ ಮಾಡಿದ್ದಾರೆ ಎಂದು ಹೇಳಿದರು. ವಿಧಾನ ಪರಿಷತ್‌ಗೆ ಬಸವರಾಜೇಶ್ವರಿ ಅವರು ಮೊದಲ ಮಹಿಳಾ ಸಭಾಪತಿ ಆಗಿದ್ದರು. ಬಳಿಕ ಮತ್ತೊಬ್ಬ ಮಹಿಳೆ ಆ ಸ್ಥಾನಕ್ಕೆ ಬಂದಿಲ್ಲ. ಹೀಗಾಗಿ ಮುಂದಿನ ದಿನಗಳಲ್ಲಿ ಮಹಿಳೆಯರಿಗೂ ಹೆಚ್ಚು ಅವಕಾಶ ಸಿಗುವಂತಾಗಲಿ ಎಂದರು.

ನಾನು ಕಳೆದ 45 ವರ್ಷಗಳಿಂದ ವಿಧಾನ ಪರಿಷತ್ ಸದಸ್ಯನಾಗಿದ್ದೇನೆ. ವಿಧಾನ ಪರಿಷತ್ತಿನ ಘನತೆ ಮತ್ತು ಗೌರವ ಹೆಚ್ಚಾಗಲು ಇಲ್ಲಿ ಕೆಲಸ ಮಾಡುವ ಅಧಿಕಾರಿ–ಸಿಬ್ಬಂದಿ ಪಾತ್ರವೂ ಬಹಳ ಮುಖ್ಯವಾಗಿದೆ. ಆರಂಭದಿಂದ ಈವರೆಗೂ ಯಾವುದೇ ಚ್ಯುತಿ ಬಾರದ ಹಾಗೆ ಅಧಿಕಾರಿ–ಸಿಬ್ಬಂದಿ ವರ್ಗ ನಡೆದುಕೊಂಡಿದ್ದಾರೆ ಎಂದು ಮೆಚ್ಚುಗೆ ಸೂಚಿಸಿದರು. ಕಾನೂನು ಸಚಿವ ಎಚ್.ಕೆ. ಪಾಟೀಲ, ವಿಧಾನ ಪರಿಷತ್ ಸಭಾನಾಯಕ ಎನ್.ಎಸ್. ಬೋಸರಾಜು, ಮಾಜಿ ಸದಸ್ಯರಾದ ಕೆ.ಟಿ. ಶ್ರೀಕಂಠೇಗೌಡ, ಯು.ಬಿ. ವೆಂಕಟೇಶ್, ಪತ್ರಕರ್ತರಾದ ಈಶ್ವರ ದೈತೋಟ, ಶೇಷಚಂದ್ರಿಕಾ, ಪರಿಷತ್ತಿನ ಕಾರ್ಯದರ್ಶಿ ಕೆ. ಆರ್.ಮಹಾಲಕ್ಷ್ಮೀ ಇದ್ದರು.

**ಆಧಾರ:** ಕನ್ನಡ ಪ್ರಭ, ದಿನಾಂಕ:18.07.2025

## 6. ಸ್ಟ್ಯಾನ್‌ಫೋರ್ಡ್ ವಿವಿಯೊಂದಿಗೆ ಸಹಭಾಗಿತ್ವಕ್ಕೆ ಒಲವು

ವಿಧಾನ ಸಭಾಧ್ಯಕ್ಷ ಯು.ಟಿ. ಖಾದರ್ ನೇತೃತ್ವದ ಉನ್ನತ ಮಟ್ಟದ ನಿಯೋಗ ಅಮೆರಿಕದ ಸ್ಯಾನ್ ಫ್ರಾನ್ಸಿಸ್ಕೋದಲ್ಲಿರುವ ಪ್ರತಿಷ್ಠಿತ ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿ, ಗ್ರಾಮೀಣ ಭಾಗದ ಆರೋಗ್ಯ ಸುಧಾರಣೆ ಮತ್ತು ತಂತ್ರಜ್ಞಾನ ವಲಯದಲ್ಲಿ ಕರ್ನಾಟಕದೊಂದಿಗೆ ಸಹಭಾಗಿತ್ವ ವಹಿಸುವ ಕುರಿತು ಪ್ರಮುಖ ಮಾತುಕತೆ ನಡೆಸಿದೆ.

ನಿಯೋಗವು ಸ್ಟ್ಯಾನ್‌ಫೋರ್ಡ್ ವಿವಿ ಪ್ರೊಫೆಸರ್‌ಗಳಾದ ಅನುರಾಗ್ ಮತ್ತು ನಂದನ್ ಅವರನ್ನು ಭೇಟಿ ಮಾಡಿ, ಹೃದಯ, ಸ್ಟ್ರೋಕ್ ಮತ್ತು ಕ್ಯಾನ್ಸರ್‌ನಂತಹ ಮಾರಕ ರೋಗಗಳಿಗೆ ಕಡಿಮೆ ವೆಚ್ಚದಲ್ಲಿ ಚಿಕಿತ್ಸೆ ನೀಡುವ ತಂತ್ರಜ್ಞಾನಗಳ ಕುರಿತು ಚರ್ಚಿಸಿದೆ. ಅದರಲ್ಲಿಯೂ ಸ್ಟೆಂಟ್ ಅಳವಡಿಕೆ, ಹಾರ್ಟ್ ಬ್ಲಾಕೇಜ್, ರಕ್ತ ಹೆಪ್ಪುಗಟ್ಟುವಿಕೆ ಮತ್ತು ಸರ್ವಿಕಲ್ ಕ್ಯಾನ್ಸರ್ ತಡೆಗಟ್ಟುವ ಹೊಸ ತಂತ್ರಜ್ಞಾನಗಳ ಸಂಶೋಧನೆಗಳ ಬಗ್ಗೆ ಮಾಹಿತಿ ವಿನಿಮಯ ಮಾಡಿಕೊಳ್ಳಲಾಗಿದೆ. ಚಿಕಿತ್ಸೆ ಮತ್ತು ರೋಗ ನಿರ್ಣಯದಲ್ಲಿ ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನದ ಬಳಕೆಯ ಕುರಿತು ಚರ್ಚೆಗಳು ನಡೆದಿವೆ.

ಗ್ರಾಮೀಣ ರೈತರಿಗೆ ಅನುಕೂಲವಾಗುವಂತೆ ಸುಧಾರಿತ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿಯೂ ಮಾತುಕತೆಗಳು ನಡೆದಿವೆ. ಕಡಿಮೆ ದರದಲ್ಲಿ ಗ್ರಾಮೀಣ ಜನರಿಗೆ ಸುಲಭವಾಗಿ ಲಭ್ಯವಾಗುವಂತೆ ಎಲೆಕ್ಟ್ರಿಕಲ್ ಸ್ಕೂಟರ್, ಆಟೋ ಮತ್ತು ಸೌರಶಕ್ತಿ ಚಾಲಿತ ವಾಹನಗಳನ್ನು ತಲುಪಿಸುವ ನಿಟ್ಟಿನಲ್ಲಿಯೂ ಸಂಶೋಧನೆಗಳು ನಡೆಯುತ್ತಿದೆ. ಜಲ ಮತ್ತು ಇಂಧನ ಮರುಬಳಕೆ, ವಿಜ್ಞಾನ ಅಭಿವೃದ್ಧಿ ಮತ್ತು ದತ್ತಾಂಶ ವಿಜ್ಞಾನದ ಬಗ್ಗೆಯೂ ಸಂಶೋಧನೆಗಳು ನಡೆಯುತ್ತಿವೆ. ಈ ಎಲ್ಲಾ ಸಂಶೋಧನೆಗಳಿಗೆ ಕರ್ನಾಟಕ ಸರಕಾರವು ಆಸಕ್ತಿ ವಹಿಸಿದರೆ ಹೆಚ್ಚಿನ ಸಹಭಾಗಿತ್ವ ಸಾಧ್ಯವಾಗಲಿದೆ ಎಂದು ವಿವಿ ಪ್ರಾಧ್ಯಾಪಕರು ಅವರೊಂದಿಗೆ ಮಂಜುನಾಥ್ ಭಂಡಾರಿ ಶಾಸಕರಾದ ಬಿ.ಆರ್. 'ಪಾಟೀಲ್, ಸುರೇಶ ಬಾಬು: ಭೀಮಣ್ಣ ನಾಯಕ್, ಶ್ರೀನಿವಾಸ ಮಾನೆ, ಪಿ.ಎಂ. ಆಶೋಕ್, ಅಶೋಕ್ ರೈ, ಗುರುರಾಜ್ ಗಂಟಿಹೊಳಿ, ಸುರೇಶ್ ಶೆಟ್ಟಿ ಮತ್ತು ದಿನೇಶ್ ಗೂಳಿಗೌಡ ಅವರು ಉಪಸ್ಥಿತರಿದ್ದರು.

**ಆಧಾರ:** ವಿಶ್ವವಾಣಿ ದಿನಾಂಕ:04.08.2025

## 7. ಅಮೆರಿಕದ ಬೋಸ್ಟನ್ ಶೃಂಗಸಭೆಯಲ್ಲಿ ಹೊರಟ್ಟಿ ನಿಯೋಗ

ಆಮೆರಿಕದಲ್ಲಿರುವ ಉತ್ತಮ ಶಿಕ್ಷಣ, ವೈದ್ಯಕೀಯ ಮತ್ತು ಆರೋಗ್ಯ ಸೇವಾ ವ್ಯವಸ್ಥೆಯನ್ನು ಸಮಗ್ರವಾಗಿ ಅಧ್ಯಯನ ನಡೆಸಿ ಕರ್ನಾಟಕದಲ್ಲೂ ಅಗತ್ಯಾನುಸಾರ ಮಾರ್ಪಾಡುಗಳೊಂದಿಗೆ ಸಂಯೋಜಿಸುವುದರಿಂದ ಎರಡೂ ಕ್ಷೇತ್ರದಲ್ಲಿ ನಮ್ಮ ರಾಜ್ಯ ಮತ್ತಷ್ಟು ಸುಧಾರಣೆ ತರಲು ಸಾಧ್ಯವಾಗಲಿದೆ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಪ್ರತಿಪಾದಿಸಿದರು.

ಅಮೆರಿಕದ ಬೋಸ್ಟನ್ ನಗರದಲ್ಲಿ ನಡೆಯುತ್ತಿರುವ 'ಶಾಸಕಾಂಗ ಶೃಂಗಸಭೆ–2025'ರಲ್ಲಿ ದಿನಾಂಕ:07.08.2025ರಂದು ಎರಡನೇ ದಿನ ನಡೆದ 'ಅಮೆರಿಕ ಮತ್ತು ಭಾರತದಲ್ಲಿನ ಶಿಕ್ಷಣ ಮತ್ತು ಆರೋಗ್ಯ ವ್ಯವಸ್ಥೆ' ಕುರಿತ ದುಂಡು ಮೇಜಿನ ಸಭೆಯಲ್ಲಿ ಅವರು ಮಾತನಾಡಿದರು.

ಜಗತ್ತಿನ ಅನೇಕ ರಾಷ್ಟ್ರಗಳಿವೆ, ಒಂದೊಂದು ಕ್ಷೇತ್ರದಲ್ಲಿ ಒಂದೊಂದು ದೇಶ ಅತ್ಯಾಧುನಿಕ ವ್ಯವಸ್ಥೆಗಳೊಂದಿಗೆ ಮುಂಚೂಣಿಯಲ್ಲಿರುತ್ತದೆ. ಅಂತಹ ಅಂಶಗಳನ್ನು ಇತರೆ ದೇಶಗಳು ಅಧ್ಯಯನ ನಡೆಸಿ ತಮಗೂ ಸರಿ ಎನಿಸುವುದಾದರೆ ಅಳವಡಿಸಿಕೊಳ್ಳುವುದರಲ್ಲಿ ತಪ್ಪಿಲ್ಲ. ಈ ನಿಟ್ಟಿನಲ್ಲಿ ಅಮೆರಿಕದ

ಶಿಕ್ಷಣ ಮತ್ತು ಆರೋಗ್ಯ ವ್ಯವಸ್ಥೆ ಬಹಳ ಉತ್ತಮವಾಗಿದೆ. ಇಲ್ಲಿನ ಕೆಲವು ಅಂಶಗಳನ್ನು ಕರ್ನಾಟಕದ ಶಿಕ್ಷಣ, ಆರೋಗ್ಯ, ವೈದ್ಯಕೀಯ ಸೇವಾ ವ್ಯವಸ್ಥೆಯಲ್ಲಿ ಸಂಯೋಜಿಸಲು ಸಾಧ್ಯವಾಗುವುದಾದರೆ ಸರ್ಕಾರ ಪರಿಶೀಲಿಸಲಿ. ಇದರಿಂದ ಈ ಕ್ಷೇತ್ರಗಳಲ್ಲಿ ಇನ್ನಷ್ಟು ಪ್ರಗತಿ ಸಾಧಿಸಲು, ಕಟ್ಟಕಡೆಯ ವ್ಯಕ್ತಿಗೂ ಶಿಕ್ಷಣ ಮತ್ತು ಆರೋಗ್ಯ ಸೇವೆ ನೀಡಲು ಸಾಧ್ಯವಾಗಲಿದೆ ಎಂದರು. ಈ ಎರಡೂ ವಿಚಾರಗಳು ತಮಗೆ ಹೆಚ್ಚಿನ ಗಮನ ಸೆಳೆದಿದ್ದು, ಘಾನಾ ಮತ್ತು ಅಮೆರಿಕದ ಸೆನೆಟರ್‌ಗಳೊಂದಿಗೆ(ಪ್ರತಿನಿಧಿಗಳು) ಈ ವಿಚಾರದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಅಲ್ಲಿನ ಮೂಲಭೂತ ಸೇವೆಗಳ ಬಗ್ಗೆ ನಮ್ಮ ರಾಜ್ಯ ಸರ್ಕಾರದ ಗಮನಕ್ಕೆ ತರಲಾಗುವುದು. ರಾಜ್ಯದ ಜನರಿಗೆ ಮೂಲಸೌಕರ್ಯಗಳಾದ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರದ ಬಗ್ಗೆ ಬೆಳಕು ಚೆಲ್ಲಲು ವಿಶೇಷವಾಗಿ ಬರುವ ಮಳೆಗಾಲದ ಅಧಿವೇಶನದ ಸಂದರ್ಭದಲ್ಲೂ ಈ ಬಗ್ಗೆ ಚರ್ಚಿಸಿ ಸದನದ ಗಮನ ಸೆಳೆಯುವುದಾಗಿ ಹೇಳಿದರು.

ಯುಎಸ್‌ನಲ್ಲಿರುವ ವಿಶ್ವದ ಶ್ರೇಷ್ಠ ಶಿಕ್ಷಣ ಸಂಸ್ಥೆಗಳಾದ ಮೆಸಾಚುಸೆಟ್ಸ್ ಆಫ್ ಟೆಕ್ನಾಲಜಿ (ಎಂಐಟಿ), ಹಾರ್ವರ್ಡ್ ಶಿಕ್ಷಣ ಸಂಸ್ಥೆಗಳಿಗೆ ಭೇಟಿ ನೀಡಿ ಅಧ್ಯಯನ ಮಾಡಿ ಅಲ್ಲಿರುವ ಸೌಲಭ್ಯಗಳನ್ನು ರಾಜ್ಯದಲ್ಲಿ ಹಂತ–ಹಂತವಾಗಿ ಅಳವಡಿಸಲು ಸರ್ಕಾರದ ಗಮನ ಸೆಳೆಯಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು. ಪ್ರಜಾಪ್ರಭುತ್ವ ರಾಷ್ಟ್ರಗಳ ಸರ್ವಾಂಗೀಣ ಅಭ್ಯುದಯದಲ್ಲಿ ಅಲ್ಲಿನ ಶಾಸನ ಸಭೆಗಳು ಹಾಗೂ ಜನಪ್ರತಿನಿಧಿಗಳ ಪಾತ್ರ ಅತ್ಯಂತ ಮಹತ್ತರವಾದುದು. ಶಾಸನಸಭೆಗಳಲ್ಲಿ ಕ್ರಿಯಾಶೀಲತೆ ಹಾಗೂ ಪಕ್ಷಭೇದವಿಲ್ಲದ ಅಭಿವೃದ್ಧಿಪರ ಚಿಂತನೆಯಿಂದ ಮಾತ್ರ ರಾಷ್ಟ್ರದ ಭವಿಷ್ಯ ಉಜ್ವಲವಾಗಬಲ್ಲದು ಎಂದರು.

ವಿಧಾನಸಭೆ ಸ್ಪೀಕರ್ ಯು.ಟಿ.ಖಾದರ್ ಮತ್ತು ಸಭಾಪತಿ ಬಸವರಾಜ ಎಸ್. ಹೊರಟ್ಟಿ ಅವರ ನೇತೃತ್ವದಲ್ಲಿ ಶಾಸಕರಾದ ಅರವಿಂದ್ ಬೆಲ್ಲದ್, ಬಿ.ಆರ್.ಪಾಟೀಲ್, ಭೀಮಣ್ಣ ನಾಯಕ್, ವಿಧಾನ ಪರಿಷತ್ ಉಪ ಸಭಾಪತಿ ಎಂ. ಕೆ.ಪ್ರಾಣೇಶ್, ಸದಸ್ಯರಾದ ಗೂಳಿಗೌಡ, ಎನ್.ರವಿಕುಮಾರ್, ಭಾರತಿ ಶೆಟ್ಟಿ, ಟಿ.ಎ.ಶರವಣ, ಅಶೋಕ್ ಪಟ್ಟಣ್, ಹೇಮಲತಾ ನಾಯಕ್ ಸೇರಿದಂತೆ ಹಲವು ಜನಪ್ರತಿನಿಧಿಗಳ ನಿಯೋಗ ಭಾಗವಹಿಸಿದೆ.

**ಆಧಾರ:**ಕನ್ನಡ ಪ್ರಭ, ದಿನಾಂಕ:08.08.2025

## 8. ಮೇಲ್ಮನೆಯಲ್ಲಿ ಸಭಾಪತಿ ಹೊರಟ್ಟಿ ಗುಣಗಾನ

ವಿಧಾನ ಪರಿಷತ್ ಸದಸ್ಯರಾಗಿ ಸುದೀರ್ಘ 45 ವರ್ಷಗಳ ಕಾಲ ಸೇವೆ ಸಲ್ಲಿಸಿರುವ ಹಾಲಿ ಸಭಾಪತಿ ಬಸವರಾಜ ಎಸ್. ಹೊರಟ್ಟಿ ಅವರಿಗೆ ಮೇಲ್ಮನೆಯಲ್ಲಿ ಪಕ್ಷಬೇಧ ಮರೆತು ಸದಸ್ಯರು ಹಾಡಿ ಹೊಗಳಿದರು.

ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್‌ನ ಮಂಜುನಾಥ ಭಂಡಾರಿ ಮಂಡಿಸಿದ ಅಭಿನಂದನಾ ಪ್ರಸ್ತಾವನೆಗೆ ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಸದಸ್ಯರು ಹೊರಟ್ಟಿಯವರ ನಾಲ್ಕೂವರೆ ದಶಕಗಳ ಸೇವೆಯನ್ನು ಮುಕ್ತಕಂಠದಿಂದ ಪ್ರಶಂಸಿಸಿದರು.

ಪ್ರಾರಂಭದಲ್ಲಿ ಮಾತನಾಡಿದ ಕಾಂಗ್ರೆಸ್‌ನ ಬಿ.ಕೆ. ಹರಿಪ್ರಸಾದ್, ನೀವು ಮೊದಲ ಬಾರಿಗೆ ವಿಧಾನಪರಿಷತ್‌ನ ಸದಸ್ಯರಾಗಿ ಆಯ್ಕೆಯಾದ ವೇಳೆ ನಾವು ಆಗಿನ್ನೂ ರಾಜಕೀಯಕ್ಕೆ ಕಾಲಿಟ್ಟಿದ್ದೆವು. ಯುವ ಕಾಂಗ್ರೆಸ್ ಮೂಲಕ ನಾನು ರಾಜಕೀಯ ಪ್ರವೇಶ ಮಾಡಿದ್ದೆ ಎಂದು ನೆನಪಿಸಿಕೊಂಡರು. ಶಿಕ್ಷಕರ ಕ್ಷೇತ್ರದ ಮೂಲಕ ಮೇಲ್ಮನೆಗೆ ಆಯ್ಕೆಯಾಗಿ ಈಗಲೂ ಅದೇ ಕ್ಷೇತ್ರದಿಂದ ಆಯ್ಕೆಯಾಗಿರುವ ನಿಮ್ಮ

ಅನುಭವ ಸಂಸದೀಯ ವ್ಯವಸ್ಥೆ ಬಗ್ಗೆ ತಿಳಿದುಕೊಂಡಿರುವ ಜ್ಞಾನ, ಸದನದಲ್ಲಿ ನಡೆದುಕೊಳ್ಳುವ ರೀತಿ ಸದಸ್ಯರಿಗೆ ತಿಳಿ ಹೇಳುವುದು ಎಲ್ಲವೂ ಮಾದರಿಯಾಗಿದೆ' ಎಂದು ಹೊಗಳಿದರು. 'ನಿಮ್ಮಂತಹ ಹಿರಿಯರ ಅನುಭವ ಈ ಸದನಕ್ಕೆ ಈಗಲೂ ಅವಶ್ಯಕತೆ ಇದೆ. ಪಕ್ಷ ಯಾವುದೇ ಇರಲಿ, ಸಿದ್ಧಾಂತ ಏನೇ ಇರಲಿ, ಒಬ್ಬ ಸುದೀರ್ಘ ಅನುಭವ ಹೊಂದಿರುವ ರಾಜಕಾರಣಿಯನ್ನು ಅಭಿನಂದಿಸುವುದು ಭಾರತ ಚರಿತ್ರೆಯಲ್ಲಿ ನಡೆದುಕೊಂಡು ಬಂದಿರುವ ಉದಾಹರಣೆಗಳಿವೆ. ಹೀಗಾಗಿ ಈ ಸದನವು ನಿಮ್ಮ ಸೇವೆಯನ್ನು ಸದಾ ನೆನಪಿಟ್ಟುಕೊಳ್ಳುತ್ತದೆ' ಎಂದರು.

ಮಂಜುನಾಥ ಭಂಡಾರಿ ಮಾತನಾಡಿ, ಓರ್ವ ಜನಪ್ರತಿನಿಧಿ ಸತತ 45 ವರ್ಷಗಳ ಕಾಲ ಸಾರ್ವಜನಿಕ ಜೀವನದಲ್ಲಿರುವುದು ಸಾಮಾನ್ಯ ಮಾತಲ್ಲ, ಅದರಲ್ಲೂ ಒಂದೇ ಕ್ಷೇತ್ರದಿಂದ ಆಯ್ಕೆಯಾಗಿ ಬರುವುದು ಈಗಿನ ವ್ಯವಸ್ಥೆಯಲ್ಲಿ ಕಷ್ಟದ ಮಾತು. ಮತದಾರರು ಒಂದು ಬಾರಿ ಆಯ್ಕೆ ಮಾಡಿದರೆ ಮತ್ತೊಂದು ಬಾರಿ ಆಯ್ಕೆ ಮಾಡುವುದೇ ಕಷ್ಟ. ಅಂತಹುದರಲ್ಲಿ 45 ವರ್ಷ ಗೆದ್ದು ಬಂದಿದ್ದೀರಿ ಎಂದರೆ ಅದೊಂದು ದಾಖಲೆಯೇ ಸರಿ ಎಂದು ಹೇಳಿದರು. ಅಲ್ಲದೆ 18 ಮಂದಿ ಮುಖ್ಯಮಂತ್ರಿಗಳು, 432 ಸಚಿವರು, 5 ಸಾವಿರಕ್ಕೂ ಹೆಚ್ಚು ಶಾಸಕರ ಜೊತೆ ನಿಮಗೆ ಒಡನಾಟವಿದೆ. ನನಗೆ ತಿಳಿದಿರುವ ಪ್ರಕಾರ, ಭಾರತದ ಇತಿಹಾಸದಲ್ಲೇ ಇದು ಸುದೀರ್ಘವಾದ ದಾಖಲೆ ಎಂದು ಬಣ್ಣಿಸಿದರು.

ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಮಾತನಾಡಿ, ನಿಮ್ಮ ಪ್ರಾಮಾಣಿಕತೆ, ಸರಳತೆ, ಮತದಾರರು ಇಟ್ಟ ವಿಶ್ವಾಸವೇ ಈ ಸದನಕ್ಕೆ ಆಯ್ಕೆ ಮಾಡಲು ಕಾರಣ. ಯಾವುದೇ ಪಕ್ಷದಲ್ಲಿದ್ದರೂ ನೀವು ಪಕ್ಷಾತೀತವಾಗಿ ನಡೆದುಕೊಂಡಿದ್ದೀರಿ ಎಂದು ಹೇಳಿದರು. ಇದೇ ವಿಷಯದ ಸದಸ್ಯರಾದ ಎಚ್. ವಿಶ್ವನಾಥ್, ಐವಾನ್ ಡಿಸೋಜ ಸೇರಿದಂತೆ ಮತ್ತಿತರರು ಮಾತನಾಡಿದರು.

**ಆಧಾರ:** ವಿಶ್ವವಾಣಿ, ದಿನಾಂಕ:20.08.2025

## 9. ಗ್ರೇಟರ್ ಬೆಂಗಳೂರು ಆಡಳಿತ ತಿದ್ದುಪಡಿ ವಿಧೇಯಕ ಪಾಸ್

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಪ್ರಕಾರ್ಯಗಳನ್ನು ಕುರಿತು ಸ್ಪಷ್ಟತೆಯನ್ನು ನೀಡುವ ಗ್ರೇಟರ್ ಬೆಂಗಳೂರು ಆಡಳಿತ ತಿದ್ದುಪಡಿ ವಿಧೇಯಕ 2025ಕ್ಕೆ ಪ್ರತಿಪಕ್ಷ ಸದಸ್ಯರ ತೀವ್ರ ಆಕ್ಷೇಪ, ಅಸಮತೋಲನಗಳ ನಡುವೆ ವಿಧಾನ ಸಭೆಯಲ್ಲಿ ದಿನಾಂಕ:19.08.2025ರಂದು ಅಂಗೀಕಾರ ದೊರೆಯಿತು.

ಈ ಮಧ್ಯೆ, ಪ್ರಾಧಿಕಾರಕ್ಕೆ "ಗ್ರೇಟರ್ ಎಂದು ಇಂಗ್ಲೀಷ್ ಪದ ಬಳಕೆ ಮಾಡಿರುವುದಕ್ಕೆ ಆಕ್ಷೇಪಿಸಿದ ಪ್ರತಿಪಕ್ಷ ಬಿಜೆಪಿ ಸದಸ್ಯರು, ನಗರ ಪಾಲಿಕೆಗಳಲ್ಲಿ ಮೇಯರ್ ಪ್ರಥಮ ಪ್ರಜೆ. ಆದರೆ, ಈ ಪ್ರಾಧಿಕಾರಕ್ಕೆ ಮುಖ್ಯಮಂತ್ರಿ ಅವರನ್ನು ಏಕೆ ಮುಖ್ಯಸ್ಥರನ್ನಾಗಿ ಮಾಡಲಾಗಿದೆ. ಇದು ಸ್ಥಳೀಯ ಸಂಸ್ಥೆಗಳನ್ನು ಸರ್ಕಾರದ ಕಪಿಮುಷ್ಟಿಯಲ್ಲಿ ಇಟ್ಟುಕೊಳ್ಳಲು ರಚಿಸಿರುವ ಪ್ರಾಧಿಕಾರ ಎಂದು ಆರೋಪಿಸಿದ ಪ್ರತಿಪಕ್ಷಗಳ ಸದಸ್ಯರು ರದ್ದುಪಡಿಸಬೇಕೆಂದು ಆಗ್ರಹಿಸಿದ ಘಟನೆ ನಡೆಯಿತು. ಇದಕ್ಕೆ ಕೋಪಗೊಂಡ ಡಿಸಿಎಂ ಡಿ.ಕೆ.ಶಿವಕುಮಾರ್ ಪ್ರಾಧಿಕಾರದ ವಿಚಾರದಲ್ಲಿ ನಾನು ಯಾವುದನ್ನೂ ಮುಚ್ಚಿಡಲು ಸಿದ್ಧನಿಲ್ಲ, ಬೆಂಗಳೂರು ಶಾಸಕರೆಲ್ಲರೂ ಹೇಳಲಿ ನಿಮಗೆ ಬೇಡ ಎಂದರೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ ರಚನೆ ಕಾಯ್ದೆಯನ್ನೇ ವಾಪಸ್ ಪಡೆಯಲು ಸಿದ್ಧ. ಬೇಕಿದ್ದರೆ ಇನ್ನೊಮ್ಮೆ ಸಭೆ ಕರೆಯುತ್ತೇನೆ. ಎಲ್ಲರೂ ಸಲಹೆ, ಅನಿಸಿಕೆ ಕೊಡಿ ಎಂದರು.

ಇದಕ್ಕೂ ಮುನ್ನ ಬೆಂಗಳೂರು ಅಭಿವೃದ್ಧಿ ಸಚಿವರೂ ಆದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ವಿಧೇಯಕವನ್ನು ಪರ್ಯಾಲೋಚನೆಗೆ ಮಂಡಿಸಿ ತಿದ್ದುಪಡಿಯ ಉದ್ದೇಶವನ್ನು ವಿವರಿಸಿದರು. ಇದೊಂದು ಸಣ್ಣ ತಿದ್ದುಪಡಿ ಅಷ್ಟೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರವು ಬೆಂಗಳೂರಿನ ಹೊಸ ಐದು ನಗರ ಪಾಲಿಕೆಗಳ ಆಡಳಿತದಲ್ಲಿ ಯಾವುದೇ ಹಸ್ತಕ್ಷೇಪ ಮಾಡುವುದಿಲ್ಲ. ಈ ಬಗ್ಗೆ ಯಾವುದೇ ಸಂಶಯ ಬೇಡ ಎನ್ನುವ ಕಾರಣಕ್ಕೆ ಸ್ಪಷ್ಟತೆಯನ್ನು ನೀಡುವ ಸಲುವಾಗಿ ಈ ತಿದ್ದುಪಡಿ ತರಲಾಗಿದೆ. ಇದರಿಂದ ನಗರ ಪಾಲಿಕೆಗಳ ನಡುವೆ ಸಮನ್ವಯ ಸಂಸ್ಥೆಯಾಗಿ ಮಾತ್ರ ಪ್ರಾಧಿಕಾರ ಕಾರ್ಯನಿರ್ವಹಿಸಲಿದೆ ಎಂದು ಸ್ಪಷ್ಟನೆ ನೀಡಿ ವಿಧೇಯಕ ಅಂಗೀಕರಿಸುವಂತೆ ಕೋರಿದರು. ಸ್ಪೀಕರ್ ಧ್ವನಿಮತದ ಮೂಲಕ ಅಂಗೀಕಾರ ಪಡೆದರು.

**ಆಧಾರ:** ಕನ್ನಡ ಪ್ರಭ, ದಿನಾಂಕ:20.08.2025

## 10. ವಿಧಾನಸಭಾ ಅಧ್ಯಕ್ಷರ ಮಾದರಿ ವ್ಯಕ್ತಿತ್ವ

ಚಿಕ್ಕವೀರಯ್ಯ(ರಾಮನಗರ) ಆದ ನಾನು ವೃತ್ತಿಯಲ್ಲಿ ಶಿಕ್ಷಕ. ಸಮೂಹ ಸಂಪನ್ಮೂಲ ವ್ಯಕ್ತಿಯಾದ ನಾನು ಮಕ್ಕಳ ಮೊಬೈಲ್ ಬಳಕೆಯ ಗೀಳು ಬಿಡಿಸಲು 'ಮೊಬೈಲ್ ಬಿಡಿ ಪುಸ್ತಕ ಹಿಡಿ' ಅಭಿಯಾನ ಆರಂಭಿಸಿದೆ. ನನ್ನ ವ್ಯಾಪ್ತಿಯ ಎಂಟು ಶಾಲೆಗಳ ಮಕ್ಕಳು ಮತ್ತು ಪೋಷಕರಲ್ಲಿ ಇದರ ದುಷ್ಪರಿಣಾಮ ಕುರಿತು ಅರಿವು ಮೂಡಿಸಿದೆ. ಇದರ ವ್ಯಾಪ್ತಿ ವಿಸ್ತರಿಸುವ ಉದ್ದೇಶದಿಂದ ಸಾಮಾಜಿಕ ಮಾಧ್ಯಮಗಳಲ್ಲಿ ಅರಿವು ಕಾರ್ಯಕ್ರಮಗಳ ವಿಡಿಯೊ ತುಣುಕುಗಳನ್ನು ಅಪ್‌ಲೋಡ್ ಮಾಡಿದ್ದರಿಂದ ವ್ಯಾಪಕ ಪ್ರಚಾರ ಸಿಕ್ಕಿತು. ಮುಖ್ಯಮಂತ್ರಿ ಅವರು, ಸ್ವಾತಂತ್ರೋತ್ಸವದ ಭಾಷಣದಲ್ಲಿ ಪ್ರಸ್ತಾಪಿಸುವಷ್ಟರ ಮಟ್ಟಿಗೆ ಈ ಕಾರ್ಯಕ್ರಮ ಪ್ರಸಿದ್ಧಿಯಾಯಿತು. ವಿಷಯ ತಿಳಿದ ವಿಧಾನ ಸಭಾಧ್ಯಕ್ಷರು ತಮ್ಮ ಅಧಿಕೃತ ಕಚೇರಿಗೆ ನನ್ನನ್ನು ಆಹ್ವಾನಿಸಿ ಸನ್ಮಾನಿಸಿದ ರೀತಿ ಮೈನವಿರೇಳಿಸಿತು ನನ್ನಂತ ಸಾಮಾನ್ಯ ಶಿಕ್ಷಕನನ್ನು ಗೌರವಿಸಿದ ರೀತಿಯಂತೂ ಎಂದಿಗೂ ಮರೆಯಲಾಗದು. ಅವರ ಸರಳ ವ್ಯಕ್ತಿತ್ವವು ಮೂಕವಿಸ್ಮಿತಗೊಳಿಸಿತು.

**ಆಧಾರ:** ಪ್ರಜಾವಾಣಿ, ದಿನಾಂಕ:22.08.2025

## 11. ಬೆಂಗಳೂರಿನಲ್ಲಿ ಸೆಪ್ಟಂಬರ್ 11ರಿಂದ 4 ದಿನಗಳ ಕಾಲ ಕಾಮನ್‌ವೆಲ್ತ್ ಸಂಸದೀಯ ಸಮ್ಮೇಳನ

ಕಾಮನ್‌ವೆಲ್ತ್ ಸಂಸದೀಯ ಸಂಘ(ಸಿಪಿಎ) ಭಾರತ ವಿಭಾಗದ 11ನೇ ಸಮ್ಮೇಳನವು ಸೆಪ್ಟೆಂಬರ್ 11ರಿಂದ 14ರವರೆಗೆ ಬೆಂಗಳೂರಿನಲ್ಲಿ ಆಯೋಜಿಸಲಾಗುತ್ತಿದ್ದು, ಅದರಲ್ಲಿ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಸೇರಿ ವಿವಿಧ ರಾಜ್ಯಗಳ ವಿಧಾನಸಭೆ ಮತ್ತು ವಿಧಾನಪರಿಷತ್ತಿನ ಸಭಾಧ್ಯಕ್ಷ ಮತ್ತು ಸಭಾಪತಿಗಳು ಪಾಲ್ಗೊಳ್ಳಲಿದ್ದಾರೆ ಎಂದು ಸ್ಪೀಕರ್ ಯು.ಟಿ.ಖಾದರ್ ತಿಳಿಸಿದರು.

ವಿಧಾನಸೌಧದಲ್ಲಿ ದಿನಾಂಕ:29.08.2025ರಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸಮ್ಮೇಳನದಲ್ಲಿ ರಾಜ್ಯ ಸಭೆ ಉಪಸಭಾಪತಿ, ವಿವಿಧ ರಾಜ್ಯಗಳ ಸಭಾಪತಿ, ಉಪಸಭಾಪತಿ, ಸಭಾಧ್ಯಕ್ಷರು ಮತ್ತು ಉಪಸಭಾಧ್ಯಕ್ಷರು, ಲೋಕಸಭೆ ಮತ್ತು ರಾಜ್ಯಸಭೆ ಮಹಾ ಕಾರ್ಯದರ್ಶಿಗಳು, ವಿವಿಧ ರಾಜ್ಯಗಳ ವಿಧಾನಸಭೆ ಮತ್ತು ಪರಿಷತ್ತಿನ ಪ್ರಧಾನ ಕಾರ್ಯದರ್ಶಿಗಳು ಪಾಲ್ಗೊಳ್ಳಲಿದ್ದಾರೆ. ಕಾಮನ್‌ವೆಲ್ತ್ ದೇಶಗಳ ಪ್ರತಿನಿಧಿಗಳಿಗೂ ಆಹ್ವಾನ ನೀಡಲಾಗಿದೆ ಎಂದರು.

ನವೆಂಬರ್ 4 ದಿನಗಳ ಸಮ್ಮೇಳನದಲ್ಲಿ ವಿವಿಧ ಕಾರ್ಯಕ್ರಮಗಳು ನಡೆಯಲಿವೆ. ಸೆಪ್ಟೆಂಬರ್ 11ರ ಮಧ್ಯಾಹ್ನ 3.30ಕ್ಕೆ ಸ್ಪೀಕರ್ ಓಂ ಬಿರ್ಲಾ ಅಧ್ಯಕ್ಷತೆಯಲ್ಲಿ ವಿಧಾನಸೌಧದಲ್ಲಿ ಸಿಪಿಎ ಕಾರ್ಯಕಾರಿ ಸಮಿತಿ ಸಭೆ ನಡೆಯಲಿದೆ. ಬಳಿಕ ವಿಧಾನಸೌಧದ ಭವ್ಯ ಮೆಟ್ಟಿಲುಗಳ ಮೇಲೆ ನಡೆಯಲಿರುವ ಕಾರ್ಯಕ್ರಮದಲ್ಲಿ ಸಿಎಂ ಸಿದ್ದರಾಮಯ್ಯ, ಓಂ ಬಿರ್ಲಾ ಸಮ್ಮೇಳನ ಉದ್ಘಾಟಿಸಲಿದ್ದಾರೆ. ಸೆಪ್ಟೆಂಬರ್ 12 ಮತ್ತು 13ರಂದು ತಾಜ್ ವೆಸ್ಟೆಂಡ್ ಹೋಟೆಲ್‌ನಲ್ಲಿ ಸಮ್ಮೇಳನ ನಡೆಯಲಿದೆ. ಸೆಪ್ಟೆಂಬರ್ 14ರಂದು ಗಣ್ಯರಿಗಾಗಿ ಮೈಸೂರು ಮತ್ತು ಸುತ್ತಮುತ್ತಲ ಸ್ಥಳಗಳಿಗೆ ಪ್ರವಾಸ ಆಯೋಜಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.

**ಆಧಾರ:** ಕನ್ನಡ ಪ್ರಭ, ದಿನಾಂಕ:30.08.2025

## 12. 'ಸದನ ಇರುವುದು ಜನರ ಒಳಿತಿಗಾಗಿ'

ಸಂಸತ್ತು ಅಥವಾ ವಿಧಾನ ಮಂಡಲದ ಸದನಗಳು ಇರುವುದು ಜನರ ಸಮಸ್ಯೆ, ಆಗು–ಹೋಗುಗಳ ಚರ್ಚೆಗೆ. ಅದನ್ನು ರಾಜಕೀಯ ಆರೋಪ ಪ್ರತ್ಯಾರೋಪಕ್ಕೆ ಬಳಸಿಕೊಳ್ಳಬಾರದು ಎಂಬ ಅಭಿಪ್ರಾಯಕ್ಕೆ ಕಾಮನ್‌ವೆಲ್ತ್, ಸಂಸದೀಯ ಸಂಘದ ಭಾರತೀಯ ವಿಭಾಗದ 11ನೇ ಸಮ್ಮೇಳನದ ಉದ್ಘಾಟನಾ ಸಮಾರಂಭದ ವೇದಿಕೆ ಸಾಕ್ಷಿಯಾಯಿತು.

ನಗರದಲ್ಲಿ ಇದೇ 12 ಮತ್ತು 13ರಂದು ನಡೆಯಲಿರುವ ಈ ಸಮ್ಮೇಳನದಲ್ಲಿ ಲೋಕಸಭೆಯ ಸ್ಪೀಕರ್ ಮತ್ತು ಉಪಸ್ಪೀಕರ್, ಎಲ್ಲ ರಾಜ್ಯಗಳ ವಿಧಾನಸಭಾಧ್ಯಕ್ಷರು, ಉಪಸಭಾಧ್ಯಕ್ಷರು, ವಿಧಾನ ಪರಿಷತ್ತಿನ ಸಭಾಪತಿ, ಉಪಸಭಾಪತಿ ಭಾಗಿಯಾಗಲಿದ್ದಾರೆ.

ದೇಶದ ಎಲ್ಲ ರಾಜ್ಯಗಳಿಂದ ಬಂದಿದ್ದ ಗಣ್ಯರನ್ನು ಬರಮಾಡಿಕೊಂಡ ನಂತರ ಸಾಕ್ಷ್ಯಚಿತ್ರವೊಂದರ ಮೂಲಕ ಅವರೆಲ್ಲರಿಗೆ ಕರ್ನಾಟಕ ಸಂಸ್ಕೃತಿ–ಪರಂಪರೆ ಮತ್ತು ಹೆಗ್ಗಳಿಕೆಯನ್ನು ಪರಿಚಯಿಸಿಕೊಡಲಾಯಿತು. 'ದೇಶದ ಮೊದಲ ಸಂಸತ್ತು ಅನುಭವ ಮಂಟಪ'. ಭಾರತದ ಪ್ರಜಾಪ್ರಭುತ್ವದ ತಳಹದಿಯನ್ನು ಕರ್ನಾಟಕ ವಚನ ಚಳವಳಿಯಿಂದಲೇ ಕಾಣಬಹುದು ಎಂದು ಸಾಕ್ಷ್ಯಚಿತ್ರವು ವಿವರಿಸಿತು.

ರಾಜ್ಯ ವಿಧಾನಸಭಾಧ್ಯಕ್ಷ ಯು.ಟಿ.ಖಾದರ್, ಸದನಗಳಲ್ಲಿ ನಡೆಯುವ ಕಲಾಪವನ್ನು ಇನ್ನಷ್ಟು ಉತ್ತಮಗೊಳಿಸುವ ಹಾದಿಗಳನ್ನು ಈ ಸಮ್ಮೇಳನದಲ್ಲಿ ಚರ್ಚಿಸುತ್ತೇವೆ' ಎಂದರು. ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ, 'ಸದನಗಳು ಇರುವುದು ಚರ್ಚೆ ಮತ್ತು ಸಂವಾದದ ಮೂಲಕ ಜನರ ಕಷ್ಟ, ಸಮಸ್ಯೆ, ಆಗುಹೋಗುಗಳ ಬಗ್ಗೆ ಗಮನಹರಿಸಲು. ಜನಪ್ರತಿನಿಧಿಗಳು ಇದೇ ಹಾದಿಯಲ್ಲಿ ನಡೆಯುವಂತೆ ನೋಡಿಕೊಳ್ಳುವ ಗುರುತರ ಹೊಣೆಗಾರಿಕೆ ಸಭಾಧ್ಯಕ್ಷರ ಮೇಲಿದೆ' ಎಂದರು.

'ನಮ್ಮ ಸಂವಿಧಾನವನ್ನು ಅಂಗೀಕರಿಸಿಕೊಳ್ಳುವ ಮುನ್ನ ಸುದೀರ್ಘವಾದ ಚರ್ಚೆ ನಡೆದಿದೆ. ವಾದ–ಪ್ರತಿವಾದಗಳು, ಸಮ್ಮತಿ–ಅಸಮ್ಮತಿಗಳು ಹಾಗೂ ಅವೆಲ್ಲವನ್ನು ಒಳಗೊಂಡ ಸಮನ್ವಯವಾದದ ರೂಪವಾಗಿ ಸಂವಿಧಾನ ರೂಪುಗೊಂಡಿದೆ. ಸದನ–ಕಲಾಪವನ್ನು ಇನ್ನಷ್ಟು ಉತ್ತಮವಾಗಿ ಹೇಗೆ ನಡೆಸಬಹುದು ಎಂಬುದರ ಸಾಧ್ಯತೆಗಳನ್ನು ಈ ಎರಡು ದಿನಗಳ ಸಮ್ಮೇಳನದಲ್ಲಿ ಪರಿಶೀಲಿಸೋಣ ಎಂದು ಕರೆ ನೀಡಿದರು.

ರಾಜ್ಯದ ಸಾಂಸ್ಕೃತಿಕ ಪರಂಪರೆಗೆ ಬಸವಣ್ಣನ ಕೊಡುಗೆಯನ್ನು ರಾಜ್ಯಸಭೆಯ ಉಪಸಭಾಪತಿ ಹರಿವಂಶ್ ನಾರಾಯಣ್ ಸಿಂಗ್ ಪ್ರಸ್ತಾಪಿಸಿದರೆ, ವಿಧಾನ ಪರಿಷತ್ತಿನ ಮಹತ್ವವನ್ನು ಸಭಾಪತಿ ಬಸವರಾಜ ಎಸ್. ಹೊರಟ್ಟಿ ಅವರು ವಿವರಿಸಿದರು. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿದರು.

**ಆಧಾರ:** ಪ್ರಜಾವಾಣಿ, ದಿನಾಂಕ:12.09.2025

## 13. **ಶಾಸನಸಭೆಗಳಲ್ಲಿ ಜನಕಲ್ಯಾಣದ ಚರ್ಚೆ ಆಗಲಿ: ಓಂ ಬಿರ್ಲಾ**

ಪ್ರಜೆಗಳ ಆಕಾಂಕ್ಷೆಗಳನ್ನು ಈಡೇರಿಸಲು ಸಂಸತ್ತು, ವಿಧಾನಸಭೆಗಳಲ್ಲಿ ಜನಕಲ್ಯಾಣದ ಆರೋಗ್ಯಕರ ಚರ್ಚೆಗಳಾಗಬೇಕು. ಗದ್ದಲ, ಆರೋಪ–ಪ್ರತ್ಯಾರೋಪಗಳಿಗೆ ಅವಕಾಶ ನೀಡಬಾರದು ಎಂದು ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ಹೇಳಿದ್ದಾರೆ.

ವಿಧಾನಸೌಧದ ಮೆಟ್ಟಿಲುಗಳ ಮೇಲೆ ದಿನಾಂಕ:11.09.2025ರಂದು ಕಾಮನ್‌ವೆಲ್ತ್ ಸಂಸದೀಯ ಸಂಘದ ಭಾರತ ವಲಯದ 11ನೇ ಸಮ್ಮೇಳನ ಉದ್ಘಾಟಿಸಿ ಮಾತನಾಡಿ, ದಿನದಿಂದ ದಿನಕ್ಕೆ ಜನಪ್ರತಿನಿಧಿ ಸಭೆಗಳಲ್ಲಿ ಗಾಂಭೀರ್ಯತೆ ಇಲ್ಲದೆ, ಚರ್ಚೆಗಳ ಗುಣಮಟ್ಟ ತಳಮಟ್ಟಕ್ಕೆ ತಲುಪುತ್ತಿದೆ. ರಾಜಕೀಯ ಆರೋಪ–ಪ್ರತ್ಯಾರೋಪಗಳೇ ಪ್ರಾಮುಖ್ಯತೆ ಪಡೆದು ಜನರ ಅಭಿವೃದ್ಧಿ ಸಂಬಂಧಿಸಿದ ವಿಷಯಗಳ ಗೌಣವಾಗುತ್ತಿವೆ ಎಂದು ಆತಂಕ ವ್ಯಕ್ತಪಡಿಸಿದರು.

ಶಾಸನಸಭೆಗಳಲ್ಲಿ ಚರ್ಚೆಗಳು, ಸಂವಾದಗಳ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿ, ಸದನಗಳು ಕೇವಲ ಔಪಚಾರಿಕತೆ ಸೀಮಿತವಾಗದೆ ನೈಜ ವಿಚಾರಗಳ ಕುರಿತು ವಿಶ್ವಾಸ ಮೂಡಿಸುವ ಗಹನವಾದ ಚರ್ಚೆಗಳ ವೇದಿಕೆಯಾಗಬೇಕು. ಜನಪ್ರತಿನಿಧಿಗಳು ಕೇವಲ ಚುನಾವಣೆ ವೇಳೆ ಮಾತ್ರ ಉತ್ತರ ದಾಯಿಗಳಾಗದೆ ಪ್ರತಿನಿತ್ಯವೂ ಜನರ ವಿಚಾರಗಳಿಗೆ ವಿಧಾನಸಭೆಯಲ್ಲಿ ಸ್ಪಂದಿಸುವ ಉತ್ತರದಾಯಿಗಳಾಗಬೇಕು ಎಂದರು.

ತುಳಿತಕ್ಕೆ ಒಳಗಾದ ಸಮುದಾಯಗಳಿಗೆ ಧ್ವನಿಯಾಗಿ ಚರ್ಚೆಗಳನ್ನು ನಡೆಸುವ ಬಹುತ್ವದ ವೇದಿಕೆಯಾಗಬೇಕು. ಸಂಸತ್ತಿನಲ್ಲಿ ಜನಗಳ ಧ್ವನಿ ಪ್ರತಿಧ್ವನಿಸಬೇಕು. ಜಗತ್ತಿನ ಅತ್ಯುತ್ತಮ ಸಂಸದೀಯ ವ್ಯವಹಾರಗಳ ಮಾದರಿಗಳನ್ನು ನೋಡಿ ಅನುಸರಿಸಬೇಕು. ಐಲ್ಯಾರ್ಂಡಿನ ಶಾಸನಸಭೆ, ಬ್ರೆಜಿಲ್‌ನ ಬಜೆಟ್ ರಚನೆಯಲ್ಲಿ ಜನರ ಪಾಲ್ಗೊಳ್ಳುವಿಕೆ ಹಾಗೂ ನಮ್ಮ ದೇಶದ ಗ್ರಾಮ ಸಭೆಗಳು ಮಾದರಿಯಾಗಬೇಕು. ಪ್ರಜಾಪ್ರಭುತ್ವದಲ್ಲಿ ನಾವಿನ್ಯತೆ ಅಳವಡಿಸಿಕೊಳ್ಳುವ ಮೂಲಕ ಜನರ ನಂಬಿಕೆಗಳನ್ನು ಗಟ್ಟಿಗೊಳಿಸಬೇಕು ಎಂದರು.

ಸತ್ಯಕ್ಕಿಂತ ಸುಳ್ಳು ವೇಗವಾಗಿ ಹಬ್ಬಿ, ಭಾವನೆಗಳು ಮೇಲುಗೈ ಸಾಧಿಸುವ ಈ ಸಂದರ್ಭದಲ್ಲಿ ಪ್ರಜಾಪ್ರಭುತ್ವಕ್ಕೆ ಅಪಾಯ ಕಾಡುತ್ತಿದೆ. ಹೀಗಾಗಿ ಪ್ರಜಾಪ್ರಭುತ್ವದ ಮೂಲ ಆಶಯವಾಗಿರುವ ನ್ಯಾಯ, ಸಮಾನತೆ, ಭ್ರಾತೃತ್ವ, ಮೌಲ್ಯಗಳನ್ನು ಶಾಸನಸಭೆಗಳು ಎತ್ತಿ ಹಿಡಿಯಬೇಕು. ಸಿನಿಕತೆ, ವ್ಯವಹಾರಿಕ ರಾಜಕೀಯಕ್ಕೆ ಸಂಸತ್ತು ವೇದಿಕೆಯಾಗದೆ ಮೌಲ್ಯಗಳ ರಕ್ಷಕನಾಗಬೇಕು ಎಂದು ಸಿಎಂ ಕರೆ ನೀಡಿದರು.

ಸ್ಪೀಕರ್ ಯು.ಟಿ.ಖಾದರ್ ಮಾತನಾಡಿ, ಜಗತ್ತಿನ ಅತ್ಯುತ್ತಮ ಸಂಸದೀಯ ವ್ಯವಹಾರಗಳು, ಪ್ರಕ್ರಿಯೆಗಳನ್ನು ಅಳವಡಿಸಿಕೊಂಡು ಶಾಸನ ಸಭೆಯನ್ನು ಅತ್ಯುತ್ತಮಗೊಳಿಸಲು ಈ ಸಮ್ಮೇಳನ ನೆರವಾಗುತ್ತದೆ ಎನ್ನುವ ವಿಶ್ವಾಸವಿದೆ ಎಂದರು.

ರಾಜ್ಯಸಭೆಯ ಉಪ ಸಭಾಪತಿ ಹರಿವಂಶ ನಾರಾಯಣ ಸಿಂಗ್, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ವಿಧಾನ ಪರಿಷತ್ ಸಭಾಪತಿ ಬಸವರಾಜ ಎಸ್. ಹೊರಟ್ಟಿ, ಕಾನೂನು ಸಚಿವ ಎಚ್.ಕೆ. ಪಾಟೀಲ್ ಸೇರಿ ಇನ್ನಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

**ಆಧಾರ:** ಕನ್ನಡ ಪ್ರಭ, ದಿನಾಂಕ:12.09.2025

# ಭಾಗ–2

# ಕರ್ನಾಟಕ ವಿಧಾನಮಂಡಲದ ಕಾರ್ಯಚಟುವಟಿಕೆಗಳು

# 1. ಕರ್ನಾಟಕ ವಿಧಾನ ಪರಿಷತ್ತಿನ 156ನೇ ಅಧಿವೇಶನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

ವಿಧಾನ ಪರಿಷತ್ತಿನ 156ನೇ ಅಧಿವೇಶನದ ಉಪವೇಶನದಲ್ಲಿ ನಡೆದಿರುವ ಕಾರ್ಯಕಲಾಪಗಳ ವಿವರವನ್ನು ಸದನಕ್ಕೆ ತಿಳಿಸಲು ಇಚ್ಛಿಸುತ್ತೇನೆ. ಪ್ರಸ್ತುತ ಅಧಿವೇಶನವು ದಿನಾಂಕ:11.08.2025 ರಿಂದ 22.08.2025ರವರೆಗೆ ಒಟ್ಟು 09 ದಿನಗಳು ಅಂದರೆ, 55ಗಂಟೆ 25ನಿಮಿಷಗಳ ಕಾಲ ನಡೆಸಲಾಗಿರುತ್ತದೆ.

ಪ್ರತಿ ಅಧಿವೇಶನದ ಪ್ರಾರಂಭದಲ್ಲಿ ಸಂವಿಧಾನದ ಪೀಠಿಕೆಯನ್ನು ಎಲ್ಲಾ ಮಾನ್ಯ ಶಾಸಕರುಗಳು ಓದಬೇಕೆಂದು ನಿರ್ಣಯಿಸಲಾಗಿರುವ ರೀತ್ಯಾ, ಪ್ರಸ್ತುತ ಅಧಿವೇಶನದ ಮೊದಲ ದಿನದ ಉಪವೇಶನದಲ್ಲಿ ಎಲ್ಲಾ ಮಾನ್ಯ ಶಾಸಕರುಗಳಿಂದ ಸಂವಿಧಾನದ ಪೀಠಿಕೆಯನ್ನು ಪಠಣ ಮಾಡಲಾಯಿತು.

ಕಳೆದ ಅಧಿವೇಶನದಿಂದೀಚೆಗೆ ನಿಧನರಾದ ಒಟ್ಟು 11 ಗಣ್ಯರುಗಳಿಗೆ ಸದನವು ತನ್ನ ಸಂತಾಪವನ್ನು ವ್ಯಕ್ತಪಡಿಸಿತು.

ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ರಾಷ್ಟ್ರಪತಿಯವರಿಂದ ಹಾಗೂ ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಕಾರ್ಯದರ್ಶಿಯವರು ಮಂಡಿಸಿದರು.

2025–26ನೇ ಸಾಲಿನ ಪೂರಕ ಅಂದಾಜುಗಳು (ಮೊದಲನೇ ಕಂತು) ಹಾಗೂ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳ 1 ಮತ್ತು 2ನೇ ಪಟ್ಟಿಗಳನ್ನು ಮಂಡಿಸಲಾಯಿತು.

ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ, 2023–24ಕ್ಕೆ ಕೊನೆಗೊಂಡ ವರ್ಷಕ್ಕೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ರಾಜ್ಯದ ಹಣಕಾಸಿನ ವ್ಯವಹಾರಗಳ ಲೆಕ್ಕಪರಿಶೋಧನಾ (2025ರ ವರದಿ ಸಂಖ್ಯೆ:4) ವರದಿ, ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷಕ್ಕೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ರಾಜ್ಯ ಕಂದಾಯದ ವರದಿ (2025ರ ವರದಿ ಸಂಖ್ಯೆ:5), 2020–2022ನೇ ಸಾಲಿನ ಪಂಚಾಯತ್‌ರಾಜ್ ಸಂಸ್ಥೆಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳ ಮೇಲಿನ ಸಂಯೋಜಿತ ವಾರ್ಷಿಕ ತಾಂತ್ರಿಕ ಪರಿಶೀಲನಾ ವರದಿ, ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷಕ್ಕೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಅನುಸರಣಾ ಲೆಕ್ಕಪರಿಶೋಧನಾ ವರದಿ (2025ರ ವರದಿ ಸಂಖ್ಯೆ:3), ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಲ್ಯಾಣದ (2025ರ ವರದಿ ಸಂಖ್ಯೆ:02) ವರದಿ ಹಾಗೂ ಮಾರ್ಚ್2023ಕ್ಕೆ ಕೊನೆಗೊಂಡ ವರ್ಷಕ್ಕೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಅನುಸರಣಾ ಲೆಕ್ಕಪರಿಶೋಧನೆ–ಸಿವಿಲ್ (2025ರ ವರದಿ ಸಂಖ್ಯೆ:06) ವರದಿಗಳನ್ನು ಮಂಡಿಸಲಾಯಿತು.

ಕರ್ನಾಟಕ ವಿಧಾನ ಪರಿಷತ್ತಿನ ಹಕ್ಕುಬಾಧ್ಯತಾ ಸಮಿತಿಯ 104ನೇ ವರದಿ, ವಿಧಾನ ಪರಿಷತ್ತಿನ ಸರ್ಕಾರಿ ಭರವಸೆಗಳ ಸಮಿತಿಯ 2023–24 ಹಾಗೂ 2024–25ನೇ ಸಾಲಿನ 50ನೇ ವರದಿ, ಕರ್ನಾಟಕ ವಿಧಾನ ಮಂಡಲದ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್‌ರಾಜ್ ಸಂಸ್ಥೆಗಳ ಸಮಿತಿಯ 43ನೇ ವರದಿ, ಅಧೀನ ಶಾಸನ ರಚನಾ ಸಮಿತಿಯ 53ನೇ ವರದಿ, ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ 5ನೇ ವರದಿ, ಹಿಂದುಳಿದ ವರ್ಗಗಳ ಹಾಗೂ ಅಲ್ಪ ಸಂಖ್ಯಾತರ ಕಲ್ಯಾಣ ಸಮಿತಿಯ 02ನೇ ವರದಿಗಳನ್ನು ಒಪ್ಪಿಸಲಾಯಿತು.

ವಿಧಾನ ಮಂಡಲದ ಜಂಟಿ ಸಮಿತಿಗಳು ಹಾಗೂ ವಿಧಾನ ಪರಿಷತ್ತಿನ ವಿವಿಧ ಸ್ಥಾಯಿ ಸಮಿತಿಗಳಿಗೆ ಚುನಾವಣೆ ನಡೆಸುವ ಬದಲು ಸದಸ್ಯರುಗಳನ್ನು ನಾಮನಿರ್ದೇಶಿಸಲು ಮಾನ್ಯ ಸಭಾಪತಿಯವರಿಗೆ ಅಧಿಕಾರ ನೀಡುವ ಬಗ್ಗೆ ಪ್ರಸ್ತಾವವನ್ನು ಸದನದಲ್ಲಿ ಮಂಡಿಸಿ ಸದನದ ಸಹಮತಿಯನ್ನು ಪಡೆಯಲಾಯಿತು.

ರಾಜ್ಯದ ವಿವಿಧ ನಿಗಮಗಳಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಕೈಗೊಂಡಿರುವ ಕಾಮಗಾರಿಗಳಲ್ಲಿ ನಡೆದಿರುವ ಅವ್ಯವಹಾರಗಳ ಸಂಬಂಧ ಪರಿಶೀಲಿಸಿ ವರದಿಯನ್ನು ಸಲ್ಲಿಸಲು ರಚಿಸಲಾಗಿರುವ ವಿಶೇಷ ಸದನ ಸಮಿತಿಯ ಕಾಲಾವಕಾಶವನ್ನು ದಿನಾಂಕ:22.04.2025ರವರೆಗೆ ವಿಸ್ತರಿಸಿರುವ ಪ್ರಸ್ತಾವನೆಯನ್ನು ಮಂಡಿಸಿ ಅಂಗೀಕರಿಸಲಾಯಿತು ಹಾಗೂ ಸಮಿತಿಯ ಅಂತಿಮ ವರದಿಯನ್ನು ಒಪ್ಪಿಸಲಾಯಿತು.

ಮೂರು ಅಧಿಕೃತ ನಿರ್ಣಯಗಳನ್ನು ಸ್ವೀಕರಿಸಲಾಗಿದ್ದು, ಆ ಪೈಕಿ ಎರಡು ಅಧಿಕೃತ ನಿರ್ಣಯಗಳನ್ನು ಸದನದಲ್ಲಿ ಮಂಡಿಸಿ ಅಂಗೀಕರಿಸಲಾಗಿರುತ್ತದೆ.

ನಿಯಮ 59 ರಡಿಯಲ್ಲಿ ಒಟ್ಟು 04 ಸೂಚನೆಗಳನ್ನು ಸ್ವೀಕರಿಸಲಾಗಿದ್ದು, ಆ ಪೈಕಿ 01 ಸೂಚನೆಯನ್ನು ನಿಯಮ 68ಕ್ಕೆ ಪರಿವರ್ತಿಸಿ ಉತ್ತರಿಸಲಾಯಿತು.ಉಳಿದಂತೆ 01 ಸೂಚನೆಯನ್ನು ನಿಯಮ 72ಕ್ಕೆ ಪರಿವರ್ತಿಸಲಾಗಿರುತ್ತದೆ. 02 ಸೂಚನೆಗಳನ್ನು ನಿಯಮ 330ಕ್ಕೆ ಪರಿವರ್ತಿಸಿ, ಒಂದನ್ನು ಚರ್ಚಿಸಿ ಉತ್ತರಿಸಲಾಯಿತು.

ನಿಯಮ 68ರಡಿಯಲ್ಲಿ 04 ಸೂಚನೆಗಳನ್ನು ಸ್ವೀಕರಿಸಲಾಗಿದ್ದು, ಚರ್ಚೆಯಾಗಿರುವುದಿಲ್ಲ.

ಪ್ರಸ್ತುತ ಅಧಿವೇಶನದಲ್ಲಿ ಒಟ್ಟು 1431 ಪ್ರಶ್ನೆಗಳನ್ನು ಸ್ವೀಕರಿಸಲಾಗಿರುತ್ತದೆ.ಅದರಲ್ಲಿ 135 ಪ್ರಶ್ನೆಗಳನ್ನು ಚುಕ್ಕೆ ಗುರುತಿನ ಪ್ರಶ್ನೆಗಳನ್ನಾಗಿ ಅಂಗೀಕರಿಸಿದ್ದು, ಅವುಗಳ ಪೈಕಿ 95 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು. (34) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಗಳನ್ನು ಮಂಡಿಸಲಾಗಿರುತ್ತದೆ. ಲಿಖಿತ ಮೂಲಕ ಉತ್ತರಿಸುವ ಒಟ್ಟು 1296 ಪ್ರಶ್ನೆಗಳ ಪೈಕಿ 798 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಗಳನ್ನು ಮಂಡಿಸಲಾಯಿತು.

ನಿಯಮ 58ರಡಿಯಲ್ಲಿ ಅರ್ಧಗಂಟೆ ಕಾಲಾವಧಿ ಚರ್ಚೆಗಾಗಿ ಒಟ್ಟು 04 ಸೂಚನೆಗಳನ್ನು ಸ್ವೀಕರಿಸಲಾಗಿರುತ್ತದೆ.ಯಾವುದೇ ಸೂಚನೆಯನ್ನು ಚರ್ಚೆಗೆ ತೆಗೆದುಕೊಂಡಿರುವುದಿಲ್ಲ.

ನಿಯಮ 72ರಡಿಯಲ್ಲಿ 134 ಸೂಚನೆಗಳನ್ನು ಸ್ವೀಕರಿಸಿದ್ದು, ಅವುಗಳ ಪೈಕಿ 15 ಸೂಚನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು ಹಾಗೂ 65 ಸೂಚನೆಗಳಿಗೆ ಉತ್ತರಗಳನ್ನು ಮಂಡಿಸಲಾಯಿತು.

ನಿಯಮ 330ರಡಿಯಲ್ಲಿ 84 ಸೂಚನೆಗಳನ್ನು ಸ್ವೀಕರಿಸಿದ್ದು, ಅವುಗಳ ಪೈಕಿ 04 ಸೂಚನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು ಹಾಗೂ 32 ಸೂಚನೆಗಳಿಗೆ ಉತ್ತರಗಳನ್ನು ಮಂಡಿಸಲಾಯಿತು.

ಶೂನ್ಯ ವೇಳೆ ಪ್ರಸ್ತಾವನೆಯ ಒಟ್ಟು 71 ಸೂಚನೆಗಳ ಪೈಕಿ 26 ಸೂಚನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು ಹಾಗೂ 19 ಸೂಚನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸಲಾಯಿತು.

ವಿಧಾನ ಸಭೆಯಿಂದ ತಿದ್ದುಪಡಿಯೊಂದಿಗೆ ಅಂಗೀಕೃತ ರೂಪದಲ್ಲಿರುವ 04 ವಿಧೇಯಕಗಳು ಹಾಗೂ ಅಂಗೀಕೃತ ರೂಪದಲ್ಲಿರುವ 33 ವಿಧೇಯಕಗಳು ಸೇರಿದಂತೆ ಒಟ್ಟು 37 ವಿಧೇಯಕಗಳಿಗೆ ವಿಧಾನ ಪರಿಷತ್ತು ತನ್ನ ಸಹಮತಿಯನ್ನು ನೀಡಿರುತ್ತದೆ ಹಾಗೂ 03 ವಿಧೇಯಕಗಳನ್ನು ಹಿಂಪಡೆಯಲಾಯಿತು.

**ಮಾನ್ಯ ಸಭಾನಾಯಕರು ಹಾಗೂ ವಿರೋಧ ಪಕ್ಷದ ಸದಸ್ಯರು ಮಾತನಾಡಿದ ನಂತರ:–**

ಮಾನ್ಯ ಮುಖ್ಯಮಂತ್ರಿಗಳಿಗೆ, ಮಾನ್ಯ ಉಪ ಮುಖ್ಯಮಂತ್ರಿಗಳಿಗೆ, ಮಾನ್ಯ ಸಭಾನಾಯಕರಿಗೆ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ, ಎಲ್ಲಾ ಮಂತ್ರಿ ವರ್ಗದವರಿಗೆ, ಸರ್ಕಾರದ ಮುಖ್ಯ ಸಚೇತಕರಿಗೆ, ವಿರೋಧ ಪಕ್ಷದ ಮುಖ್ಯ ಸಚೇತಕರಿಗೆ ಹಾಗೂ ಎಲ್ಲಾ ಶಾಸಕರುಗಳಿಗೆ, ಪತ್ರಿಕಾ ಹಾಗೂ ಮಾಧ್ಯಮ ವರದಿಗಾರರಿಗೆ, ವಿಧಾನ ಪರಿಷತ್ತಿನ ಸಚಿವಾಲಯದ ಅಧಿಕಾರಿ/ನೌಕರವರ್ಗದವರಿಗೆ ಮತ್ತು ಸರ್ಕಾರದ ಎಲ್ಲಾ ಅಧಿಕಾರಿ/ನೌಕರ ವೃಂದದವರಿಗೆ ಸದನದ ಕಾರ್ಯಕಲಾಪಗಳನ್ನು ಸುಗಮವಾಗಿ ನಡೆಸಲು ಸಹಕರಿಸಿದ್ದಕ್ಕೆ ತುಂಬು ಹೃದಯದ ಧನ್ಯವಾದಗಳನ್ನು ಸಲ್ಲಿಸಿದರು.

*****

## ೨. 2025–26ನೇ ಸಾಲಿನ ವಿಧಾನ ಪರಿಷತ್ತಿನ ವಿವಿಧ ಸಮಿತಿಗಳ ವಿಧಾನ ಮಂಡಲದ ಜಂಟಿ ಸ್ಥಾಯಿ ಸಮಿತಿಗಳ ಚುನಾವಣಾ ಕಾರ್ಯಕ್ರಮದ ವೇಳಾಪಟ್ಟಿ

**ಕರ್ನಾಟಕ ವಿಧಾನ ಪರಿಷತ್ತು**

**ಲಘು ಪ್ರಕಟಣೆ ಭಾಗ –2**

# 156ನೇ ಅಧಿವೇಶನ

**(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)**
**ದಿನಾಂಕ:13ನೇ ಆಗಸ್ಟ್, 2025**

**ಸಂಖ್ಯೆ:33**

**2025–2026ನೇ ಸಾಲಿನ ವಿಧಾನ ಪರಿಷತ್ತಿನ ವಿವಿಧ ಸಮಿತಿಗಳ/ವಿಧಾನ ಮಂಡಲದ ಜಂಟಿ ಸ್ಥಾಯಿ ಸಮಿತಿಗಳ ಚುನಾವಣಾ ಕಾರ್ಯಕ್ರಮದ ವೇಳಾಪಟ್ಟಿ.**

**‘ಅ’**

| ಕ್ರ. ಸಂ | ವಿಶ್ವವಿದ್ಯಾಲಯದ ಹೆಸರು | ಚುನಾಯಿತರಾಗ ಬೇಕಾದ ಸದಸ್ಯರ ಸಂಖ್ಯೆ | ನಾಮಪತ್ರಗಳನ್ನು ಸ್ವೀಕರಿಸಲು ಗೊತ್ತುಪಡಿಸಿದ ಕೊನೆಯ ದಿನಾಂಕ | ನಾಮಪತ್ರಗಳನ್ನು ಹಿಂತೆಗೆದುಕೊಳ್ಳಲು ಗೊತ್ತುಪಡಿಸಿದ ಕೊನೆಯ ದಿನಾಂಕ | ಅವಶ್ಯವಿದ್ದಲ್ಲಿ ಚುನಾವಣೆಯ ದಿನಾಂಕ ಮತ್ತು ವೇಳೆ |
|---|---|---|---|---|---|
| 01 | ಹಕ್ಕುಬಾಧ್ಯತೆಗಳ ಸಮಿತಿ | 07 | ಸೋಮವಾರ, ದಿನಾಂಕ:18ನೇ ಆಗಸ್ಟ್, 2025, ಮಧ್ಯಾಹ್ನ:3.00 ಗಂಟೆಯವರೆಗೆ | ಮಂಗಳವಾರ, ದಿನಾಂಕ:19ನೇ ಆಗಸ್ಟ್ 2025, ಮಧ್ಯಾಹ್ನ:12.00 ಗಂಟೆಯವರೆಗೆ | ತದನಂತರ ತಿಳಿಸಲಾಗುವುದು |
| 02 | ಸರ್ಕಾರಿ ಭರವಸೆಗಳ ಸಮಿತಿ | 09 | “–” | “–” | “–” |
| 03 | ಖಾಸಗಿ ಸದಸ್ಯರುಗಳ ವಿಧೇಯಕಗಳು ಹಾಗೂ ನಿರ್ಣಯಗಳ ಸಮಿತಿ | 08 | “–” | “–” | “–” |
| 04 | ವಸತಿ ಸಮಿತಿ | 05 | “–” | “–” | “–” |
| | | | **‘ಆ’** | | |
| 01 | ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ | 05 | “–” | “–” | “–” |
| 02 | ಸಾರ್ವಜನಿಕ ಉದ್ಯಮಗಳ ಸಮಿತಿ | 05 | “–” | “–” | “–” |

| | | | | | |
|---|---|---|---|---|---|
| 03 | ಅಧೀನ ಶಾಸನ ರಚನಾ ಸಮಿತಿ | 05 | "–" | "–" | "–" |
| 04 | ಅನುಸೂಚಿತಜಾತಿ ಪಂಗಡಗಳ ಕಲ್ಯಾಣ ಸಮಿತಿ | 05 | "–" | "–" | "–" |
| 05 | ಹಿಂದುಳಿದ ವರ್ಗಗಳ ಮತ್ತುಅಲ್ಪಸಂಖ್ಯಾತರ ಕಲ್ಯಾಣ ಸಮಿತಿ | 05 | "–" | "–" | "–" |

**ಸೂಚನೆ:**

1. ನಾಮಪತ್ರಗಳನ್ನು ಸೂಚನಾ ಪತ್ರ ಶಾಖೆಯಿಂದ ಪಡೆಯಬಹುದು (ಕೊಠಡಿ ಸಂಖ್ಯೆ: 104, ಒಂದನೇ ಮಹಡಿ, ವಿಧಾನಸೌಧ, ಬೆಂಗಳೂರು)

2. ಒಂದು ವೇಳೆ ಚುನಾವಣೆ ಅವಶ್ಯವಿದ್ದಲ್ಲಿ ಚುನಾವಣೆಯ ಸ್ಥಳವನ್ನು ಪ್ರತ್ಯೇಕವಾಗಿ ತಿಳಿಸಲಾಗುವುದು. ಏಕಸಂಕ್ರಮಣೀಯ ಪ್ರಮಾಣಾನುಸಾರವಾಗಿ ದಾಮಾಷಾ ಪ್ರಾತಿನಿಧ್ಯದ ಮೇರೆಗೆ ಚುನಾವಣೆಗಳನ್ನು ನಡೆಸಲಾಗುವುದು.

**ಕೆ.ಆರ್. ಮಹಾಲಕ್ಷ್ಮಿ**
**ಕಾರ್ಯದರ್ಶಿ**

**ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಸದಸ್ಯರುಗಳ ಮಾಹಿತಿಗಾಗಿ.**

**www.kla.kar.nic.in/council.htm**

## 3. ಮಾನ್ಯ ಸಭಾಪತಿ ಮತ್ತು ಮಾನ್ಯ ಉಪ ಸಭಾಪತಿಗಳ ಗೈರು ಹಾಜರಿಯಲ್ಲಿ ಸಭಾಪತಿ ಸ್ಥಾನದಲ್ಲಿ ಪದಧಾರಣ ಮಾಡಲು ಸದಸ್ಯರುಗಳ ನಾಮನಿರ್ದೇಶನ ಮಾಡುವ ಬಗ್ಗೆ

**ಕರ್ನಾಟಕ ವಿಧಾನ ಪರಿಷತ್ತು**

**156ನೇ ಅಧಿವೇಶನ**

**ಲಘು ಪ್ರಕಟಣೆ ಭಾಗ–2**

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

ಬುಧವಾರ, ದಿನಾಂಕ: 13ನೇ ಆಗಸ್ಟ್, 2025

ಸಂಖ್ಯೆ:34

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 9ರ ಮೇರೆಗೆ ಮಾನ್ಯ ಸಭಾಪತಿಯವರ ಮತ್ತು ಉಪ ಸಭಾಪತಿಯವರಗೈರು ಹಾಜರಿಯಲ್ಲಿ ಸಭಾಪತಿಯವರ ಸ್ಥಾನದಲ್ಲಿ ಪದಧಾರಣ ಮಾಡಲು ಈ ಮುಂದಿನ ಸದಸ್ಯರುಗಳನ್ನು ಮಾನ್ಯ ಸಭಾಪತಿಯವರು ನಾಮನಿರ್ದೇಶನ ಮಾಡಿರುತ್ತಾರೆಂದು ಈ ಮೂಲಕ ತಿಳಿಸಲಾಗಿದೆ.

1. ಶ್ರೀ ಬಿ.ಕೆ.ಹರಿಪ್ರಸಾದ್
2. ಶ್ರೀಮತಿ ಭಾರತಿ ಶೆಟ್ಟಿ
3. ಶ್ರೀ ಎಸ್.ಎಲ್. ಭೋಜೇಗೌಡ
4. ಶ್ರೀ ಮಂಜುನಾಥ್ ಭಂಡಾರಿ

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ

ವಿಧಾನ ಪರಿಷತ್ತಿನ ಮಾನ್ಯಶಾಸಕರುಗಳಿಗೆ,

## 4. ಕರ್ನಾಟಕ ವಿಧಾನಮಂಡಲದ ಜಂಟಿ ಸಮಿತಿಗಳು ಹಾಗೂ ವಿಧಾನ ಪರಿಷತ್ತಿನ ಸಮಿತಿಗಳ ಅಧ್ಯಕ್ಷರು ಹಾಗೂ ಸದಸ್ಯರುಗಳನ್ನು ಮುಂದುವರೆಸುವ ಬಗ್ಗೆ

# ಕರ್ನಾಟಕ ವಿಧಾನ ಪರಿಷತ್ತು

## 156ನೇ ಅಧಿವೇಶನ

## ಲಘು ಪ್ರಕಟಣೆ ಭಾಗ –2

**(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)**

**ಶನಿವಾರ, ದಿನಾಂಕ:30ನೇ ಆಗಸ್ಟ್, 2025**

**ಸಂಖ್ಯೆ:35**

2024–25ನೇ ಸಾಲಿನ ಕರ್ನಾಟಕ ವಿಧಾನ ಮಂಡಲದ ಜಂಟಿ ಸಮಿತಿಗಳಿಗೆ ಹಾಗೂ ವಿಧಾನ ಪರಿಷತ್ತಿನ ವಿವಿಧ ಸಮಿತಿಗಳಿಗೆ ನೇಮಕ ಮಾಡಲಾಗಿದ್ದ ಅಧ್ಯಕ್ಷರುಗಳು ಹಾಗೂ ಸದಸ್ಯರುಗಳನ್ನು 2025–26ನೇ ಸಾಲಿನ ಸಮಿತಿಗಳನ್ನು ರಚಿಸುವವರೆಗೆ ಮುಂದುವರೆಸಲಾಗಿದೆ ಎಂಬ ವಿಷಯವನ್ನು ಎಲ್ಲಾಮಾನ್ಯ ಶಾಸಕರುಗಳಿಗೆ ಈ ಮೂಲಕ ತಿಳಿಯಪಡಿಸಲಾಗಿದೆ.

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ

**ಗೆ:**
**ವಿಧಾನ ಪರಿಷತ್ತಿನಎಲ್ಲಾ ಮಾನ್ಯ ಶಾಸಕರುಗಳಿಗೆ**

**5. ಶ್ರೀ ಪುಟ್ಟಣ್ಣ, ವಿಧಾನ ಪರಿಷತ್ತಿನ ಸದಸ್ಯರು, ಇವರ ಅಧ್ಯಕ್ಷತೆಯಲ್ಲಿ ವಿಶೇಷ ಸದನ ಸಮಿತಿ ರಚನೆ**

# ಕರ್ನಾಟಕ ವಿಧಾನ ಪರಿಷತ್ತು

## 156ನೇ ಅಧಿವೇಶನ

## <u>ಲಘು ಪ್ರಕಟಣೆ ಭಾಗ – 2</u>

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

**ಮಂಗಳವಾರ, ದಿನಾಂಕ: 2ನೇ ಸೆಪ್ಟೆಂಬರ್, 2025**

**ಸಂಖ್ಯೆ: 36**

ವಿಧಾನ ಪರಿಷತ್ತಿನ ಮಾನ್ಯ ಶಾಸಕರಾದ ಶ್ರೀ ಪುಟ್ಟಣ್ಣ ಅವರು 155ನೇ ಅಧಿವೇಶನದಲ್ಲಿ ದಿನಾಂಕ:19.03.2025ರಂದು ನಿಯಮ 330ರ ಅಡಿ ಪ್ರಾಥಮಿಕ ಶಾಲೆಯಿಂದ ಪ್ರೌಢ ಶಾಲೆಗೆ, ಪ್ರೌಢ ಶಾಲೆಯಿಂದ ಪದವಿ ಪೂರ್ವ ಕಾಲೇಜುಗಳಿಗೆ ಪದೋನ್ನತಿ ಹೊಂದಿದ ಶಿಕ್ಷಕರುಗಳು ಹಾಗೂ 10, 15, 20, 25 ಮತ್ತು 30 ವರ್ಷಗಳ ಕಾಲಬದ್ದ ವೇತನ ಮುಂಬಡ್ತಿ ಸೌಲಭ್ಯಗಳನ್ನು ಪಡೆದಿರುವ ಶಿಕ್ಷಕರುಗಳ ನಡುವಿನ ವೇತನ ತಾರತಮ್ಯವನ್ನು ಸರಿಪಡಿಸುವ ಕುರಿತು ಚರ್ಚಿಸಿದ್ದು, ಸದರಿ ವೇತನ ತಾರತಮ್ಯವನ್ನು ಸರಿಪಡಿಸುವ ಸಂಬಂಧ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 242(ಎ) ರೀತ್ಯಾ, ಮಾನ್ಯ ಶಾಸಕರಾದ ಶ್ರೀ ಪುಟ್ಟಣ್ಣ ಅವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡ ಶಾಸಕರನ್ನೊಳಗೊಂಡಂತೆ ವಿಶೇಷ ಸದನ ಸಮಿತಿಯನ್ನು ರಚಿಸಲಾಗಿರುತ್ತದೆ. ಸಮಿತಿಯು ಮೂರು ತಿಂಗಳ ಅವಧಿಯೊಳಗೆ ವರದಿಯನ್ನು ಸಲ್ಲಿಸುವುದು.

ಶ್ರೀಯುತರುಗಳಾದ:

1. ಶಶೀಲ್ ಜಿ. ನಮೋಶಿ
2. ಎಸ್.ವ್ಹಿ. ಸಂಕನೂರ
3. ನಿರಾಣಿ ಹಣಮಂತ್ ರುದ್ರಪ್ಪ
4. ಎಸ್.ಎಲ್. ಭೋಜೇಗೌಡ
5. ಡಿ.ಟಿ. ಶ್ರೀನಿವಾಸ್(ಡಿ.ಟಿ.ಎಸ್)

....2..

**<u>ಪರಿಶೀಲನಾಂಶ</u>**

ಪ್ರಾಥಮಿಕ ಶಾಲಾ ಶಿಕ್ಷಕ ಹುದ್ದೆಯಿಂದ ವಿದ್ಯಾರ್ಹತೆ ಮತ್ತು ಸೇವಾ ಜೇಷ್ಠತೆಯ ಅನ್ವಯ ಪ್ರೌಢ ಶಾಲಾ ಶಿಕ್ಷಕರ ಹುದ್ದೆಗೆ ಪದೋನ್ನತಿ ಪಡೆದ ಪ್ರೌಢ ಶಾಲಾ ಶಿಕ್ಷಕರು ಹಾಗೂ ಪ್ರೌಢ ಶಾಲಾ ಶಿಕ್ಷಕರ ಹುದ್ದೆಯಿಂದ ವಿದ್ಯಾರ್ಹತೆ ಮತ್ತು ಸೇವಾ ಜೇಷ್ಠತೆಯ ಅನ್ವಯ ಪದವಿ ಪೂರ್ವ ಶಿಕ್ಷಣ ಕಾಲೇಜುಗಳ ಉಪನ್ಯಾಸಕರ ಹುದ್ದೆಗೆ ಪದೋನ್ನತಿ ಪಡೆದ ಉಪನ್ಯಾಸಕರುಗಳಿಗೆ ಪದೋನ್ನತಿ ಪಡೆದಿರುವ ಒಂದೇ ಕಾರಣದಿಂದಾಗಿ ಸರ್ಕಾರಿ ಆದೇಶಗಳ ಅನ್ವಯ 10, 15, 20, 25 ಮತ್ತು 30 ವರ್ಷಗಳ ಕಾಲಬದ್ಧ ವೇತನ ಮುಂಬಡ್ತಿ ಪಡೆಯಲು ಅವಕಾಶ ನೀಡುತ್ತಿಲ್ಲದ ಕಾರಣ ಶಿಕ್ಷಕರುಗಳ ನಡುವೆ ಉಂಟಾಗಿರುವ ವೇತನ ತಾರತಮ್ಯದ ಸಮಸ್ಯೆಯ ಪರಿಹಾರಕ್ಕಾಗಿ ಮಾರ್ಗೋಪಾಯಗಳನ್ನು ಸೂಚಿಸಿ ವರದಿಯನ್ನು ಸಲ್ಲಿಸಲು ವಿಶೇಷ ಸದನ ಸಮಿತಿಯನ್ನು ರಚಿಸಲಾಗಿರುತ್ತದೆ.

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ,
ಕರ್ನಾಟಕ ವಿಧಾನ ಪರಿಷತ್ತು.

**ವಿಧಾನ ಪರಿಷತ್ತಿನ ಮಾನ್ಯ ಶಾಸಕರುಗಳಿಗೆ.**

**<u>www.kla.kar.nic.in/council.htm</u>**

## 6. ವಿಶೇಷ ಸದನ ಸಮಿತಿಯ ಪರಿಶೀಲನಾಂಶಗಳು

# ಕರ್ನಾಟಕ ವಿಧಾನ ಪರಿಷತ್ತು
# 156ನೇ ಅಧಿವೇಶನ
## ಲಘು ಪ್ರಕಟಣೆ ಭಾಗ – 2

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

**ಸೋಮವಾರ, ದಿನಾಂಕ:15ನೇ ಸೆಪ್ಟೆಂಬರ್, 2025**

## ಸಂಖ್ಯೆ: 38

ಮಾನ್ಯ ಶಾಸಕರಾದ ಶ್ರೀ ಪುಟ್ಟಣ್ಣ ಅವರ ಅಧ್ಯಕ್ಷತೆಯಲ್ಲಿ ಸರ್ಕಾರಿ ಹಾಗೂ ಅನುದಾನಿತ ಶಾಲೆ ಕಾಲಮಿತಿ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ಪದೋನ್ನತಿ ಹೊಂದಿದ ಶಿಕ್ಷಕರು/ಪ್ರಾಂಶುಪಾಲರುಗಳ ಹಾಗೂ ಕಾಲಮಿತಿ ಮತ್ತು ಕಾಲಬದ್ಧ ವೇತನ ಮುಂಬಡ್ತಿ ಪಡೆದಿರುವ ಶಿಕ್ಷಕರು/ಪ್ರಾಂಶುಪಾಲರ ನಡುವಿನ ವೇತನತಾರತಮ್ಯ ಸರಿಪಡಿಸಲು ವಿಶೇಷ ಸದನ ಸಮಿತಿಯನ್ನು ದಿನಾಂಕ:02.09.2025ರಂದು ರಚಿಸಲಾಗಿರುತ್ತದೆ ತತ್ಸಂಬಂಧದಲ್ಲಿ ಹೊರಡಿಸಿರುವ ಲಘು ಪ್ರಕಟಣೆ ಭಾಗ–2 (ಸಂಖ್ಯೆ:36)ರಲ್ಲಿನ ಪರಿಶೀಲನಾಂಶಗಳನ್ನು ಸಮಿತಿಯ ತೀರ್ಮಾನದ ರೀತ್ಯಾ ಈ ಕೆಳಕಂಡಂತೆ ಮಾರ್ಪಡಿಸಲಾಗಿರುತ್ತವೆ ಶಿಕ್ಷಕರುಗಳ/ಉಪನ್ಯಾಸಕರುಗಳ ವೇತನತಾರತಮ್ಮ ಸಮಸ್ಯೆಯ ಪರಿಹಾರಕ್ಕಾಗಿ ಮಾರ್ಗೋಪಾಯಗಳನ್ನು ಸೂಚಿಸಿ 3 ತಿಂಗಳ ಅವಧಿಯೊಳಗಾಗಿ ವರದಿಯನ್ನು ಸಲ್ಲಿಸುವುದು.

**ಪರಿಶೀಲನಾಂಶಗಳು**

1. ಸರ್ಕಾರಿ ಹಾಗೂ ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರು ವಿದ್ಯಾರ್ಹತೆ ಮತ್ತು ಸೇವಾ ಜೇಷ್ಠತೆಯ ಮೇಲೆ ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರ ಹುದ್ದೆಗೆ ಹಾಗೂ ಪ್ರೌಢ ಶಾಲಾ ಸಹ ಶಿಕ್ಷಕರ ಹುದ್ದೆಗೆ ಪದೋನ್ನತಿ ಪಡೆದಿರುವಕಾರಣದಿಂದಾಗಿಆರ್ಥಿಕ ಇಲಾಖೆ ಹಾಗೂ ಇನ್ನಿತರ ಇಲಾಖೆಗಳ ಸರ್ಕಾರಿ ಆದೇಶಗಳನ್ವಯ 10, 15, 20, 25 ಮತ್ತು 30 ವರ್ಷಗಳ ಕಾಲಮಿತಿ ಮತ್ತು ಕಾಲಬದ್ಧ ವೇತನ ಮುಂಬಡ್ತಿ ಪಡೆದಿರುವ ಶಿಕ್ಷಕರುಗಳ ನಡವುಉಂಟಾಗಿರುವದೇತನತಾರತಮ್ಯವನ್ನು ಸರಿಪಡಿಸುವುದು:

2. ಸರ್ಕಾರಿ ಹಾಗೂ ಅನುದಾನಿತ ಪ್ರೌಢಶಾಲಾ ಸಹ ಶಿಕ್ಷಕರು ವಿದ್ಯಾರ್ಹತೆ ಮತ್ತು ಸೇವಾ ಜೇಷ್ಠತೆಯಅನ್ವಯ ಪ್ರೌಢ ಶಾಲಾ ಮುಖ್ಯೋಪಾಧ್ಯಾಯರ ಹುದ್ದೆಗೆ ಹಾಗೂ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರುಗಳ ಹುದ್ದೆಗೆ ಪದೋನ್ನತಿ ಪಡೆದಿರುವಕಾರಣದಿಂದಾಗಿಆರ್ಥಿಕ ಇಲಾಖೆ ಹಾಗೂ ಇನ್ನಿತರ ಇಲಾಖೆಗಳ ಸರ್ಕಾರಿ ಆದೇಶಗಳನ್ವಯ 10, 15, 20, 25 ಮತ್ತು 30 ವರ್ಷಗಳ ಕಾಲಮಿತಿ ಮತ್ತು ಕಾಲಬದ್ಧ ವೇತನ ಮುಂಬಡ್ತಿ ಪಡೆದಿರುವ ಶಿಕ್ಷಕರುಗಳ/ಮುಖ್ಯ ಶಿಕ್ಷಕರು/ಉಪನ್ಯಾಸಕರುಗಳ ನಡುವೆಉಂಟಾಗಿರುವ ವೇತನತಾರತಮ್ಯವನ್ನು ಸರಿಪಡಿಸುವುದು;

3. ಸರ್ಕಾರಿ ಹಾಗೂ ಅನುದಾನಿತ ಪದವಿಪೂರ್ವಕಾಲೇಜಿನಉಪನ್ಯಾಸಕರ ಹುದ್ದೆಯಿಂದ ಪ್ರಾಂಶುಪಾಲರ ಹುದ್ದೆಗೆ ಪದೋನ್ನತಿ ಪಡೆದಿರುವಕಾರಣದಿಂದಾಗಿಆರ್ಥಿಕ ಇಲಾಖೆ ಹಾಗೂ ಅನ್ನಿತರ ಇಲಾಖೆಗಳ ಸರ್ಕಾರಿ ಆದೇಶಗಳನ್ವಯ 10, 15, 20, 25 ಮತ್ತು 30 ವರ್ಷಗಳ ಕಾಲಮಿತಿ ಮತ್ತು ಕಾಲಬದ್ದ ವೇತನ ಮುಂಬಡ್ತಿ ಪಡೆದಿರುವ ಉಪನ್ಯಾಸಕರುಗಳ ಹಾಗೂ ಪ್ರಾಂಶುಪಾಲರುಗಳ ನಡುವೆಉಂಟಾಗಿರುವದೇತನತಾರತಮ್ಯವನ್ನು ಸರಿಪಡಿಸುವುದು;

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ,
ಕರ್ನಾಟಕ ವಿಧಾನ ಪರಿಷತ್ತು.

**ವಿಧಾನ ಪರಿಷತ್ತಿನ ಮಾನ್ಯ ಶಾಸಕರುಗಳಿಗೆ.**

**www.kla.kar.nic.in/council.htm**

## 7. ವಿಧಾನಮಂಡಲದ ಜಂಟಿ ಸಮಿತಿಗಳಿಗೆ ಹಾಗೂ ವಿಧಾನ ಪರಿಷತ್ತಿನ ಸ್ಥಾಯಿ ಸಮಿತಿಗಳಿಗೆ ಸದಸ್ಯರುಗಳನ್ನು ನಾಮನಿರ್ದೇಶನ ಮಾಡುವ ಬಗ್ಗೆ

# ಕರ್ನಾಟಕ ವಿಧಾನ ಪರಿಷತ್ತು

**156ನೇ ಅಧಿವೇಶನ**

**ಲಘು ಪ್ರಕಟಣೆ ಭಾಗ –2**

**(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)**

**ಸೋಮವಾರ, ದಿನಾಂಕ:29ನೇ ಸೆಪ್ಟೆಂಬರ್, 2025**

**ಸಂಖ್ಯೆ:41**

2025–26ನೇ ಸಾಲಿನ ವಿಧಾನ ಮಂಡಲದ ಜಂಟಿ ಸಮಿತಿಗಳು ಹಾಗೂ ವಿಧಾನ ಪರಿಷತ್ತಿನಸ್ಥಾಯಿ ಸಮಿತಿಗಳು ರಚನೆಯಾಗುವವರೆಗೆ ಹಾಲಿ 2024–25ನೇ ಸಾಲಿನ ಸಮಿತಿಗಳಲ್ಲಿ ಖಾಲಿಯಿರುವ ಸದಸ್ಯ ಸ್ಥಾನಗಳಿಗೆ ಈ ಕೆಳಕಂಡ ಮಾನ್ಯ ಶಾಸಕರುಗಳನ್ನು ಮಾನ್ಯ ಸಭಾಪತಿಯವರುಕರ್ನಾಟಕ ವಿಧಾನ ಪರಿಷತ್ತಿನಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 192ರ ರೀತ್ಯಾ, ನಾಮನಿರ್ದೇಶನ ಮಾಡಿರುತ್ತಾರೆಂದು ಈ ಮೂಲಕ ಮಾನ್ಯ ಶಾಸಕರುಗಳಿಗೆ ತಿಳಿಯಪಡಿಸಲಾಗಿದೆ.

| ಕ್ರ. ಸಂ. | ಹೆಸರು ಶ್ರೀಮತಿ/ಶ್ರೀಯುತರುಗಳಾದ | ಸಮಿತಿಯ ಹೆಸರು |
|---|---|---|
| 1. | ರಮೇಶ್ ಬಾಬು | ಅರ್ಜಿಗಳ ಸಮಿತಿ ಹಾಗೂ ಗ್ರಂಥಾಲಯ ಸಮಿತಿ |
| 2. | ಡಾ: ಆರತಿ ಕೃಷ್ಣಾ | ಸರ್ಕಾರಿ ಭರವಸೆಗಳ ಸಮಿತಿ |
| 3. | ಎಫ್.ಹೆಚ್. ಜಕ್ಕಪ್ಪನವರ್ | ಹಿಂದುಳಿದ ವರ್ಗಗಳ ಮತ್ತುಅಲ್ಪಸಂಖ್ಯಾತರಕಲ್ಯಾಣ ಸಮಿತಿ |
| 4. | ಶಿವಕುಮಾರ್ ಕೆ | ಅಧೀನ ಶಾಸನ ರಚನಾ ಸಮಿತಿ |

**ಎಸ್. ನಿರ್ಮಲ,**
ಕಾರ್ಯದರ್ಶಿ–2,
ಕರ್ನಾಟಕ ವಿಧಾನ ಪರಿಷತ್ತು.

**ವಿಧಾನ ಪರಿಷತ್ತಿನಎಲ್ಲಾ ಮಾನ್ಯ ಶಾಸಕರುಗಳಿಗೆ**

**www://kla.kar.nic.in/council/council.htm**

## 8. 16ನೇ ವಿಧಾನಸಭೆಯ 7ನೇ ಅಧಿವೇಶನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

- 16ನೇ ವಿಧಾನ ಸಭೆಯ 7ನೇ ಅಧಿವೇಶನವು ದಿನಾಂಕ 11ನೇ ಆಗಸ್ಟ್, 2025ರಂದು ಪ್ರಾರಂಭವಾಗಿ 22ನೇ ಆಗಸ್ಟ್, 2025 ರವರೆಗೆ 09 ದಿನಗಳ ಕಾಲ ಸುಮಾರು 71 ಗಂಟೆ 02 ನಿಮಿಷಗಳ ಕಾಲ ಕಾರ್ಯಕಲಾಪ ನಡೆಸಲಾಗಿದೆ.

- ಇತ್ತೀಚೆಗೆ ನಿಧನ ಹೊಂದಿದ ಗಣ್ಯರುಗಳಿಗೆ, ಆರ್.ಸಿ.ಬಿ. ಸಂಭ್ರಮಾಚರಣೆಯ ಕಾಲ್ತುಳಿತದಲ್ಲಿ ನಿಧನ ಹೊಂದಿದದವರಿಗೆ, ಪಹಲ್ಗಾಮ್‌ನಲ್ಲಿ ಉಗ್ರರ ದಾಳಿಯಲ್ಲಿ ನಿಧನ ಹೊಂದಿದವರಿಗೆ ಹಾಗೂ ಏರ್ ಇಂಡಿಯಾ ವಿಮಾನ ದುರಂತದಲ್ಲಿ ನಿಧನ ಹೊಂದಿದದವರಿಗೂ ಸಹ ಸಂತಾಪ ಸೂಚನಾ ನಿರ್ಣಯವನ್ನು ಮಂಡಿಸಿ, ಅಂಗೀಕರಿಸಲಾಗಿದೆ.

- 6ನೇ ಅಧಿವೇಶನದ ಅವಧಿಯಲ್ಲಿ 18 ಬಿ.ಜೆ.ಪಿ. ಸದಸ್ಯರನ್ನು 6 ತಿಂಗಳುಗಳ ಕಾಲ ಸದನಕ್ಕೆ ಬಾರದಂತೆ ತಡೆಹಿಡಿದು ಅಮಾನತ್ತುಗೊಳಿಸಿದ್ದ ನಿರ್ಣಯವನ್ನು ದಿನಾಂಕ:25.05.2025ರಿಂದ ಜಾರಿಗೆ ಬರುವಂತೆ ಹಿಂಪಡೆದಿರುವ ಕುರಿತಾದ ಸ್ಥಿರೀಕರಣ ಪ್ರಸ್ತಾವಕ್ಕೆ ಸದನವು ಅನುಮೋದನೆ ನೀಡಿರುತ್ತದೆ.

- ರಾಷ್ಟ್ರಪತಿಗಳು/ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಬಗ್ಗೆ ಕಾರ್ಯದರ್ಶಿಯವರ ವರದಿಯನ್ನು ಮಂಡಿಸಲಾಗಿದೆ.

- 2025–26ನೇ ಸಾಲಿನ ಪೂರಕ ಅಂದಾಜುಗಳ ಮೊದಲನೇ ಕಂತನ್ನು ದಿನಾಂಕ:20.08.2025 ರಂದು ಮಂಡಿಸಿ, ದಿನಾಂಕ:21.08.2025ರಂದು ಮತಕ್ಕೆ ಹಾಕಿ ಅಂಗೀಕರಿಸಲಾಯಿತು.

- 2025–26ನೇ ಸಾಲಿನ ವಿಧಾನಮಂಡಲ/ವಿಧಾನ ಸಭೆಯ ವಿವಿಧ ಸ್ಥಾಯಿ ಸಮಿತಿಗಳಿಗೆ ಮಾನ್ಯ ಸದಸ್ಯರುಗಳನ್ನು ನಾಮನಿರ್ದೇಶನ ಮಾಡಲು ದಿನಾಂಕ:12.08.2025ರಂದು ಚುನಾವಣಾ ಪ್ರಸ್ತಾವವನ್ನು ಮಂಡಿಸಿ, ದಿನಾಂಕ:21.08.2025 ರಂದು ಸದನವು ಸನ್ಮಾನ್ಯ ಸಭಾಧ್ಯಕ್ಷರಿಗೆ ಅಧಿಕಾರ ನೀಡಿರುತ್ತದೆ.

- ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರು ನೀಡಿರುವ ಕೆಳಕಂಡ 6 ವರದಿಗಳನ್ನು ಸದನದಲ್ಲಿ ಮಂಡಿಸಲಾಗಿದೆ.

    1. ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷಕ್ಕೆ (ಅನುಸರಣಾ ವರದಿ–ಸಿವಿಲ್) (2025ರ ವರದಿ ಸಂಖ್ಯೆ:3)
    2. ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷಕ್ಕೆ (ಅನುಸರಣಾ ವರದಿ–ಸಿವಿಲ್) (2025ರ ವರದಿ ಸಂಖ್ಯೆ:5)
    3. 2023–24ಕ್ಕೆ ಕೊನೆಗೊಂಡ ವರ್ಷಕ್ಕೆ (ರಾಜ್ಯ ಹಣಕಾಸಿನ ವ್ಯವಹಾರಗಳ ಲೆಕ್ಕಪರಿಶೋಧನಾ ವರದಿ) (2025ರ ವರದಿ ಸಂಖ್ಯೆ:4)
    4. ಪಂಚಾಯತ್ ರಾಜ್ ಸಂಸ್ಥೆಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳ ಮೇಲಿನ ಸಂಯೋಜಿತ ವಾರ್ಷಿಕ ತಾಂತ್ರಿಕ ಪರಿಶೀಲನಾ ವರದಿ (2020–2022)

5. ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಲ್ಯಾಣದ ವರದಿಯನ್ನು (2025ರ ವರದಿ ಸಂಖ್ಯೆ:2) (ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ– ಸಿವಿಲ್)
6. ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷಕ್ಕೆ (ಅನುಸರಣಾ ಲೆಕ್ಕಪರಿಶೋಧನೆ–ಸಿವಿಲ್) (2025ರ ವರದಿ ಸಂಖ್ಯೆ:6)

- ಈ ಅಧಿವೇಶನದಲ್ಲಿ ಧನವಿನಿಯೋಗ ವಿಧೇಯಕವು ಸೇರಿದಂತೆ ಒಟ್ಟು 39 ವಿಧೇಯಕಗಳನ್ನು ಮಂಡಿಸಲಾಗಿದ್ದು, 37 ವಿಧೇಯಕಗಳನ್ನು ಅಂಗೀಕರಿಸಲಾಗಿದೆ. ಉಳಿದಂತೆ 2025ನೇ ಸಾಲಿನ ಕರ್ನಾಟಕ ಜನಸಂದಣಿ ನಿಯಂತ್ರಣ (ಕಾರ್ಯಕ್ರಮಗಳು ಮತ್ತು ಗುಂಪುಗೂಡುವ ಸ್ಥಳಗಳಲ್ಲಿ ಜನಸಂದಣಿಯ ನಿರ್ವಹಣೆ) ವಿಧೇಯಕ ಮತ್ತು 2025ನೇ ಸಾಲಿನ ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರಿಶೀಲಿಸಿ, ವರದಿ ನೀಡಲು ವಿಧಾನಸಭೆಯ ಪರಿಶೀಲನಾ ಸಮಿತಿಗೆ ಒಪ್ಪಿಸಲು ತೀರ್ಮಾನಿಸಲಾಯಿತು.

- ಕರ್ನಾಟಕ ವಿಧಾನಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ರೂಪದಲ್ಲಿ ಮತ್ತು ವಿಧಾನಪರಿಷತ್ತಿನಿಂದ ತಿರಸ್ಕೃತವಾದ ರೂಪದಲ್ಲಿರುವ 2025ನೇ ಸಾಲಿನ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕವನ್ನು ಪುನರ್ ಪರ್ಯಾಲೋಚಿಸಿ ಅಂಗೀಕರಿಸಲಾಗಿದೆ.

- 2024ನೇ ಸಾಲಿನ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕ, 2024ನೇ ಸಾಲಿನ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕ ಹಾಗೂ 2024ನೇ ಸಾಲಿನ ನೋಂದಣಿ (ಕರ್ನಾಟಕ ತಿದ್ದುಪಡಿ) ವಿಧೇಯಕಗಳನ್ನು ಹಿಂಪಡೆಯಲಾಗಿದೆ.

- ನಿಯಮ 60 ರಡಿಯಲ್ಲಿ ನೀಡಿದ್ದ 3 ನಿಲುವಳಿ ಸೂಚನೆಗಳನ್ನು ನಿಯಮ 69ಕ್ಕೆ ಪರಿವರ್ತಿಸಿರುವುದನ್ನು ಸೇರಿದಂತೆ ಒಟ್ಟು 07 ಸೂಚನೆಗಳನ್ನು ನಿಯಮ 69ರಡಿಯಲ್ಲಿ ಚರ್ಚಿಸಲಾಗಿದೆ.

- ಸರ್ಕಾರಿ ಶಾಲೆಗಳ ಸ್ಥಿತಿಗತಿ ಮತ್ತು ಅಭಿವೃದ್ಧಿ ಕುರಿತು ವಿಶೇಷ ಚರ್ಚೆ ಪ್ರಾರಂಭಿಸಲಾಗಿದ್ದು, ಮುಂದಿನ ಅಧಿವೇಶನದಲ್ಲಿ ಮುಂದುವರೆಸಲಾಗುವುದು.

- ಕರ್ನಾಟಕ ವಿಧಾನಮಂಡಲದ / ವಿಧಾನಸಭೆಯ ವಿವಿಧ ಸ್ಥಾಯಿ ಸಮಿತಿಗಳ ಈ ಕೆಳಕಂಡ ವರದಿಗಳನ್ನು ಸದನದಲ್ಲಿ ಮಂಡಿಸಲಾಗಿರುತ್ತದೆ.

    1. ಕರ್ನಾಟಕ ವಿಧಾನಸಭೆಯ ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿಯ 2024–25ನೇ ಸಾಲಿನ 40ನೇ ವರದಿ.
    2. ಕರ್ನಾಟಕ ವಿಧಾನಸಭೆಯ ಸರ್ಕಾರಿ ಭರವಸೆಗಳ ಸಮಿತಿಯ 2023–24ನೇ ಸಾಲಿನ 5ನೇ ವರದಿ.
    3. ಕರ್ನಾಟಕ ವಿಧಾನಮಂಡಲದ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿಯ 2024–25ನೇ ಸಾಲಿನ 43ನೇ ವರದಿ.

4. ಕರ್ನಾಟಕ ವಿಧಾನಮಂಡಲದ ಅಧೀನ ಶಾಸನ ರಚನಾ ಸಮಿತಿಯ 2024–25ನೇ ಸಾಲಿನ 53ನೇ ವರದಿ.
5. ಕರ್ನಾಟಕ ವಿಧಾನಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ 2024–25ನೇ ಸಾಲಿನ 5ನೇ ವರದಿ.
6. ಕರ್ನಾಟಕ ವಿಧಾನಸಭೆಯ ಅರ್ಜಿಗಳ ಸಮಿತಿಯ 2024–25ನೇ ಸಾಲಿನ 2ನೇ ವರದಿ.
7. ಕರ್ನಾಟಕ ವಿಧಾನಮಂಡಲದ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿಯ 2024–25ನೇ ಸಾಲಿನ 2ನೇ ವರದಿ.

- 35 ಅರ್ಜಿಗಳನ್ನು ಸದನಕ್ಕೆ ಒಪ್ಪಿಸಲಾಗಿದೆ.
- ಸಭೆಯ ಮುಂದಿಡಲಾದ ಕಾಗದ ಪತ್ರಗಳ 1 ಮತ್ತು 2 ಪಟ್ಟಿಯಿಂದ ಒಟ್ಟು 21 ಅಧಿಸೂಚನೆಗಳು, 04 ಅಧ್ಯಾದೇಶಗಳು ಮತ್ತು 142 ವಾರ್ಷಿಕ ವರದಿಗಳು, 169 ಲೆಕ್ಕ ಪರಿಶೋಧನಾ ವರದಿಗಳು, 01 ಲೆಕ್ಕ ತಪಾಸಣಾ ವರದಿ, 05 ಅನುಪಾಲನ ವರದಿಗಳು, 06 ಅನುಸರಣಾ ವರದಿಗಳು ಹಾಗೂ 01 ವಿಶೇಷ ವರದಿಗಳನ್ನು ಸದನದಲ್ಲಿ ಮಂಡಿಸಲಾಗಿರುತ್ತದೆ.
- ಒಟ್ಟು 2306 ಪ್ರಶ್ನೆಗಳನ್ನು ಸ್ವೀಕರಿಸಲಾಗಿದ್ದು, ಈ ಪೈಕಿ 2199 ಪ್ರಶ್ನೆಗಳು ಅಂಗೀಕೃತಗೊಂಡಿದೆ. ಸದನದಲ್ಲಿ ಉತ್ತರಿಸಬೇಕಾಗಿದ್ದ 135 ಪ್ರಶ್ನೆಗಳ ಪೈಕಿ 128 ಪ್ರಶ್ನೆಗಳಿಗೆ ಹಾಗೂ ಲಿಖಿತ ಮೂಲಕ ಉತ್ತರಿಸುವ 2064 ಪ್ರಶ್ನೆಗಳ ಪೈಕಿ 1662 ಪ್ರಶ್ನೆಗಳಿಗೆ ಉತ್ತರಗಳನ್ನು ಸ್ವೀಕರಿಸಲಾಗಿದೆ.
- ನಿಯಮ 351 ರಡಿಯಲ್ಲಿ 220 ಸೂಚನೆಗಳ ಪೈಕಿ 180 ಸೂಚನೆಗಳನ್ನು ಪಟ್ಟಿಯಲ್ಲಿ ತೆಗೆದುಕೊಳ್ಳಲಾಗಿದ್ದು, 090 ಸೂಚನೆಗಳ ಉತ್ತರಗಳನ್ನು ಸ್ವೀಕರಿಸಲಾಗಿದೆ.
- ಗಮನ ಸೆಳೆಯುವ 383 ಸೂಚನೆಗಳ ಪೈಕಿ 178 ಸೂಚನೆಗಳಿಗೆ ಉತ್ತರವನ್ನು ಸ್ವೀಕರಿಸಲಾಗಿದ್ದು, ಆ ಪೈಕಿ 166 ಸೂಚನೆಗಳನ್ನು ಸದನದಲ್ಲಿ ಚರ್ಚಿಸಲಾಗಿರುತ್ತದೆ / ಮಂಡಿಸಲಾಗಿರುತ್ತದೆ.
- ಶೂನ್ಯ ವೇಳೆಯಲ್ಲಿ ಒಟ್ಟು 13 ಸೂಚನೆಗಳನ್ನು ಚರ್ಚಿಸಲಾಗಿದೆ.
- ಒಂದು ಹಕ್ಕುಚ್ಯುತಿ ಸೂಚನೆಯನ್ನು ಮಂಡಿಸಲಾಗಿದ್ದು, ತನಿಖೆ, ಪರಿಶೀಲನೆ ಮತ್ತು ವರದಿಗಾಗಿ ಹಕ್ಕುಬಾಧ್ಯತೆಗಳ ಸಮಿತಿಗೆ ವಹಿಸಲಾಗಿದೆ.
- ಈ ಕೆಳಕಂಡ ಅಧಿಕೃತ ನಿರ್ಣಯಗಳನ್ನು ದಿನಾಂಕ:21.08.2025ರಂದು ಸದನದಲ್ಲಿ ಮಂಡಿಸಲಾಗಿದ್ದು, ಸದನವು ಸರ್ವಾನುಮತದಿಂದ ಅಂಗೀಕರಿಸಲಾಗಿದೆ.

    1. ಶಾಂತಿ ಮತ್ತು ಯುದ್ಧ ನಿಲುಗಡೆ ಘೋಷಣೆಯಲ್ಲಿ ಪ್ರತಿಪಾದಿಸಲಾದ ತತ್ವಗಳು ಮತ್ತು ಲೇಖನಗಳಿಗೆ ಸಂಪೂರ್ಣ ಬೆಂಬಲ ಘೋಷಿಸುವ ಬಗ್ಗೆ.
    2. ಮಾನವ ಅಂಗಾಂಗ ಕಸಿ (ತಿದ್ದುಪಡಿ) ಕೇಂದ್ರ ಸರ್ಕಾರದ ಅಧಿನಿಯಮ, 2011 ಅನ್ನು ರಾಜ್ಯದಲ್ಲಿ ಅಳವಡಿಸಿಕೊಳ್ಳುವ ಬಗ್ಗೆ.

- ಸದನ ನಡೆಸಲು ಸಹಕರಿಸಿದ ಸಭಾ ನಾಯಕರಾದ ಮಾನ್ಯ ಮುಖ್ಯಮಂತ್ರಿಯವರಿಗೆ, ಮಾನ್ಯ ಉಪ ಮುಖ್ಯಮಂತ್ರಿಯವರಿಗೆ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ, ಸಚಿವ ಸಂಪುಟದ ಸದಸ್ಯರಿಗೆ, ಸರ್ಕಾರಿ ಮುಖ್ಯ ಸಚೇತಕರಿಗೆ, ಎಲ್ಲಾ ಸದಸ್ಯರುಗಳಿಗೆ, ಮಾಧ್ಯಮ ಪ್ರತಿನಿಧಿಗಳಿಗೆ, ಇಲಾಖಾ ಮುಖ್ಯಸ್ಥರು, ಅಧಿಕಾರಿ–ಸಿಬ್ಬಂದಿಯವರಿಗೆ ಹಾಗೂ ವಿಧಾನಸಭೆ ಸಚಿವಾಲಯದ ಅಧಿಕಾರಿ ಹಾಗೂ ಸಿಬ್ಬಂದಿಯವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತಾ, ನಾಡಿನ ಸಮಸ್ತ ಜನತೆಗೆ ಮುಂಬರುವ ಗೌರಿ–ಗಣೇಶ ಹಬ್ಬಕ್ಕೆ ಶುಭಾಶಯಗಳನ್ನು ತಿಳಿಸಿದರು.

*******

## 9. ಕರ್ನಾಟಕ ವಿಧಾನಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ ಉಪಸಮಿತಿಯ ಅವಧಿಯನ್ನು ಒಂದು ತಿಂಗಳು ವಿಸ್ತರಿಸುವ ಬಗ್ಗೆ

**ಕರ್ನಾಟಕ ವಿಧಾನಸಭೆ**

**(ಹದಿನಾರನೇ ವಿಧಾನಸಭೆ)**

**ಆರನೇ ಅಧಿವೇಶನ**

**ಲಘು ಪ್ರಕಟಣೆ ಭಾಗ–2**

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

**ಮಂಗಳವಾರ, ದಿನಾಂಕ 01ನೇ ಜುಲೈ, 2025**

---

**ಸಂಖ್ಯೆ: 152**

ಲಘು ಪ್ರಕಟಣೆ ಸಂಖ್ಯೆ 147ನ್ನು ಮುಂದುವರೆಸುತ್ತಾ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿ ಬರುವ ವಸತಿ ಶಾಲೆ, ಕಾಲೇಜುಗಳ ನಿರ್ವಹಣೆ ಮತ್ತು ವಸತಿ ಶಾಲೆ/ಕಾಲೇಜುಗಳ ಕಟ್ಟಡ ನಿರ್ಮಾಣ ಕಾರ್ಯಗಳ ಬಗ್ಗೆ ಹಾಗೂ ವಸತಿ ನಿಲಯಗಳಿಗೆ ಸರಬರಾಜು ಆಗುತ್ತಿರುವ ಆಹಾರ ದಿನಸಿ ಮತ್ತಿತರೆ ಸಾಮಗ್ರಿಗಳ ಗುಣಮಟ್ಟ, ವಿತರಣೆ ಹಾಗೂ ಬಳಕೆಯ ಕುರಿತು ಪರಿಶೀಲಿಸಿ ದಾಖಲೆ ಸಮೇತ ಸಮಿತಿಗೆ ವರದಿಯನ್ನು ಸಲ್ಲಿಸಲು. ಕರ್ನಾಟಕ ವಿಧಾನಸಭೆಯ ಕಾರ್ಯ ವಿಧಾನ ಮತ್ತು ನಡವಳಿಕೆ ನಿಯಮಾವಳಿಗಳ ನಿಯಮ 216ರ ಮೇರೆಗೆ, ವಿಧಾನಸಭೆಯ ಸದಸ್ಯರಾದ ಶ್ರೀ ಅಬ್ಬಯ್ಯ ಪ್ರಸಾದ್ ಅವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ಕರ್ನಾಟಕ ವಿಧಾನಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ ಉಪಸಮಿತಿಯ ಅವಧಿಯನ್ನು ಒಂದು ತಿಂಗಳು ವಿಸ್ತರಿಸಲಾಗಿದೆಯೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

**ಎಂ.ಕೆ. ವಿಶಾಲಾಕ್ಷಿ**
**ಕಾರ್ಯದರ್ಶಿ**
**ಕರ್ನಾಟಕ ವಿಧಾನಸಭೆ**
**ಸಚಿವಾಲಯ**

**ವಿಧಾನಸಭೆಯ ಎಲ್ಲಾ ಮಾನ್ಯ ಸದಸ್ಯರುಗಳಿಗೆ.**

## 10. Panel of Chairmen: ಸದಸ್ಯರನ್ನು ನಾಮನಿರ್ದೇಶನ ಮಾಡುವ ಬಗ್ಗೆ

**ಕರ್ನಾಟಕ ವಿಧಾನಸಭೆ**

**(ಹದಿನಾರನೇ ವಿಧಾನಸಭೆ)**

**ಆರನೇ ಅಧಿವೇಶನ**

**ಲಘು ಪ್ರಕಟಣೆ ಭಾಗ–2**

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

**ಬುಧವಾರ, ದಿನಾಂಕ 30ನೇ ಜುಲೈ, 2025**

---

**ಸಂಖ್ಯೆ: 157**

ವಿಧಾನಸಭೆಯ ಅಧ್ಯಕ್ಷತೆಯನ್ನು ಸನ್ಮಾನ್ಯ ಸಭಾಧ್ಯಕ್ಷರ ಅನುಪಸ್ಥಿತಿಯಲ್ಲಿ (Panel of Chairmen) ವಹಿಸಿಕೊಳ್ಳಲು ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಾವಳಿಗಳ ನಿಯಮ 9ರ ಮೇರೆಗೆ ಸನ್ಮಾನ್ಯ ಸಭಾಧ್ಯಕ್ಷರು ಈ ಕೆಳಕಂಡ ವಿಧಾನಸಭಾ ಸದಸ್ಯರುಗಳನ್ನು ಮುಂದಿನ ಆದೇಶದವರೆಗೆ ನಾಮನಿರ್ದೇಶನ ಮಾಡಿರುತ್ತಾರೆಂದು ಮಾನ್ಯ ಸದಸ್ಯರುಗಳಿಗೆ ಈ ಮೂಲಕ ತಿಳಿಯಪಡಿಸಲಾಗಿದೆ.

ಶ್ರೀಯುತರುಗಳಾದ :

1. ಅಪ್ಪಾಜಿ ಅಲಿಯಾಸ್ ಚನ್ನಬಸವರಾಜ ಬಿನ್ ಶಂಕರರಾವ ನಾಡಗೌಡ
2. ತನ್ವೀರ್ ಸೇಠ್
3. ಬಿ. ಆರ್. ಪಾಟೀಲ್ (ಭೋಜರಾಜ್)
4. ಅಬ್ಬಯ್ಯ ಪ್ರಸಾದ್
5. ಆರಗ ಜ್ಞಾನೇಂದ್ರ
6. ಎಂ. ಟಿ. ಕೃಷ್ಣಪ್ಪ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ ಸಚಿವಾಲಯ

**ವಿಧಾನಸಭೆಯ ಎಲ್ಲಾ ಮಾನ್ಯ ಸದಸ್ಯರುಗಳಿಗೆ.**

# 11. ಕರ್ನಾಟಕ ವಿಧಾನಮಂಡಲದ ವಿವಿಧ ಸ್ಥಾಯಿ ಸಮಿತಿಗಳಿಗೆ ನಡೆಯುವ ಚುನಾವಣಾ ಕಾರ್ಯಕ್ರಮದ ವೇಳಾಪಟ್ಟಿ

**ಕರ್ನಾಟಕ ವಿಧಾನಸಭೆ**

**(ಹದಿನಾರನೇ ವಿಧಾನಸಭೆ)**

**ಆರನೇ ಅಧಿವೇಶನ**

**ಲಘು ಪ್ರಕಟಣೆ ಭಾಗ–2**

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

**ಮಂಗಳವಾರ ದಿನಾಂಕ 12ನೇ ಆಗಸ್ಟ್, 2025**

---

**ಸಂಖ್ಯೆ: 158**

2025–26ನೇ ಸಾಲಿನ ಕರ್ನಾಟಕ ವಿಧಾನಮಂಡಲ/ವಿಧಾನಸಭೆಯ ವಿವಿಧ ಸ್ಥಾಯಿ ಸಮಿತಿಗಳಿಗೆ ನಡೆಯುವ ಚುನಾವಣೆಗೆ ಸಂಬಂಧಿಸಿದಂತೆ ನಾಮಪತ್ರ ಸಲ್ಲಿಸಲು, ಉಮೇದುವಾರಿಕೆ ಹಿಂಪಡೆಯಲು ಹಾಗೂ ಅಗತ್ಯವಿದ್ದಲ್ಲ ಚುನಾವಣೆ ನಡೆಸಲು ದಿನಾಂಕ: 12ನೇ ಆಗಸ್ಟ್, 2025ರಂದು ಸದನದಲ್ಲಿ ಅಂಗೀಕರಿಸಿದ ಪ್ರಸ್ತಾಪದ ಮೇರೆಗೆ ಕೆಳಕಂಡ ದಿನಾಂಕಗಳನ್ನು ನಿಗದಿಪಡಿಸಲಾಗಿದೆ.

| ಕ್ರ. ಸಂ. | ಸಮಿತಿಯ ಹೆಸರು | ಚುನಾಯಿತ ರಾಗಬೇಕಾದ ಸದಸ್ಯರ ಸಂಖ್ಯೆ | ನಾಮಪತ್ರಗಳನ್ನು ಸ್ವೀಕರಿಸಲು ಗೊತ್ತುಪಡಿಸಿದ ಕೊನೆಯ ದಿನಾಂಕ ಹಾಗೂ ಸಮಯ | ನಾಮಪತ್ರಗಳನ್ನು ಹಿಂತೆಗೆದುಕೊಳ್ಳಲು ಗೊತ್ತುಪಡಿಸಿದ ಕೊನೆಯ ದಿನಾಂಕ ಹಾಗೂ ಸಮಯ |
|---|---|---|---|---|
| 1 | ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ | 15 | 18.08.2025 ಮಧ್ಯಾಹ್ನ 3.00 ಗಂಟೆಗೆ | 19.08.2025 ಮಧ್ಯಾಹ್ನ 3.00 ಗಂಟೆಗೆ |
| 2 | ಅಂದಾಜುಗಳ ಸಮಿತಿ | 18 | | |
| 3 | ಸಾರ್ವಜನಿಕ ಉದ್ದಿಮೆಗಳ ಸಮಿತಿ | 15 | | |
| 4 | ಹಕ್ಕುಬಾಧ್ಯತೆಗಳ ಸಮಿತಿ | 9 | | |
| 5 | ಅಧೀನ ಶಾಸನ ರಚನಾ ಸಮಿತಿ | 15 | | |
| 6 | ಸರ್ಕಾರಿ ಭರವಸೆಗಳ ಸಮಿತಿ | 15 | | |
| 7 | ಖಾಸಗಿ ಸದಸ್ಯರುಗಳ ವಿಧೇಯಕ ಹಾಗೂ ನಿರ್ಣಯಗಳ ಸಮಿತಿ | 10 | | |
| 8 | ಅನುಸೂಚಿತ ಜಾತಿ ಹಾಗೂ ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ | 15 | | |
| 9 | ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿ | 15 | | |
| 10 | ಸದನದ ಸಮಿತಿ (ವಸತಿ ಸೌಕರ್ಯಗಳ ಸಮಿತಿ) | 12 | | |

ಸೂಚನೆ:

1. ನಾಮಪತ್ರಗಳನ್ನು ಸೂಚನಾ ಪತ್ರ ಶಾಖೆ (ಕೊಠಡಿ ಸಂಖ್ಯೆ:130), ಮೊದಲನೇ ಮಹಡಿ, ವಿಧಾನ ಸೌಧ. ಬೆಂಗಳೂರು ಇಲ್ಲಿ ಪಡೆಯಬಹುದು.

2. ಚುನಾವಣೆ ಅವಶ್ಯವಿದ್ದಲ್ಲ, ಚುನಾವಣೆ ಸ್ಥಳ, ದಿನಾಂಕ ಮತ್ತು ವೇಳೆಯನ್ನು ಪ್ರತ್ಯೇಕವಾಗಿ ತಿಳಿಸಲಾಗುವುದು. ವರ್ಗಾಯಿಸಬಹುದಾದ ಒಂಟಿ ಮತದ ದಾಮಾಷಾ ಪ್ರಾತಿನಿಧ್ಯ ತತ್ವದ ಮೇರೆಗೆ ಚುನಾಯಿಸಲಾಗುವುದು.

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ ಸಚಿವಾಲಯ

**ವಿಧಾನಸಭೆಯ ಎಲ್ಲಾ ಮಾನ್ಯ ಸದಸ್ಯರುಗಳಿಗೆ.**

# 12. ಕರ್ನಾಟಕ ಭೂ ಕಂದಾಯ(ಎರಡನೇ ತಿದ್ದುಪಡಿ) ವಿಧೇಯಕವನ್ನು ಪರಿಶೀಲಿಸಲು ಸಮಿತಿ ರಚನೆ

**ಕರ್ನಾಟಕ ವಿಧಾನಸಭೆ**

**(ಹದಿನಾರನೇ ವಿಧಾನಸಭೆ)**

**ಆರನೇ ಅಧಿವೇಶನ**

**ಲಘು ಪ್ರಕಟಣೆ ಭಾಗ–2**

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

ಶುಕ್ರವಾರ, ದಿನಾಂಕ 19ನೇ ಸೆಪ್ಟೆಂಬರ್. 2025

---

**ಸಂಖ್ಯೆ: 163**

2025ನೇ ಸಾಲಿನ ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕವನ್ನು 16ನೇ ವಿಧಾನಸಭೆಯ 7ನೇ ಅಧಿವೇಶನದಲ್ಲಿ ದಿನಾಂಕ:21.08.2025ರಂದು ಪರ್ಯಾಲೋಚನೆಗೆ ತೆಗೆದುಕೊಂಡ ಸಂದರ್ಭದಲ್ಲಿ ಅನೇಕ ಸದಸ್ಯರುಗಳ ಕೋರಿಕೆಯ ಮೇರೆಗೆ ಸದರಿ ವಿಧೇಯಕವನ್ನು ಸಮಗ್ರವಾಗಿ ಪರಿಶೀಲಿಸಿ, ವರದಿಯನ್ನು ನೀಡಲು ಪರಿಶೀಲನಾ ಸಮಿತಿಗೆ ವಹಿಸಲಾಗಿರುತ್ತದೆ. ಸದನದ ನಿರ್ಣಯದಂತೆ 2025ನೇ ಸಾಲಿನ ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರಿಶೀಲಿಸಿ. ವರದಿಯನ್ನು ನೀಡಲು ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಾವಳಿಗಳ ನಿಯಮ 247ರ ರೀತ್ಯಾ ಸನ್ಮಾನ್ಯ ಸಭಾಧ್ಯಕ್ಷರು ಈ ಕೆಳಕಂಡ ವಿಧಾನಸಭಾ ಸದಸ್ಯರುಗಳನ್ನು ಒಳಗೊಂಡ ಪರಿಶೀಲನಾ ಸಮಿತಿಯನ್ನು ರಚಿಸಿರುತ್ತಾರೆಂದು ಈ ಮೂಲಕ ಮಾನ್ಯ ಸದಸ್ಯರಿಗೆ ತಿಳಿಯಪಡಿಸಲಾಗಿದೆ.

**ಸದಸ್ಯರ ಹೆಸರು ಶ್ರೀಯುತರುಗಳಾದ**

| | |
|---|---|
| 1. ಕೃಷ್ಣ ಬೈರೇಗೌಡ, ಮಾನ್ಯ ಕಂದಾಯ ಸಚಿವರು. | ಅಧ್ಯಕ್ಷರು |
| 2. ಎಚ್.ಕೆ. ಪಾಟೀಲ್, ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು. | ಸದಸ್ಯರು |
| 3. ಎ.ಎಸ್.ಪೊನ್ನಣ್ಣ, ಮಾನ್ಯ ವಿಧಾನಸಭಾ ಸದಸ್ಯರು ಹಾಗೂ ಮಾನ್ಯ ಮುಖ್ಯಮಂತ್ರಿಯವರ ಕಾನೂನು ಸಲಹೆಗಾರರು | ” |
| 4. ಡಾ। ಮಂತರ್‌ಗೌಡ, ಮಾನ್ಯ ವಿಧಾನಸಭಾ ಸದಸ್ಯರು | ” |
| 5. ಹೆಚ್.ವಿ. ವೆಂಕಟೇಶ್, ಮಾನ್ಯ ವಿಧಾನಸಭಾ ಸದಸ್ಯರು | ” |

6. ಡಾ। ಶ್ರೀನಿವಾಸ್ ಎನ್.ಟಿ., ಮಾನ್ಯ ವಿಧಾನಸಭಾ ಸದಸ್ಯರು ”

7. ಗಣೇಶ್ ಪ್ರಕಾಶ್ ಹುಕ್ಕೇರಿ, ಮಾನ್ಯ ವಿಧಾನಸಭಾ ಸದಸ್ಯರು ”

8. ಭೀಮಣ್ಣ ಟಿ. ನಾಯ್ಕ, ಮಾನ್ಯ ವಿಧಾನಸಭಾ ಸದಸ್ಯರು ”

9. ಅರವಿಂದ ಬೆಲ್ಲದ ಮಾನ್ಯ ವಿಧಾನಸಭಾ ಸದಸ್ಯರು ”

10. ಡಾ। ಸಿ.ಎನ್. ಅಶ್ವಥ್ ನಾರಾಯಣ್, ಮಾನ್ಯ ವಿಧಾನಸಭಾ ಸದಸ್ಯರು ”

11. ಎಂ.ಟಿ. ಕೃಷ್ಣಪ್ಪ, ಮಾನ್ಯ ವಿಧಾನಸಭಾ ಸದಸ್ಯರು ”

ಸಮಿತಿಯು ವರದಿಯನ್ನು ನೀಡಲು ಮೂರು ತಿಂಗಳ ಕಾಲವಧಿಯನ್ನು ನಿಗದಿಪಡಿಸಲಾಗಿದೆ.

**ಎಂ.ಕೆ. ವಿಶಾಲಾಕ್ಷಿ,**
ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ

**ವಿಧಾನಸಭೆಯ ಎಲ್ಲಾ ಮಾನ್ಯ ಸದಸ್ಯರುಗಳಿಗೆ**

# ಭಾಗ–3

# ಸಂಸತ್ ಸುದ್ದಿಗಳು

## 1. House disruptions have reduced, productivity has improved:Birla

Lok Sabha Speaker Om Birla on dated: 03rd July 2025 said that frequent disruptions in Parliament, once a recurring feature, had significantly declined, paving the way for improved productivity and more substantive debate.

Speaking at the inaugural session of the first national conference of the heads of urban local bodies from the States and Union Territories in Manesar, Haryana, Mr.Birla said the Lok Sabha had increaseingly witnessed late night sittings and prolonged discussions, reflecting what he described as a "matured and responsible democratic culture".

He urged urban local bodies to institutionalise structured procedures such as regular sittings, robust committee systems, and citizen engagement mechanisms to strengthen grassroots democracy.

The two day conference on “ Role of urban local bodies in strengthening constitutional democracy and nation building” aims to serve as a platform to define the role of urban local bodies in a rapidly urbanising India and to highlight innovative models of contemporary urban governance.

Referring to India’s ancient traditions of village assemblies and community deliberations, Mr. Birla said that India had long been recognised as the "mother of democracy”.

"These are the roots of our democratic functioning, which we have inherited over centuries. Today, there is a need for municipal body meetings to carry forward our rich democratic tradition," he said, adding that the functioning of municipal bodies should be "dignified, rule bound, and regular".

Mr. Birla proposed that municipal bodies incorporate procedures such as Question Hour and Zero Hour to allow elected representatives to raise issues concerning their constituencies. Such mechanisms, he said, would enhance accountability, improve transparency, and facilitate more effective monitoring of administrative work.

"I have observed that in many municipalities, councils, and corporations, meetings are not held throughout the year. Sometimes, only a budget meeting takes place, which is adjourned within half an hour amid chaos. This is not a healthy democratic tradition," Mr. Birla said. He added that municipal meetings should be daylong affairs with detailed deliberations on proposals and plans.

"There should also be extensive discussion on the budget, so that schemes are made in the interest of the public and their impact is visible on the ground," he said.

Haryana Chief Minister Nayab Saini, addressing the gathering, described urban local bodies as foundational institutions and "the first school and nursery of democracy". "A developed India and a developed Haryana can only be achieved through developed cities," he said.

**Courtesy:**The Hindu**,** dated:04.07.2025

## 2. Parliamentary panel finalises report on Income Tax Bill, 2025

The Select Committee of Parliament examining the Income Tax Bill, 2025 is learnt to have finalised its report on dated:16.07.2025 with about 285 suggestions to change the legislation.

The committee, headed by senior Bharatiya Janata Party MP Baijayant Panda, is likely to submit the report in the Monsoon Session of Parliament. The Monsoon Session is scheduled to begin on July 21.

Introduced in the Lok Sabha on February 13, the Bill was referred to a Select Committee on the same day with instructions to report by the first day of Monsoon Session.

Union Finance Minister Nirmala Sitharaman had announced in the 2024 Budget that the Centre will comprehensively review the Income Tax Act, 1961 in a time bound manner to make it concise and easily understandable.

"Accordingly, the Income Tax Bill, 2025 has been prepared which proposes to repeal and replace the Income Tax Act, 1961," the Union Minister said in the statement of objects and reasons of the Bill. Ms. Sitharaman added that the Income Tax Act passed in 1961 had been subjected to numerous amendments since its passage.

"As a result of these changes, the basic structure of the Income Tax Act has been over burdened and the language has become complex, increasing cost of compliance for tax payers and hampering efficiency of direct tax administration. Tax administrators, practitioners and taxpayers have also raised concerns about the complicated provisions and structure of the Act," Ms. Sitharaman said.

The Opposition had raised apprehensions on certain provisions of the Act and had alleged that it provides for misuse of power by authorities.

**Courtesy:**The Hindu**,** dated:017.07.2025

## 3. Dhankhar submits his resignation to President

Vice President Jagdeep Dhankhar, 74, resigned from his post citing health reasons on dated:21.07.2025.

"Tog prioritise health care and abide by medical advice, I hereby resign as the Vice President of India, effective immediately, in accordance with Article 67(a) of the Constitution," the resignation letter addressed to President Droupadi Murmu, which was

posted on the Vice-President's official X account, said. He had called on President Murmu in the evening.

Mr. Dhankhar had suffered a cardiac event in March but was said to have recovered and had been participating in his engagements since. The rest of the letter expressed his "deep gratitude" to Prime Minister Narendra Modi and the Council of Ministers as well as the "warmth, trust and affection" that he had received from MPs.

Mr. Dhankhar was elected India's 14th Vice-President in August 2022, and has two years left for his term to complete. President Murmu has not indicated whether she had accepted the resignation.

The move has come as a surprise to many leaders, as Mr. Dhankhar had presided over Rajya Sabha proceedings on the first half of the first day of the Monsoon Session of Parliament which included an important intervention in the Opposition-led motion for removal of High Court judge Justice Yashwant Varma. He did not return for the post-lunch Session but spoke to MPs and floor leaders till evening.

Hindu spoke to said he did Several MPs that The not give any indication of quitting. He also presided over the Business Advisory Committee meeting of the Upper House at 12.30 p.m. Sources said that he was likely to attend the Rajya Sabha on 21st July 2025.

At 3.53 pm, the Press Information Bureau had issued a press release saying that Mr. Dhankhar is headed to Jaipur on a day-long visit. A Congress leader said he spoke to Mr. Dhankhar at 7.30 pm. and the Vice-President gave no Indication about his decision.

According to an Opposition MP. Mr. Dhankhar told him around 4 pm. that he would speak in the House about impeachment motions against Justice Yadav and Justice Varma. Mr. Dhankhar, who had been Governor of West Bengal before being elected Vice-President, had an eventful tenure, especially in terms of his public speeches and his role as presiding officer of the Rajya Sabha. In December 2024. Deputy chairperson of the Rajya Sabha Harivansh Narayan Singh dismissed a motion of impeachment against Mr. Dhankhar moved by move to denigrate the dignity of a constitutional authority", reflecting the some what testy relation-ship between the Opposition and himself.

**Courtesy:** The Hindu, Dated:22.07.2025

## 4. ಮಸೂದೆ ಸಹಿಗೆ ಕಾಲಮಿತಿ: ರಾಷ್ಟ್ರಪತಿ ಆಕ್ಷೇಪ ಪರಿಶೀಲನೆಗೆ ಸುಪ್ರೀಂ ಒಪ್ಪಿಗೆ

ಮಹತ್ವದ ಬೆಳವಣಿಗೆ ಎಂಬಂತೆ, ರಾಜ್ಯ ವಿಧಾನಸಭೆಗಳಲ್ಲಿ ಅಂಗೀಕಾರವಾದ ವಿಧೇಯಕಗಳ ಕುರಿತು ತೀರ್ಮಾನ ಕೈಗೊಳ್ಳಲು ರಾಜ್ಯಪಾಲರು ಮತ್ತು ರಾಷ್ಟ್ರಪತಿಗಳಿಗೆ ಕಾಲಮಿತಿ ನಿಗದಿಪಡಿಸಿದ್ದನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಕೇಳಿದ್ದ 14 ಪ್ರಶ್ನೆಗಳನ್ನು ಪರಿಶೀಲನೆ ನಡೆಸಲು ಸುಪ್ರೀಂ ಕೋರ್ಟ್ ಐವರು ನ್ಯಾಯಮೂರ್ತಿಗಳ ಸಂವಿಧಾನ ಪೀಠ ಸಮ್ಮತಿಸಿದೆ.

ಕಾಲಮಿತಿ ನಿಗದಿಪಡಿಸಿದ್ದು ಸರಿಯೇ ಎಂಬ ಸಾಂವಿಧಾನಿಕ ಪ್ರಶ್ನೆಗಳಿಗೆ ಕೇಂದ್ರ ಸರ್ಕಾರ ಮತ್ತು ಎಲ್ಲ ರಾಜ್ಯ ಸರ್ಕಾರಗಳ ಪ್ರತಿಕ್ರಿಯೆಯನ್ನೂ ಸುಪ್ರೀಂ ಕೋರ್ಟ್ ಕೋರಿದ್ದು, 1 ವಾರದೊಳಗೆ ಇದಕ್ಕೆ ಉತ್ತರಿಸುವಂತೆ ಸೂಚಿಸಿದೆ. ರಾಷ್ಟ್ರಪತಿಗಳು ಎತ್ತಿರುವ ಪ್ರಶ್ನೆಗಳು ಇಡೀ ದೇಶಕ್ಕೇ ಅನ್ವಯವಾಗುವಂಥದ್ದು ಮತ್ತು ಪರಿಣಾಮ ಬೀರುವಂಥದ್ದು ಹೀಗಾಗಿ ಎಲ್ಲ ರಾಜ್ಯಗಳೂ ತಮ್ಮ ಅಭಿಪ್ರಾಯಗಳನ್ನು ತಿಳಿಸಬೇಕು

ಎಂದು ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ, ನ್ಯಾಯಮೂರ್ತಿಗಳಾದ ಸೂರ್ಯಕಾಂತ್, ವಿಕ್ರಂನಾಥ್, ಪಿ.ಎಸ್.ನರಸಿಂಹ ಮತ್ತು ಎ.ಎಸ್.ಚಂದೂರ್ಕರ್ ಅವರನ್ನೊಳಗೊಂಡ ಸಂವಿಧಾನ ಪೀಠ ಹೇಳಿದೆ. ಜುಲೈ 29ರಂದು ನ್ಯಾಯಪೀಠವು, ರಾಷ್ಟ್ರಪತಿಗಳ ಪ್ರಶ್ನೆಗಳಿಗೆ ಸಂಬಂಧಿಸಿದ ವಿಚಾರಣೆ ಆರಂಭಿಸಲು ದಿನವನ್ನು ನಿಗದಿಪಡಿಸಲಿದೆ. ಬಹುತೇಕ ಆಗಸ್ಟ್ ಮಧ್ಯಭಾಗದಲ್ಲಿ ವಿಚಾರಣೆ ಆರಂಭವಾಗುವ ಸಾಧ್ಯತೆಯಿದೆ.

**ಆಧಾರ:** ಉದಯ ವಾಣಿ, ದಿನಾಂಕ:23.07.2025

## 5. 103 ನಿಮಿಷದ ಸ್ವಾತಂತ್ರ್ಯ ದಿನ ಭಾಷಣ: ಮೋದಿ ದಾಖಲೆ

79ನೇ ಸ್ವಾತಂತ್ರ್ಯ ದಿನಾಚರಣೆಯಂದು ಪ್ರಧಾನಿ ನರೇಂದ್ರ ಮೋದಿ 103 ನಿಮಿಷ ದೇಶವನ್ನುದ್ದೇಶಿ ಮಾತನಾಡುವ ಮೂಲಕ ಅವರು ಕೆಂಪುಕೋಟೆಯಲ್ಲಿ ಅತಿ ದೀರ್ಘ ಭಾಷಣ ಮಾಡಿದ ಪ್ರಧಾನಿ ಎನ್ನುವ ದಾಖಲೆ ನಿರ್ಮಿಸಿದರು.

ಕಳೆದ ವರ್ಷ ಮೋದಿ 98 ನಿಮಿಷ ಮಾತನಾಡಿದ್ದರು. ಆದರೆ ಈ ಸಲ 1 ಗಂಟೆ 43 ನಿಮಿಷ ಭಾಷಣದ ಮೂಲಕ ತಮ್ಮದೇ ದಾಖಲೆ ಮುರಿದಿದ್ದಾರೆ. 2015ರಲ್ಲಿ ಮೋದಿ 88 ನಿಮಿಷ ಮಾತನಾಡುವ ಮೂಲಕ ನೆಹರು ಹೆಸರಿನಲ್ಲಿದ್ದ ದಾಖಲೆ ಮುರಿದಿದ್ದರು.

ಅತಿ ಕಡಿಮೆ ಮಾತನಾಡಿದ ದಾಖಲೆ ನೆಹರು, ಇಂದಿರಾ ಗಾಂಧಿ ಅವರ ಹೆಸರಿನಲ್ಲಿದೆ. 1954ರಲ್ಲಿ ನೆಹರು ಹಾಗೂ 1966ರಲ್ಲಿ ಇಂದಿರಾ ಅವರು ಕೇವಲ 14 ನಿಮಿಷ ಮಾತನಾಡಿದ್ದರು. ಇದುವರೆಗೆ ಕೆಂಪುಕೋಟೆಯ ಮೇಲೆ ಪ್ರಧಾನಿ ಮೋದಿ ಅವರು 11 ಸಲ ಭಾಷಣ ಮಾಡಿದ್ದಾರೆ.

ಕೆಂಪುಕೋಟೆಯಲ್ಲಿ ಸತತ 12ನೇ ಧ್ವಜಾರೋಹಣ ನೆರವೇರಿಸುವ ಮೂಲಕ ಪ್ರಧಾನಿ ನರೇಂದ್ರ ಮೋದಿ ಇಂದಿರಾ ಗಾಂಧಿ ಅವರನ್ನು ಹಿಂದಿಕ್ಕಿ ಸತತವಾಗಿ ಅತಿಹೆಚ್ಚು ಧ್ವಜಾರೋಹಣ ಮಾಡಿದ ದೇಶದ 2ನೇ ಪ್ರಧಾನಿ ಎನ್ನುವ ದಾಖಲೆ ಸೃಷ್ಟಿಸಿದರು.

1947ರ ಸ್ವಾತಂತ್ರ್ಯ ಬಳಿಕ ದೇಶದ ಮೊದಲ ಪ್ರಧಾನಿ ನೆಹರು ಅವರು ಸತತ 17 ವರ್ಷ ಕೆಂಪುಕೋಟೆಯಲ್ಲಿ ತಿರಂಗ ಹಾರಿಸಿದ್ದರು. ಆ ಬಳಿಕ ಸತತವಾಗಿ ಅತಿ ಹೆಚ್ಚು ಸಲ ಧ್ವಜಾರೋಹಣ ಮಾಡಿದ ಹೆಗ್ಗಳಿಕೆಯನ್ನು ಇಂದಿರಾ ಗಾಂಧಿ ಹೊಂದಿದ್ದರು. ಅವರು 1966–1977ರ ತನಕ ಒಟ್ಟು 11 ಸಲ ಸತತವಾಗಿ ಕೆಂಪುಕೋಟೆಯಲ್ಲಿ ಧ್ವಜ ಹಾರಿಸಿದ್ದರು. ಆದರೆ ಈ ಬಾರಿ ಮೋದಿ ಆ ದಾಖಲೆಯ ಮುರಿದಿದ್ದಾರೆ. ಇನ್ನು ಇಂದಿರಾ ಗಾಂಧಿ 1980 ರಿಂದ 1984ರಲ್ಲಿಯೂ ಧ್ವಜಾರೋಹಣ ಮಾಡಿ ಒಟ್ಟು 16 ಸಲ ಸ್ವಾತಂತ್ರ್ಯ ದಿನದಲ್ಲಿ ಭಾಗಿಯಾಗಿರುವ ದಾಖಲೆ ಹೊಂದಿದ್ದಾರೆ.

**ಆಧಾರ:** ಕನ್ನಡ ಪ್ರಭ, ದಿನಾಂಕ:16.08.2025

## 6. Lok Sabha passes Income Tax Bill; officials' powers broadened

The Lok Sabha on 15th August 2025 passed the revised Income Tax Bill, 2025. The Bill seeks to simplify, rationalise, and shorten the existing Income Tax Act, 1961. It also broadens the powers of income tax officials, allowing them to forcibly break into personal e-mails and social media accounts of assessees during search operations.

Union Finance Minister Nirmala Sitharaman had introduced the previous version of the Bill in the Lok Sabha in February, following which it was sent to a Select Committee chaired by Baijayant Panda for a review. The Select Committee submitted its recommendations on July 21. Following this, the government withdrew the Bill to incorporate the suggestions made by the committee.

Ms. Sitharaman introduced the updated version  the Income Tax (No. 2) Bill, 2025 in the Lower House on 11th August 2025. The Bill has around 2.59 lakh words compared with the 5.12 lakh words in the Income Tax Act, 1961. The number of chapters has been brought down to 23 from 47 and the number of Sections to 536 from 819.

In order to provide greater clarity, the new Bill has increased the number of tables to 57 from 18 and the number of formulae to 46 from six.

Apart from these changes, the new Bill has also tweaked the powers of income tax officials during search and seizure operations. The new Bill requires any person "who is found to be in possession or control of " any books of account or other documents in electronic form to provide the authorised officer assistance in accessing these, "Including access code, by whatever name called".

Further, it allows the authorised officer to "over ride the access code to any computer system" if the access code is not made available.

The Select Committee defended these provisions in its report, saying that various "incriminating evidences and material are found/seized from electronic records including WhatsApp communications, e-mails, etc," and that passwords for these are of ten not shared with officials. However, a few members of the committee submitted dissent notes calling for  changes to these  provisions. Congress MP Amar Singh argued that the wording of the relevant section "gives very wide ranging power to the government to force tax payees to hand over all types of personal digital data including passwords, chats, etc." and asked for a reduction in these powers.

"This provision is arbitrary and [gives] excess powers to the authorities and there is every chance of misuse of this provisions and ultimately infringing the Right to Privacy of an individual guaranteed in the Constitution and reiterated by the Supreme Court in Puttaswamy case," Revolutionary Socialist Party leader N.K. Premachandran said in his dissent note .

He added that the provisions in the original Income Tax Act, 1961 sufficient and should be retained.

**Courtesy:**The Hindu**,** dated:12.08.2025

# ಭಾಗ–4

# ಕೇಂದ್ರ ಸರ್ಕಾರದ ಸುದ್ದಿಗಳು

## 1. ಶೃಂಗ್ಲಾ, ನಿಕಮ್ ಸೇರಿ ನಾಲ್ವರು ರಾಜ್ಯಸಭೆಗೆ

ಮಾಜಿ ವಿದೇಶಾಂಗ ಕಾರ್ಯದರ್ಶಿ ಹರ್ಷವರ್ಧನ ಶೃಂಗ್ಲಾ, ಹಿರಿಯ ವಕೀಲ ಉಜ್ವಲ್ ನಿಕಮ್, ಇತಿಹಾಸಕಾರ್ತಿ ಡಾ.ಮೀನಾಕ್ಷಿ ಜೈನ್ ಹಾಗೂ ಕೇರಳದ ಬಿಜೆಪಿ ನಾಯಕ ಸಿ.ಸದಾನಂದನ್ ಮಾಸ್ಟರ್ ಅವರನ್ನು ರಾಜ್ಯಸಭೆಗೆ ನಾಮನಿರ್ದೇಶನ ಮಾಡಲಾಗಿದೆ.

ಈ ಕುರಿತ ಅಧಿಸೂಚನೆಯನ್ನು ಗೃಹ ಸಚಿವಾಲಯ ದಿನಾಂಕ:13.07.2025ರಂದು ಪ್ರಕಟಿಸಿದೆ. ಇದರೊಂದಿಗೆ, ನಾಮನಿರ್ದೇಶನ ಕೋಟಾ ಅಡಿಯ ಎಲ್ಲ 12 ಸ್ಥಾನಗಳನ್ನು ಭರ್ತಿ ಮಾಡಿದಂತಾಗಿದೆ. ಜಮ್ಮು ಕಾಶ್ಮೀರದಿಂದ ನಾಲ್ಕು, ಹರಿಯಾಣದ ಒಂದು ಸ್ಥಾನ ಖಾಲಿ ಉಳಿದಿದೆ.

ಒಟ್ಟು 240 ಸದಸ್ಯ ಬಲದ ರಾಜ್ಯಸಭೆಯಲ್ಲಿ, ಬಿಜೆಪಿ ನೇತೃತ್ವದ ಎನ್‌ಡಿಎ ಈಗ 135 ಸಂಸದರ ಬೆಂಬಲ ಹೊಂದಿದಂತಾಗಿದೆ. ಹೊಸದಾಗಿ ನಾಮನಿರ್ದೇಶನಗೊಂಡಿರುವ ಈ ಸಂಸದರ ಅಧಿಕಾರಾವಧಿ ಆರು ವರ್ಷ.

ಸಂಸತ್ ಮುಂಗಾರು ಅಧಿವೇಶನ ಆರಂಭಗೊಳ್ಳುವುದು ಒಂದು ವಾರ ಮುಂಚೆ ಈ ಪ್ರಕ್ರಿಯೆ ನಡೆದಿದೆ. ಈ ಸಂಸದರು ನಾಮನಿರ್ದೇಶನಗೊಂಡ ಆರು ತಿಂಗಳ ಒಳಗಾಗಿ ಯಾವುದಾದರೂ ಪಕ್ಷಕ್ಕೆ ಸೇರಬಹುದಾಗಿದೆ. ರಾಜ್ಯಸಭೆಗೆ ನಾಮನಿರ್ದೇಶನ ಗೊಂಡಿರುವ ನಾಲ್ವರ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರು ಪ್ರತಿಕ್ರಿಯಿಸಿ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಶೃಂಗ್ಲಾ ಅವರು ಸಂಸತ್ ಕಾರ್ಯಕಲಾಪಗಳಿಗೆ ಮತ್ತಷ್ಟು ಮೆರುಗು ತರಲಿದ್ದರೆ, ನಿಕಮ್ ಅವರು ಸಾಂವಿಧಾನಿಕ ಮೌಲ್ಯಗಳನ್ನು ಬಲಪಡಿಸಲು ಶ್ರಮಿಸಿದಿರು. ಸಾಮಾನ್ಯ ಪ್ರಜೆಗಳನ್ನು ಕೂಡ ಘನತೆಯಿಂದ ನೋಡಬೇಕು ಎಂಬುದನ್ನು ಖಾತ್ರಿಪಡಿಸುವುದಕ್ಕಾಗಿಯೂ ನಿಕಮ್ ಹೋರಾಡಿದ್ದಾರೆ ಎಂದು ಹೇಳಿದ್ದಾರೆ.

'ಶಿಕ್ಷಣ, ಸಾಹಿತ್ಯ ಇತಿಹಾಸ, ರಾಜಕೀಯ ವಿಜ್ಞಾನ ಕ್ಷೇತ್ರಕ್ಕೆ ಮೀನಾಕ್ಷಿ ಜೈನ್ ಅವರ ಕೊಡುಗೆ ಅನನ್ಯ ಸದಾನಂದನ್ ಅವರು ಧೈರ್ಯ ಹಾಗೂ ಅನ್ಯಾಯಕ್ಕೆ ತಲೆಬಾಗುವುದಿಲ್ಲ ಎಂಬುದರ ಪ್ರತೀಕದಂತಿದ್ದಾರೆ. ರಾಷ್ಟ್ರದ ಪ್ರಗತಿಗಾಗಿ ಅವರು ಹೊಂದಿರುವ ಬದ್ಧತೆಯು ಹಿಂಸೆ ಮತ್ತು ಬೆದರಿಕೆಯಿಂದ ಕುಗ್ಗಿಲ್ಲ' ಎಂದು ಬರೆದುಕೊಂಡಿದ್ದಾರೆ.

**ಆಧಾರ:** ಪ್ರಜಾವಾಣಿ ದಿನಾಂಕ:14.07.2025

## 2. ತಲಾದಾಯ: ದೇಶದಲ್ಲೇ ಕರ್ನಾಟಕಕ್ಕೆ ನಂ.1 ಪಟ್ಟ

2024–25ನೇ ಆರ್ಥಿಕ ವರ್ಷದಲ್ಲಿ ದೇಶದಲ್ಲೇ ಅತಿ ಹೆಚ್ಚು ತಲಾ ಆದಾಯ ಹೊಂದಿರುವ ರಾಜ್ಯವಾಗಿ ಕರ್ನಾಟಕ ಹೊರ ಹೊಮ್ಮಿದೆ. ರಾಜ್ಯದ ನಿವ್ವಳ ರಾಜ್ಯ ದೇಶಿಯ ಉತ್ಪನ್ನ (ಎನ್‌ಎಸ್‌ಡಿಪಿ)ವು ತಲಾ 2,04,605ರೂ.ಗೆ ತಲುಪಿದೆ ಎಂದು ಸಂಸತ್ತಿಗೆ ಹಣಕಾಸು ಸಚಿವಾಲಯ ಸಲ್ಲಿಸಿದ ದತ್ತಾಂಶ ತಿಳಿಸಿದೆ. 2014–15ರಲ್ಲಿ ರಾಜ್ಯದ ಸ್ಥಿರ ಬೆಲೆಗಳಲ್ಲಿನ ಎನ್‌ಎಸ್‌ಡಿಪಿ ಮೌಲ್ಯ ತಲಾ 1.05 ಲಕ್ಷ ರೂ.ಗಳಷ್ಟಿತ್ತು.

ಈ ಮೂಲಕ ಒಂದೇ ದಶಕದಲ್ಲಿ ಶೇ.93.6ರ ಬೆಳವಣಿಗೆಯೊಂದಿಗೆ 'ರಾಜ್ಯದ ತಲಾದಾಯ ದ್ವಿಗುಣವಾದಂತಾಗಿದೆ. ದತ್ತಾಂಶದ ಪ್ರಕಾರ, 2023–24ಕ್ಕೆ 1.91 ಲಕ್ಷ ರೂ.ಗಳಷ್ಟಿದ್ದ ರಾಜ್ಯದ ತಲಾ ಆದಾಯ ಪ್ರಮಾಣ ಶೇ.6.6ರಷ್ಟು ಬೆಳವಣಿಗೆಯಾಗಿರುವುದು ಕಂಡುಬಂದಿದೆ.

ಕರ್ನಾಟಕದ ನಂತರದ ಸ್ಥಾನದಲ್ಲಿ ನೆರೆಯ ತಮಿಳುನಾಡು ರಾಜ್ಯವಿದ್ದು ಶೇ.83.3ರ ಬೆಳವಣಿಗೆಯೊಂದಿಗೆ ಇಲ್ಲಿನ ತಲಾ ಆದಾಯ 1.96 ಲಕ್ಷ ರೂ.ಗೆ ತಲುಪಿದೆ. ಶೇ.55.4ರ ಬೆಳವಣಿಯೊಂದಿಗೆ 1.94 ಲಕ್ಷ ರೂ. ತಲಾದಾಯ ಹೊಂದಿರುವ ಹರ್ಯಾಣ ಮೂರನೇ ಸ್ಥಾನದಲ್ಲಿದೆ. ದಶಕದ ಅವಧಿಯ ಬೆಳವಣಿಗೆಯನ್ನು ಗಮನಿಸಿದಾಗ, ಶೇ.93.6ರಷ್ಟು ಬೆಳವಣಿಗೆ ದಾಖಲಿಸಿರುವ ಕರ್ನಾಟಕ ದೇಶದಲ್ಲಿ ಎರಡನೇ ಸ್ಥಾನದಲ್ಲಿದೆ. ಶೇ.96.7ರಷ್ಟು ಬೆಳವಣಿಗೆಯೊಂದಿಗೆ ಒಡಿಶಾ ಮೊದಲ ಸ್ಥಾನದಲ್ಲಿದೆ. ಇದೇ ಅವಧಿಯಲ್ಲಿ ಭಾರತದ ತಲಾ ನಿವ್ವಳ ರಾಷ್ಟ್ರೀಯ ಆದಾಯ (ಎನ್‌ಎನ್‌ಐ) ಶೇ.57.6ರಷ್ಟು ವೃದ್ಧಿಯಾಗಿದ್ದು, 72,805 ರೂ.ಗಳಿಂದ 1,14,710ರೂ.ಗೆ ಏರಿಕೆಯಾಗಿದೆ ಎಂದು ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಲೋಕಸಭೆಗೆ ತಿಳಿಸಿದ್ದಾರೆ.

**ಆಧಾರ:** ಉದಯವಾಣಿ ದಿನಾಂಕ:23.07.2025

## 3. ಗಡಿ ಕಾಯುವ ಯೋಧರಿಗಿನ್ನು ಉಚಿತ ಕಾನೂನು ಸೇವೆ ಭಾಗ್ಯ

ದೇಶಸೇವೆಗೆ ಪ್ರಾಣವನ್ನೇ ಮುಡಿಪಾಗಿಟ್ಟಿರುವ ಸೈನಿಕರಿಗೆ ಸಹಾಯ ಮಾಡುವ ಉದ್ದೇಶದಿಂದ, ಅವರ ಪರಿವಾರಗಳಿಗೆ ಉಚಿತವಾಗಿ ಕಾನೂನು ನೆರವನ್ನು ಕೊಡಲು. ಸರ್ಕಾರ ಮುಂದಾಗಿದೆ. ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ (ನಲ್ಸಾ)ವು ವೀರ ಪರಿವಾರ ಸಹಾಯತಾ ಯೋಜನೆ 2025ಅಡಿಯಲ್ಲಿ ಹಾಲಿ ಮತ್ತು ನಿವೃತ್ತ ಯೋಧರಿಗೆ ಭೂವ್ಯಾಜ್ಯ, ಕೌಟುಂಬಿಕ ಕಲಹ ಮೊದಲಾದ ವಿಷಯಗಳಲ್ಲಿ ಉಚಿತ ಕಾನೂನು ಸೇವೆ ನೀಡಲಿದೆ.

ಪಾಕಿಸ್ತಾನ ವಿರುದ್ಧದ ಆಪರೇಷನ್ ಸಿಂಧೂರದ ವೇಳೆ ಭಾರತೀಯ ಸೈನಿಕರು ತೋರಿದ ಶೌರ್ಯ ಸಾಹಸ, ಬಲಿದಾನಗಳಿಂದ ಪ್ರಭಾವಿತರಾದ, ನಾಲ್ಸಾದ ಕಾರ್ಯಾಧ್ಯಕ್ಷರೂ ಆದ ಸುಪ್ರೀಂಕೋರ್ಟ್‌ನ ನ್ಯಾಯಮೂರ್ತಿ ನ್ಯಾ। ಸೂರ್ಯಕಾಂತ್ ಅವರು, ಯೋಧರ ಪರಿವಾರಗಳಿಗೆ ನೆರವಾಗಲು ಈ ಯೋಜನೆಯ ಯೋಚನೆ ಮಾಡಿದ್ದರು. ಈ ಮೂಲಕ, ದೇಶ ಕಾಯುವ ಯೋಧರ ಕೈಹಿಡಿಯಲು ನ್ಯಾಯಾಂಗವು ಮುಂದಾಗಬೇಕು ಎಂಬುದು ಇದರ ಉದ್ದೇಶವಾಗಿತ್ತು. ಈ ಯೋಜನೆಯನ್ನು, 2025ರ ನವೆಂಬರ್.24ರಂದು ನ್ಯಾ। ಕಾಂತ್ ಅವರು ಮುಖ್ಯ ನ್ಯಾಯಮೂರ್ತಿಯ ಹುದ್ದೆಗೆ ಏರುವ ಮುನ್ನ ಜಾರಿಗೆ ತರಲಾಗುವುದು.

ವರ್ಷದಲ್ಲಿ ಹಲವು ತಿಂಗಳು ಮನೆಯಿಂದ ದೂರವಿರುವ ಸೈನಿಕರು, ಭೂಮಿ, ಆಸ್ತಿ, ಕೌಟುಂಬಿಕ ಬಿಕ್ಕಟ್ಟುಗಳಂತಹ ಸಮಸ್ಯೆಗಳು ಕಾನೂನು ಪ್ರಕ್ರಿಯೆಗಳಿಗೆ ಒಳಗಾಗಿದ್ದರೆ, ಬೇಕೆಂದಾಗ ಊರಿಗೆ ಮರಳಲಾಗುವುದಿಲ್ಲ. ಕೆಲವು ಪ್ರಕರಣಗಳಲ್ಲಿ ಯೋಧರ ಕುಟುಂಬಕ್ಕೆ ಸೂಕ್ತ ರೀತಿಯ ಕಾನೂನು ನೆರವು ಸಿಕ್ಕಿರುವುದಿಲ್ಲ. ಹೀಗಿರುವಾಗ, ಅಂಥವರ ಅನುಕೂಲಕ್ಕಾಗಿ ನಾಲ್ಸಾ ಅವರ ನೆರವಿಗೆ ಬಂದು, ಸುಗಮ ಪ್ರಕ್ರಿಯೆಗೆ ಸಹಕಾರಿಯಾಗುತ್ತದೆ. ಈ ಸೌಲಭ್ಯವು ಬಿಎಸ್‌ಎಫ್, ಸಿಆರ್‌ಪಿಎಫ್, ಐಟಿಬಿಪಿ ಸೇರಿದಂತೆ ಅರಸೇನಾ ಪಡೆಗಳಲ್ಲಿರುವವರಿಗೂ ಲಭಿಸುತ್ತದೆ.

1991ರ ಕಾರ್ಗಿಲ್ ಯುದ್ಧದಲ್ಲಿ ಪಾಕಿಸ್ತಾನ ಸೇನೆಯನ್ನು ಹಿಮ್ಮೆಟ್ಟಿಸಿ ಭಾರತೀಯ ಯೋಧರು ವಿಜಯಧ್ವಜ ಹಾರಿಸಿದ ವಿಜಯ ದಿವಸದಂದು, ಆ ಸೈನಿಕರಿಗೆ ಗೌರವ ಅರ್ಪಿಸುವ ಸಲುವಾಗಿ 3 ಯೋಧರ ಯೋಜನೆಗಳನ್ನು ಆರಂಭಿಸಲಾಗಿದೆ. ಮೂರೂ ರಕ್ಷಣಾಪಡೆಗಳ ಮುಖ್ಯಸ್ಥ ಜ। ಅನಿಲ್ ಚೌಹಾಣ್ ಅವರು ದಿನಾಂಕ:26.07.2025ರಂದು ಚಾಲನೆ ನೀಡಿದ್ದಾರೆ. ತ್ಯಾಗ ಬಲಿದಾನಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸಲು ಮತ್ತು ದೇಶಭಕ್ತಿಯನ್ನು ಜಾಗೃತಗೊಳಿಸುವ ಉದ್ದೇಶದಿಂದ ಈ 3 ಯೋಜನೆ ಶುರು ಮಾಡಲಾಗಿದೆ.

**ಆಧಾರ:** ಕನ್ನಡ ಪ್ರಭ, ದಿನಾಂಕ:27.07.2025

## 4. ನ್ಯಾಯದಾನ ವ್ಯವಸ್ಥೆಯಲ್ಲಿ ದೇಶಕ್ಕೇ ಕರ್ನಾಟಕ ನಂ.1

ನ್ಯಾಯಾಂಗ ಮತ್ತು ಪೊಲೀಸ್ ವ್ಯವಸ್ಥೆಯಲ್ಲಿ ಇರುವ ಪರಿಶಿಷ್ಟ ಜಾತಿ, ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳ ಮೀಸಲನ್ನು ಶೇ.100 ಭರ್ತಿ ಮಾಡುವ ಮೂಲಕ ಈ ಸಾಧನೆ ಮಾಡಿದ ದೇಶದ ಏಕೈಕ ರಾಜ್ಯವಾಗಿ ಕರ್ನಾಟಕ ಹೊರಹೊಮ್ಮಿದೆ. ಜೊತೆಗೆ ಪೊಲೀಸ್ ವ್ಯವಸ್ಥೆ, ಕಾರಾಗೃಹ, ನ್ಯಾಯಾಂಗ, ಕಾನೂನು ನೆರವಿನ ಕಾರ್ಯಕ್ಷಮತೆ ಒಳಗೊಂಡ ನ್ಯಾಯದಾನ ವ್ಯವಸ್ಥೆಯಲ್ಲೂ ಮೊದಲ ಸ್ಥಾನ ಪಡೆದಿದೆ ಎಂದು ವರದಿಯೊಂದು ಹೇಳಿದೆ.

'ಭಾರತ ನ್ಯಾಯದಾನ ವರದಿ 2025'ದಲ್ಲಿನ ಅಂಕಿ ಅಂಶಗಳು ದೇಶದಲ್ಲಿನ ನ್ಯಾಯದಾನ ವ್ಯವಸ್ಥೆಯ ಕುರಿತು ಬೆಳಕು ಚೆಲ್ಲಿದ್ದು, ಹಲವು ವಲಯಗಳಲ್ಲಿ ಕರ್ನಾಟಕ ಗಮನಾರ್ಹ ಸಾಧನೆ ಮಾಡಿದೆ. ಟಾಟಾ ಟ್ರಸ್ಟ್ ಸಹಯೋಗದಲ್ಲಿ ಈ ವರದಿ ಸಿದ್ಧಪಡಿಸಲಾಗಿದೆ.

ವರದಿ ಅನ್ವಯ ನ್ಯಾಯಾಂಗ ಮತ್ತು ಪೊಲೀಸ್ ವ್ಯವಸ್ಥೆಯಲ್ಲಿ ಎಸ್‌ಸಿ, ಎಸ್ಟಿ ಮತ್ತು ಒಬಿಸಿ ಮೀಸಲನ್ನು ಶೇ.100ರಷ್ಟು ಜಾರಿ ಮಾಡಿದ ಏಕೈಕ ರಾಜ್ಯವೆಂಬ ಹಿರಿಮೆಗೆ ಕರ್ನಾಟಕ ಪಾತ್ರವಾಗಿದೆ. ಜೊತೆಗೆ 2017ರಿಂದ, ಕರ್ನಾಟಕ ಸೇರಿದಂತೆ ದೇಶದ 6 ಹೈಕೋರ್ಟ್‌ಗಳು ವಾರ್ಷಿಕ ಪ್ರಕರಣಗಳ ಇತ್ಯರ್ಥದಲ್ಲಿ ಶೇ.100ಕ್ಕಿಂತ ಹೆಚ್ಚಿನ ಸಾಧನೆ ಮಾಡಿವೆ. ಜೊತೆಗೆ ನ್ಯಾಯ ವಿತರಣೆಯ ಸ್ತಂಭಗಳಾದ ಪೊಲೀಸಿಂಗ್‌ನಲ್ಲಿ ಕರ್ನಾಟಕ 3, ಕಾರಾಗೃಹ ನಿರ್ವಹಣೆಯಲ್ಲಿ 2, ನ್ಯಾಯಾಂಗದಲ್ಲಿ 4 ಮತ್ತು ಕಾನೂನು ನೆರವಿನಲ್ಲಿ 1ನೇ ರ್‍ಯಾಂಕ್ ಪಡೆದಿದೆ. ಒಟ್ಟಾರೆ 10ಕ್ಕೆ 6.78 ಅಂಕ ಪಡೆಯುವ ಮೂಲಕ ದೇಶದಲ್ಲೇ ಮೊದಲ ಸ್ಥಾನ ಪಡೆದಿದೆ. ಉಳಿದಂತೆ ಪಟ್ಟಿಯಲ್ಲಿ ದಕ್ಷಿಣದ ರಾಜ್ಯಗಳಾದ ತೆಲಂಗಾಣ, ಕೇರಳ, ಆಂಧ್ರಪ್ರದೇಶ, ತಮಿಳುನಾಡು ಸ್ಥಾನ ಪಡೆದಿವೆ. ಭಾರತೀಯ ಪೊಲೀಸ್ ಪಡೆಯಲ್ಲಿ ಶೇ.33ರಷ್ಟು ಮಹಿಳಾ ಪ್ರಾತಿನಿಧ್ಯವನ್ನು ಶಿಫಾರಸು ಮಾಡಲಾಗಿದೆ. ಪ್ರಸ್ತುತದ ಬೆಳವಣಿಗೆ ದರವನ್ನು ಗಮನಿಸಿದರೆ, ಈ ಹಂತ ತಲುಪಲು ಕರ್ನಾಟಕಕ್ಕೆ 115.7 ವರ್ಷಗಳು ಬೇಕಾಗಬಹುದು ಎಂದು ಅಂದಾಜಿಸಲಾಗಿದೆ.

ನ್ಯಾಯಾಂಗದ 4 ಆಧಾರಸ್ತಂಭಗಳಾದ ಪೊಲೀಸ್ ವ್ಯವಸ್ಥೆ, ಜೈಲು ನಿರ್ವಹಣೆ, ನ್ಯಾಯದಾನ ಮತ್ತು ಕಾನೂನು ನೆರವಿನಂತಹ ಅಂಶಗಳನ್ನು ಪರಿಗಣಿಸಿ, ರಾಜ್ಯಗಳಲ್ಲಿ ಸಮೀಕ್ಷೆ ನಡೆಸಲಾಗುತ್ತದೆ. ಇದರ ಅಂಕಿ ಅಂಶಗಳಿಂದ ದೇಶದ ಎಲ್ಲಾ ರಾಜ್ಯಗಳಲ್ಲಿ ನ್ಯಾಯ ವಿತರಣೆಯನ್ನು ನಿರ್ಣಯಿಸಲು ಮತ್ತು ಸುಧಾರಿಸಲು ಅನುಕೂಲವಾಗುತ್ತದೆ.

**ಆಧಾರ:**ಕನ್ನಡ ಪ್ರಭ, ದಿನಾಂಕ:10.08.2025

## 5. ಕ್ರೀಡಾ ಬಿಲ್ ಲೋಕಸಭೆಯಲ್ಲಿ ಪಾಸ್

ಭಾರತದ ಕ್ರೀಡಾ ಆಡಳಿತದಲ್ಲಿ ಮತ್ತಷ್ಟು ಪಾರದರ್ಶಕತೆ ತರುವ ನಿಟ್ಟಿನಲ್ಲಿ ಜಾರಿಗೊಳಿಸಲಾಗುತ್ತಿರುವ ರಾಷ್ಟ್ರೀಯ ಕ್ರೀಡಾ ಆಡಳಿತ ಮಸೂದೆಗೆ ಲೋಕಸಭೆಯಲ್ಲಿ ಅಂಗೀಕಾರ ಲಭಿಸಿದೆ. ಕ್ರೀಡಾ ನ್ಯಾಯಾಧೀಕರಣ, ಚುನಾವಣೆ ಪ್ಯಾನೆಲ್ ಸೇರಿದಂತೆ ಹಲವು ಮಹತ್ವದ ವಿಚಾರಗಳನ್ನು ಈ ಮಸೂದೆ ಒಳಗೊಂಡಿದೆ. ಶೀಘ್ರದಲ್ಲೇ ರಾಜ್ಯ ಸಭೆಯಲ್ಲೂ ಮಸೂದೆ ಅಂಗೀಕಾರಗೊಂಡು ಕಾಯ್ದೆಯಾಗುವ ನಿರೀಕ್ಷೆಯಿದೆ.

ಸ್ವತಂತ್ರ ಸಂಸ್ಥೆಯಾಗಿರುವ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಕೂಡ ಇನ್ನು ಮುಂದೆ ಕೇಂದ್ರದ ಕ್ರೀಡಾ ಆಡಳಿತ ಮಸೂದೆ ವ್ಯಾಪ್ತಿಗೆ ಬರಲಿದೆ. ರಾಷ್ಟ್ರೀಯ ಕ್ರೀಡಾ ಫೆಡರೇಶನ್(ಎನ್‌ಎಸ್‌ಎಫ್)ಗಳಿಗೆ ಅನ್ವಯಿಸುವ ಎಲ್ಲಾ ನಿಯಮಗಳು ಬಿಸಿಸಿಐಗೆ ಕೂಡ ಅನ್ವಯವಾಗಲಿದೆ.

ಇತ್ತೀಚೆಗಷ್ಟೇ ಕೇಂದ್ರ ಕ್ರೀಡಾ ಸಚಿವ ಮನ್‌ಸುಖ್ ಮಾಂಡವೀಯ ಲೋಕಸಭೆಯಲ್ಲಿ ಕ್ರೀಡಾ ಆಡಳಿತ ಮಸೂದೆಯನ್ನು ಮಂಡಿಸಿದ್ದರು. ದಿನಾಂಕ:11.08.2025ರಂದು ಅಲ್ಪ ಚರ್ಚೆಯ ಬಳಿಕ ಮಸೂದೆಗೆ ಧ್ವನಿ ಮತದ ಅಂಗೀಕಾರ ಲಭಿಸಿತು. ಚುನಾವಣಾ ಆಯೋಗದ ವಿರುದ್ಧ ಪ್ರತಿಭಟನೆ ನಡೆಯುತ್ತಿದ್ದ ಹಿನ್ನೆಲೆಯಲ್ಲಿ, ವಿರೋಧ ಪಕ್ಷದ ಸದಸ್ಯರಿಲ್ಲದೆ ಕ್ರೀಡಾ ಬಿಲ್ ಪಾಸ್ ಆಯಿತು.

ಈ ವೇಳೆ ಮಾತನಾಡಿದ ಸಚಿವ ಮಾಂಡವೀಯ ಅವರು, 'ಇದು ಸ್ವತಂತ್ರ ಭಾರತದ ಇತಿಹಾಸದಲ್ಲೇ ಕ್ರೀಡೆಯ ಅತಿದೊಡ್ಡ ಸುಧಾರಣೆಯಾಗಿದೆ. ಕ್ರೀಡಾ ಒಕ್ಕೂಟಗಳಲ್ಲಿ ಪಾರದರ್ಶಕತೆ, ನ್ಯಾಯಪಾಲನೆ ಹಾಗೂ ಶ್ರೇಷ್ಠ ಆಡಳಿತವನ್ನು ಈ ಬಿಲ್ ಖಚಿತಪಡಿಸುತ್ತದೆ' ಎಂದರು. ಇದೇ ಸಂದರ್ಭ, ರಾಷ್ಟ್ರೀಯ ಉದ್ದೀಪನ ಮದ್ದು ಸೇವನೆ ನಿಗ್ರಹ ತಿದ್ದುಪಡಿ ಮಸೂದೆ ಕೂಡಾ ಲೋಕಸಭೆಯಲ್ಲಿ ಅಂಗೀಕಾರ ಪಡೆದುಕೊಂಡಿತು.

2011ರಿಂದ ರಾಷ್ಟ್ರೀಯ ಕ್ರೀಡಾ ಸಂಹಿತೆ ಚಾಲ್ತಿಯಲ್ಲಿತ್ತು. ಈಗ ಅದನ್ನು ಬದಲಾಯಿಸಿ ಕ್ರೀಡಾ ಆಡಳಿತ ಮಸೂದೆ 2025 ಪರಿಚಯಿಸಲಾಗಿದೆ. ಇದರಲ್ಲಿ ರಾಷ್ಟ್ರೀಯ ಕ್ರೀಡಾ ಮಂಡಳಿ (ಎನ್‌ಎನ್‌ಬಿ), ರಾಷ್ಟ್ರೀಯ ಕ್ರೀಡಾ ನ್ಯಾಯಾಧಿಕರಣ(ಎನ್‌ಎಸ್‌ಟಿ), ರಾಷ್ಟ್ರೀಯ ಕ್ರೀಡಾ ಚುನಾವಣಾ ಪ್ಯಾನೆಲ್ ಸ್ಥಾಪನೆಗೆ ಅವಕಾಶ ರೂಪಿಸಲಾಗಿದೆ.

ಎನ್‌ಎಸ್‌ಬಿಯು ಬಿಸಿಸಿಐ ಸೇರಿ ಎಲ್ಲಾ ರಾಷ್ಟ್ರೀಯ ಕ್ರೀಡಾ ಫೆಡರೇಶನ್‌ಗಳ ಕಾರ್ಯವೈಖರಿ ಮೇಲೆ ಕಣ್ಣಿಡಲಿದ್ದು, ಕಾರ್ಯಚಟುವಟಿಕೆಗಳು ನಿಯಮಾನುಸಾರ ನಡೆಯಲು ಅಗತ್ಯವಿರುವ ಕ್ರಮಗಳನ್ನು ಕೈಗೊಳ್ಳಲಿದೆ.

ಇನ್ನು, ಕ್ರೀಡಾಪಟುಗಳ ಆಯ್ಕೆ, ರಾಷ್ಟ್ರೀಯ ಕ್ರೀಡಾ ಫೆಡರೇಶನ್‌ಗಳ ಚುನಾವಣೆ ವಿವಾದ, ಆಡಳಿತ ಹಾಗೂ ಹಣಕಾಸು ದುರುಪಯೋಗಕ್ಕೆ ಸಂಬಂಧಿಸಿದ ಪ್ರಕರಣಗಳನ್ನು ಪ್ರತ್ಯೇಕವಾಗಿ ಕೈಗೆತ್ತಿಕೊಂಡು ಅವುಗಳನ್ನು ಇತ್ಯರ್ಥಗೊಳಿಸುವ ಹೊಣೆ ಕ್ರೀಡಾ ನ್ಯಾಯಾಧಿಕರಣದ ಮೇಲಿರಲಿದೆ. ಇದಕ್ಕೆ ಸಿವಿಲ್ ಕೋರ್ಟ್‌ನ ಮಾನ್ಯತೆ ಇರಲಿದ್ದು, ನ್ಯಾಯಾಧಿಕರಣದ ತೀರ್ಪನ್ನು ಕೇವಲ ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಬಹುದಾಗಿದೆ.

**ಆಧಾರ:** ಕನ್ನಡ ಪ್ರಭ, ದಿನಾಂಕ:12.08.2025

## 6. ಮನಿ ಗೇಮಿಂಗ್ ನಿಷೇಧ

ನೈಜ ಹಣಬಳಸಿ ಆಡುವ ಎಲ್ಲಾ ರೀತಿಯ ಆನ್‌ಲೈನ್ ಗೇಮ್‌ಗಳನ್ನು ನಿಷೇಧಿಸುವ ಆನ್‌ಲೈನ್ ಗೇಮಿಂಗ್ ಉತ್ತೇಜನ ಮತ್ತು ನಿಯಂತ್ರಣ 2025 ವಿಧೇಯಕವು ದಿನಾಂಕ:20ನೇ ಆಗಸ್ಟ್ 2025ರಂದು ಲೋಕಸಭೆಯಲ್ಲಿ ಅಂಗೀಕಾರಗೊಂಡಿದೆ.

ಹೆಚ್ಚುತ್ತಿರುವ ಆನ್‌ಲೈನ್ ಗೇಮ್ ಚಟ, ಅಕ್ರಮ ಹಣ ವರ್ಗಾವಣೆ ಮತ್ತು ಆ್ಯಪ್‌ಗಳ ಮೂಲಕ ನಡೆಯುತ್ತಿರುವ ಹಣಕಾಸು ವಂಚನೆಗೆ ಕಡಿವಾಣ ಹಾಕುವ ಉದ್ದೇಶದಿಂದ ಕೇಂದ್ರ ಸರ್ಕಾರ ವಿಧೇಯಕ ಮಂಡಿಸಿ ಅಂಗೀಕಾರ ಪಡೆದುಕೊಂಡಿದೆ.

ಈ ವಿಧೇಯಕವು ಆನ್‌ಲೈನ್ ಗೇಮ್‌ಗಳ ನಿರ್ವಹಣೆ, ವೇದಿಕೆ ಕಲ್ಪಿಸುವುದು, ಜಾಹೀರಾತು, ಇವುಗಳ ಯಾವುದೇ ಹಣಕಾಸು ಸಂಸ್ಥೆಗಳ ಮೂಲಕ ಇಂಥ ಗೇಮ್‌ಗಳಿಗೆ ಹಣದ ವರ್ಗಾವಣೆ ನಿಷೇಧಿಸುತ್ತದೆ.

ಆನ್‌ಲೈನ್ ಬೆಟ್ಟಿಂಗ್, ಜೂಜಾಟಗಳಿಗೆ ಸಂಪೂರ್ಣ ನಿಷೇಧ. ಅಂದರೆ ಫ್ಯಾಂಟಿಸಿ ಸ್ಪೋರ್ಟ್ಸ್, ಪೋಕರ್, ರಮ್ಮಿ ಮತ್ತು ಇತರೆ ಕಾರ್ಡ್ ಗೇಮ್ಸ್ ಸೇರಿ ಹಣ ಹಾಕಿ ಆಡುವ ಎಲ್ಲಾ ರೀತಿಯ ಗೇಮ್ಸ್‌ಗಳನ್ನು ನಿರ್ಬಂಧಿಸುತ್ತದೆ. ಆರೋಪಿಗಳಿಗೆ 3 ವರ್ಷದವರೆಗೆ ಜೈಲು, ರೂ.1 ಕೋಟಿವರೆಗೆ ದಂಡ ವಿಧಿಸಲು ಅವಕಾಶ ಮಾಡಿಕೊಡುತ್ತದೆ.

ಆನ್‌ಲೈನ್ ಗೇಮ್ ಜಾಹೀರಾತು ನೀಡುವವರಿಗೆ 2ವರ್ಷ ಜೈಲು, 50ಲಕ್ಷ ರೂವರೆಗೆ ದಂಡ, ಹಣಕಾಸು ವ್ಯವಸ್ಥೆ ಕಲ್ಪಿಸಿದರೆ 3 ವರ್ಷ ಜೈಲು ಮತ್ತು 1 ಕೋಟಿವರೆಗೆ ದಂಡ, ಪದೇ ಪದೆ ಅಪರಾಧ ಎಸಗುವವರಿಗೆ 2 ಕೋಟಿವರೆಗೆ ದಂಡ, 5 ವರ್ಷದ ವರೆಗೆ ಜೈಲು ಶಿಕ್ಷೆ ವಿಧಿಸಲೂ ಅವಕಾಶವಿದೆ. ಇಲ್ಲಿ ಕೆಲ ವಿಚಾರಗಳಲ್ಲಿನ ಅಪರಾಧಗಳಿಗೆ ಜಾಮೀನು ರಹಿತ ಪ್ರಕರಣ ದಾಖಲಿಸಲು ಅವಕಾಶವಿದೆ.

**ಆಧಾರ:** ಕನ್ನಡ ಪ್ರಭ, ದಿನಾಂಕ:21.08.2025

## 7. Auto, pharma sectors cheer GST slabs; airlines say wings clipped

while the goods and services tax (GST) rate changes authorised by the GST Council On 3rd September, 2025 night brought cheer to the auto, insurance, consumer appliances, pharmaceuticals, and renewable energy sectors, among others, some of that was tinged with reproach. A few sectors are outright upset with the tax changes.

The stock market, too, reflected this mixed response on dated:04.09.2025, initially reacting positively but ending the day nearly flat, with the Sensex up just 0.2% from the previous day.

The airlines slammed the higher GST on non economy seats. Vegetable oil producers called for the resolution of the inverted duty structure on edible oils, which means that the GST rate on raw materials in their industry is higher than the rate on

the finished product. This mismatch was something that the Council corrected for the fertilizer and man made textiles industries.

The increase in the GST rate for labour charges, from 12% to 18%, has also led to some resistance, with small entrepreneurs saying that they would be hit hard by the change.

While the textile industry has welcomed the revision of GST rates for both man made fibre and cotton sectors, it has also expressed its disappointment over the 18% duty for garments priced above Rs.2,500 each.

The Cloth Manufacturers Association of India pointed out that such garments are also consumed in large numbers by the common man, especially in the form of woollens, wedding wear, traditional clothing, handlooms, and embroidered clothes. Charging 18% GST on these will make them significantly more costly, it said.

This nuanced cheer can be seen in the auto sector as well. Auto manufacturers have welcomed the rate rationalisation for the sector, along with the removal of the GST Compensation Cess applicable on cars.

**Courtesy:**The Hindu, dated:05.09.2025

# ಭಾಗ–5

## ರಾಜ್ಯ ಸರ್ಕಾರ ಸುದ್ದಿಗಳು

## 1. K'taka records Rs. 1.6L-crore GST revenue, 2nd highest in country

The Central Goods and Services Tax (CGST) Bengaluru zone marked the eighth anniversary of the introduction of Goods and Services Tax(GST) with Karnataka celebrating a significant milestone. The state recorded a robust GST revenue of about Rs 1.6 lakh crore in the financial year 2024-25, securing its position as the second highest GST contributing state in the country after Maharashtra.

Karnataka's rising tax contribution reflects the state's growing economic activity and expanding tax payer base. With approximately 10.5 lakh registered taxpayers, Karnataka now ranks fifth among Indian states in terms of GST registration an indicator of both business growth and increasing compliance.

Bengaluru zone, led by chief commissioner(Central GST) Kajal Singh, undertook several measures including the fortnight-long GST Pakhwada to improve collections. Help desks we set up to assist traders, resolve issues, and spread awareness. Key initiatives that were showcased included notification of a structured grievance redressal mechanism, operationalising over 100 facilitation centres for biometric based Aadhaar authentication, and decentralising processing of new GST registrations.

Earlier, officials discussed the role of artificial intelligence(AI) in a workshop titled GST @8: Reimagining Indirect Taxation with Al. Prakash Kumar, CEO of Government Digital Transformation at Wadhwani Foundation, discussed the govt's efforts to simplify indirect taxation and explained how Al can revolutionise compliance, policymaking and governance.

The CGST provided, commendation certificates to various taxpayers and administrators. Toyota Kirloskar Motor Pvt. Ltd., SAP India Pvt. Ltd., Texas Instruments (India) Pvt. Ltd., TUMUL (Nandini), TVS Motor Company Ltd, Nextleap Aeronautics Pvt. Ltd and QNu Labs Pvt. Ltd., were recognised for their compliance with GST and innovation.

**Courtesy:**Times of India, dated:02.07.2025

## 2. ರಾಜ್ಯದ ಮತ್ತೊಂದು ಜಿಲ್ಲೆ ಹೆಸರು ಬದಲು

ರಾಮನಗರ ಜಿಲ್ಲೆಯನ್ನು ಬೆಂಗಳೂರು ದಕ್ಷಿಣ ಜಿಲ್ಲೆ ಎಂದು ಮರು ನಾಮಕರಣ ಮಾಡಿದ ಬೆನ್ನಲ್ಲೇ ಬೆಂಗಳೂರು ಗ್ರಾಮಾಂತರ ಜಿಲ್ಲೆ ಹೆಸರನ್ನು 'ಬೆಂಗಳೂರು ಉತ್ತರ ಜಿಲ್ಲೆ' ಎಂದು ಹಾಗೂ ಬಾಗೇಪಲ್ಲಿ ಪಟ್ಟಣದ ಹೆಸರನ್ನು 'ಭಾಗ್ಯ ನಗರ' ಎಂದು ಮರು ನಾಮಕರಣ ಮಾಡಲು ನಂದಿಬೆಟ್ಟದಲ್ಲಿ ನಡೆದ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ನಿರ್ಧರಿಸಲಾಗಿದೆ.

ಇದೇ ವೇಳೆ ವಿರೋಧಪಕ್ಷಗಳ ತೀವ್ರ ವಿರೋಧದ ನಡುವೆಯೇ ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯಕ್ಕೆ ಮಾಜಿ ಪ್ರಧಾನಿ ದಿ.ಡಾ.ಮನಮೋಹನ್‌ಸಿಂಗ್ ಹೆಸರಿಡಲು ತೀರ್ಮಾನಿಸಲಾಗಿದ್ದು, 'ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ' ಎಂದು ಮರು ನಾಮಕರಣದ ಪ್ರಸ್ತಾವನೆಗೆ ಒಪ್ಪಿಗೆ ನೀಡಲಾಗಿದೆ. ಬೆಂಗಳೂರಿನ ಕಲಾಸಿಪಾಳ್ಯ ಬಸ್ ನಿಲ್ದಾಣವನ್ನು 'ಜನೋಪಕಾರಿ ಶ್ರೀ ದೊಡ್ಡಣ್ಣ ಶೆಟ್ಟರ ಕಲಾಸಿಪಾಳ್ಯ ಬಸ್ ನಿಲ್ದಾಣ' ಎಂದು ಮರು ನಾಮಕರಣಕ್ಕೆ ಸಭೆ ತೀರ್ಮಾನಿಸಿದೆ.

**ಆಧಾರ:**ಕನ್ನಡ ಪ್ರಭ, ದಿನಾಂಕ:03.07.2025

## 3. ರಾಜ್ಯ ಸರ್ಕಾರದಿಂದ ದೃಷ್ಟಿ ಗ್ಯಾರಂಟಿ ಯೋಜನೆ

ಅಂಧತ್ವ ಮುಕ್ತ ಕರ್ನಾಟಕ ಉದ್ದೇಶದಿಂದ ರಾಜ್ಯ ಸರ್ಕಾರ ಜಾರಿಗೆ ತಂದ ಆಶಾಕಿರಣ ಯೋಜನೆಯಡಿ ರಾಜ್ಯಾದ್ಯಂತ 393 ಶಾಶ್ವತ ದೃಷ್ಟಿ ಕೇಂದ್ರಗಳಿಗೆ ಡಿ.ಸಿ.ಎಂ. ಡಿ.ಕೆ. ಶಿವಕುಮಾರ್ ಚಾಲನೆ ನೀಡಿದ್ದಾರೆ.

ಗೋವಿಂದರಾಜ ನಗರ ಕ್ಷೇತ್ರದ ಬಿಬಿಎಂಪಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ದಿನಾಂಕ:03.07.2025ರಂದು ದೃಷ್ಟಿ ಕೇಂದ್ರ ಉದ್ಘಾಟಿಸಿ ಮಾತನಾಡಿದ ಅವರು, ದೃಷ್ಟಿ ಸಮಸ್ಯೆಗೆ ಬಳಲುವವರಿಗೆ ಚಿಕಿತ್ಸೆ ನೀಡುವ 'ದೃಷ್ಟಿ ನಯಾಜಿಯನ್ನು ಆಶಾಕಿರಣ ಯೋಜನೆ ಮೂಲಕ ಕಾಂಗ್ರೆಸ್ ಸರ್ಕಾರ ನೀಡುತ್ತಿದೆ. ರಾಜ್ಯದಾದ್ಯಂತ 393 ಆಶಾಕಿರಣ ದೃಷ್ಟಿ ಕೇಂದ್ರಗಳ ಉದ್ಘಾಟನೆಯಾಗುತ್ತಿದೆ ಉಚಿತವಾಗಿ ಕನ್ನಡಕ ನೀಡಲಾಗುತ್ತಿದೆ.

ಎಸ್.ಎಂ.ಕೃಷ್ಣ ಅವರ ಕಾಲದಲ್ಲಿ ಯಶಸ್ವಿನಿ ಯೋಜನೆ ಮೂಲಕ ರೈತರ, ಬಡವರ ಆರೋಗ್ಯ ಕಾಳಜಿಗೆ ಮುನ್ನುಡಿ ಬರೆದಿದ್ದು ನಮ್ಮ ಸರ್ಕಾರ. ಇದನ್ನು ನೋಡಿದ ಕೇಂದ್ರ, ಆರೋಗ್ಯ ಯೋಜನೆಗಳನ್ನು ಆರಂಭಿಸಿತು. ಪ್ರಸ್ತುತ 7 ಕೋಟಿ ಜನಸಂಖ್ಯೆಯ ರಾಜ್ಯದಲ್ಲಿ 2421 ಪಿಎಚ್‌ಸಿ ಕೆಲಸ ಮಾಡುತ್ತಿವೆ. 70ಕ್ಕೂ ಹೆಚ್ಚು ಮೆಡಿಕಲ್ ಕಾಲೇಜುಗಳಿವೆ ಎಂದರು.

ಆರೋಗ್ಯ ಸಚಿವ ಶ್ರೀ ದಿನೇಶ್ ಗುಂಡೂರಾವ್ ಮಾತನಾಡಿ, ಆಶಾಕಿರಣ ಯೋಜನೆ ಮರು ವಿನ್ಯಾಸಗೊಳಿಸಿದ್ದು, ಕಣ್ಣಿನ ಆರೋಗ್ಯ ಸೇವೆ ಒದಗಿಸಲು 393 ಶಾಶ್ವತ ಆಶಾಕಿರಣ ದೃಷ್ಟಿ ಕೇಂದ್ರ ತೆರೆಯಲಾಗಿದೆ. ರಾಜ್ಯದ ಎಲ್ಲಾ ಜಿಲ್ಲಾ ಆಸ್ಪತ್ರೆ, ತಾಲೂಕು ಆಸ್ಪತ್ರೆ, ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ದೃಷ್ಟಿ ಕೇಂದ್ರ ತೆರೆಯಲಾಗಿದೆ. ದೃಷ್ಟಿದೋಷ ಇರುವವರು ತಪಾಸಣೆ ಮಾಡಿಸಿಕೊಂಡು, ಉಚಿತವಾಗಿ ಕನ್ನಡಕ ಪಡೆಯಬಹುದು. ಅಲ್ಲದೇ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆ ಉಚಿತವಾಗಿ ಕಲ್ಪಿಸಲಾಗುತ್ತಿದೆ ಎಂದರು.

ಆಶಾಕಿರಣ ಮಾದರಿ ಯೋಜನೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಶ್ಲಾಘಿಸಿದೆ. ಯೋಜನೆ ಅಧ್ಯಯನಕ್ಕೆ ವಿಶ್ವ ಆರೋಗ್ಯ ಸಂಸ್ಥೆ ಕರ್ನಾಟಕಕ್ಕೆ ತಂಡ ಕಳಿಸುತ್ತಿರುವುದು ಹೆಮ್ಮೆಯ ಸಂಗತಿ, ಕರ್ನಾಟಕವನ್ನು ಅಂಧತ್ವ, ದೃಷ್ಟಿದೋಷ ಮುಕ್ತ ರಾಜ್ಯವಾಗಿಸಲು ಈ ಹೆಜ್ಜೆ ಇಡಲಾಗಿದೆ ಎಂದು ಹೇಳಿದರು.

ಈ ಕಾರ್ಯಕ್ರಮವು 2 ಹಂತಗಳಲ್ಲಿ 8 ಜಿಲ್ಲೆಗಳಲ್ಲಿ ಒಟ್ಟು 1.40 ಕೋಟಿ ಜನ ಪ್ರಾಥಮಿಕ ನೇತ್ರ ತಪಾಸಣೆ ಒಳಗಾಗಿದ್ದಾರೆ. ಇವರಲ್ಲಿ 24.50 ಲಕ್ಷ ಜನರಿಗೆ ಹೆಚ್ಚಿನ ನೇತ್ರ ತಪಾಸಣೆಗೆ ಸಂಬಂಧಿಸಿದ ತೊಂದರೆಗಳಿರುವುದು ಪತ್ತೆಯಾಗಿದೆ. ಇವರನ್ನು ದ್ವಿತೀಯ ಹಂತದ ತಪಾಸಣೆಗೆ ಒಳಪಡಿಸಲಾಗಿದೆ:

4.3 ಲಕ್ಷ ಜನರಿಗೆ ಉಚಿತ ಕನ್ನಡಕ ವಿತರಿಸಲಾಗಿದ್ದು, ಉಳಿದ ಕನ್ನಡಕಗಳನ್ನು ಆಶಾಕಿರಣ ದೃಷ್ಟಿ ಕೇಂದ್ರಗಳಲ್ಲಿ ಇರಿಸಲಾಗಿದೆ. 1.05 ಲಕ್ಷ ಜನರಿಗೆ ಉಚಿತ ಕಣ್ಣಿನ ಪೊರೆ ಶಸ್ತ್ರ ಚಿಕಿತ್ಸೆ ನಡೆಸಲಾಗಿದೆ ಎಂದರು.

**ಆಧಾರ:**ಕನ್ನಡ ಪ್ರಭ, ದಿನಾಂಕ:04.07.2025

## 4. ದೇಶದ 2ನೇ ಉದ್ದದ ತೂಗು ಸೇತುವೆ ಉದ್ಘಾಟಿಸಿ ಹೆಸರು ಘೋಷಿಸಿದ ಗಡ್ಕರಿ

ನಾನೇ ಶಂಕುಸ್ಥಾಪನೆ ನೆರವೇರಿಸಿದ್ದ ಅಂಬಾರಗೋಡ್ಲು ಕಳಸವಳ್ಳಿ ಸೇತುವೆಯನ್ನು ಇದೀಗ ನಾನೇ ಉದ್ಘಾಟಿಸಿದ್ದು ನನ್ನ ಸೌಭಾಗ್ಯ. ಇದು ಸಿಗಂಧೂರು ಶ್ರೀ ಚೌಡೇಶ್ವರಿಯ ಆಶೀರ್ವಾದದಿಂದ ಸಾಧ್ಯವಾಗಿದೆ ಎಂದು ಕೇಂದ್ರ ಭೂ ಸಾರಿಗೆ ಸಚಿವ ನಿತಿನ್ ಗಡ್ಕರಿ ಹೇಳಿದರು.

ಬಿ.ಎಸ್.ಯಡಿಯೂರಪ್ಪನವರ ಕೋರಿಕೆ ಮೇರೆಗೆ ಶಂಕು ಸ್ಥಾಪನೆಗೆ ನಾನು ಇಲ್ಲಿಗೆ ಬಂದಿದ್ದೆ. ಸೇತುವೆ ಕಾಮಗಾರಿಯ ವೆಚ್ಚ ಹೆಚ್ಚಾಗಿತ್ತು. ಇದರ ಜೊತೆಗೆ ಬೇರೆ, ಬೇರೆ ಅಡಚಣೆಗಳಿದ್ದವು. ಆದರೂ, ಸಿಗಂದೂರು ಚೌಡೇಶ್ವರಿಯ ಆಶೀರ್ವಾದದಿಂದ ಕೆಲಸ ಪೂರ್ಣವಾಗಿದೆ. ಹೀಗಾಗಿ, ಈ ಸೇತುವೆಗೆ 'ಶ್ರೀ ಮಾತಾ ಸಿಗಂದೂರು ಚೌಡೇಶ್ವರಿ ದೇವಿ' ಹೆಸರನ್ನು ಘೋಷಣೆ ಮಾಡುತ್ತೇನೆ. ಮುಂದೆ ಇದೇ ಹೆಸರನ್ನು ಇಡಲು ಕ್ರಮ ಕೈಗೊಳ್ಳಲಾಗುವುದು ಎಂದರು.

ಸಂಸದ ಬಿ.ವೈ.ರಾಘವೇಂದ್ರ ಅವರು ಬೆನ್ನು ಬಿಡದ ಬೇತಾಳದಂತೆ ಬೆನ್ನತ್ತಿ ಕೆಲಸ ಮಾಡಿಸಿಕೊಳ್ಳುವ ವ್ಯಕ್ತಿ. ಚಿಕ್ಕ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಗೆ ಸೇರಿಸಿ ₹473 ಕೋಟಿ ವೆಚ್ಚದಲ್ಲಿ ಸಿಗಂದೂರು ಸೇತುವೆ ನಿರ್ಮಾಣ ಮಾಡಿಸಿದ್ದಾರೆ. ದ್ವೀಪದ ಸಂತ್ರಸ್ತರ ಬವಣೆ ನಂತರ ಇಲ್ಲಿ ಸೇತುವೆ ನಿರ್ಮಾಣ ಮಾಡಿ ಲೋಕಾರ್ಪಣೆ ಮಾಡಿದ್ದಾರೆ ಎಂದು ಅವರು ವಿವರಿಸಿದರು.

ತುಮಕೂರು–ಶಿವಮೊಗ್ಗ ನೂತನ ಹೆದ್ದಾರಿಯ ಕಾಮಗಾರಿಯ ಕೆಲಸ ಶೇ.80ರಷ್ಟು ಆಗಿದೆ. ಇದು ಡಿಸೆಂಬರ್ ಒಳಗೆ ಲೋಕಾರ್ಪಣೆಯಾಗಲಿದೆ. ಇದರಿಂದ ಬೆಂಗಳೂರು–ಶಿವಮೊಗ್ಗ ರಸ್ತೆ ಸಂಚಾರ 7 ಗಂಟೆಯಿಂದ 3 ಗಂಟೆಗೆ ಇಳಿಯಲಿದೆ. ಶಿವಮೊಗ್ಗ–ಚಿತ್ರದುರ್ಗ ಹೆದ್ದಾರಿಯ ಕಾಮಗಾರಿ 2026ರ ಫೆಬ್ರವರಿಯಲ್ಲಿ ಪೂರ್ಣವಾಗಲಿದೆ. ಇದರಿಂದ ಶಿವಮೊಗ್ಗ–ಚಿತ್ರದುರ್ಗ ಸಂಚಾರಕ್ಕೆ 3 ಗಂಟೆ ಬದಲು ಒಂದೂವರೆ ಗಂಟೆಯಲ್ಲಿ ಸಂಚರಿಸಬಹುದು. ಬೆಂಗಳೂರು–ಚೆನ್ನೈ ನೂತನ ಹೆದ್ದಾರಿಯಿಂದಾಗಿ 2 ಗಂಟೆಯಲ್ಲಿ ಸಂಚಾರ ಸಾಧ್ಯವಾಗಲಿದೆ. ಬೆಂಗಳೂರು ಟ್ರಾಫಿಕ್ ಜಾಮ್ ತಪ್ಪಿಸಲು ಹೊಸ ಕಾಮಗಾರಿ ನಡೆಯುತ್ತಿದೆ ಎಂದು ಹೇಳಿದರು.

**ಆಧಾರ:**ಕನ್ನಡ ಪ್ರಭ, ದಿನಾಂಕ:14.07.2025

## 5. ಬಿ–ಖಾತೆಗಳಿಗೆ ಎ–ಖಾತಾ ಕಾನೂನು ಮಾನ್ಯತೆ

ರಾಜ್ಯ ಸರ್ಕಾರ ಗ್ರೇಟರ್ ಬೆಂಗಳೂರು ವ್ಯಾಪ್ತಿಯ ಬಿ–ಖಾತಾ ಗೊಂದಲಗಳಿಗೆ ತೆರೆ ಎಳೆಯಲು ಮುಂದಾಗಿದ್ದು, 2024ರ ಸೆಪ್ಟೆಂಬರ್30ರವರೆಗೆ ಬಿಬಿಎಂಪಿ ನೀಡಿರುವ ಎಲ್ಲಾ ಬಿ–ಖಾತಾಗಳಿಗೆ ಎ–ಖಾತಾ ಅಥವಾ ಸರಿಯಾದ ಖಾತಾ(ಕಾನೂನು ಬದ್ಧ) ಎಂದು ನೀಡಲು ದಿನಾಂಕ:17.07.2025ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಮಹತ್ವದ ತೀರ್ಮಾನ ಮಾಡಲಾಗಿದೆ.

ಈ ನಿರ್ಧಾರದಿಂದ ವರ್ಷಗಳಿಂದ ಕಾನೂನು ಮಾನ್ಯತೆ ಇಲ್ಲದೆ ಸಮಸ್ಯೆ ಅನುಭವಿಸುತ್ತಿದ್ದ ಬಿ–ಖಾತಾದಾರರಿಗೆ ನಿರಾಳತೆ ಮೂಡಿದ್ದು, ಈ ಬಗ್ಗೆ ಸದ್ಯದಲ್ಲೇ ನಿಯಮಾವಳಿ ಸಹಿತ ಅಧಿಕೃತ ಆದೇಶ ಹೊರಡಿಸಲು ತೀರ್ಮಾನಿಸಲಾಗಿದೆ. ಪ್ರಸ್ತುತ ಇ–ಖಾತಾ ಜಾರಿಯಲ್ಲಿರುವುದರಿಂದ ಎ–ಖಾತಾ ಹಾಗೂ ಸರಿಯಾದ ಖಾತಾಗಳನ್ನು ಹೇಗೆ ವಿತರಿಸಬೇಕು ಎಂಬ ಪ್ರಕ್ರಿಯೆ ಹಾಗೂ ಶುಲ್ಕ ವಿವರಗಳನ್ನು ತಿಳಿಸುವ ಸಾಧ್ಯತೆಯಿದೆ.

ಕ್ರಮಬದ್ಧವಲ್ಲದ ನಿವೇಶನ ಅಥವಾ ಆಸ್ತಿಗಳಿಗೆ ಬಿಬಿಎಂಪಿಯು 2009 ರಿಂದ ಈಚೆಗೆ ಬಿ–ಖಾತಾ ನೀಡಲಾಗುತ್ತಿತ್ತು. ಬಿ–ಖಾತಾ ನೀಡುವ ಪ್ರಕ್ರಿಯೆಯನ್ನು 2024ರ ಸೆ.30ರಂದು ಸ್ಥಗಿತಗೊಳಿಸಲಾಗಿತ್ತು. ಹೀಗಾಗಿ 2009 ರಿಂದ 2024ರ ಸೆ.30ರ ನಡುವೆ ನೀಡಿರುವ ಬಿ–ಖಾತಾ ಆಸ್ತಿ ಸಮಸ್ಯೆ ಪರಿಹರಿಸಲು ಸುದೀರ್ಘ ಚರ್ಚೆ ನಡೆಸಲಾಯಿತು.

ಬಳಿಕ ಈ ಬಿ–ಖಾತಾ ಸರ್ಕಾರದ ಸುತ್ತೋಲೆಗಳ ಆಧಾರದ ಮೇಲೆ ನೀಡಿದ್ದರೆ ಎ–ಖಾತಾ ಎಂದು ಪರಿಗಣಿಸಬಹುದು. ಇಲ್ಲದಿದ್ದರೆ ಸರಿಯಾದ ಖಾತಾ ಎಂದು ಪರಿಗಣಿಸಿ ಕಾನೂನು ಉದ್ದೇಶಕ್ಕೆ ಅಧಿಕೃತ ಎಂದು ಪರಿಗಣಿಸಬಹುದು ಎಂದು ನಿರ್ಧರಿಸಿರುವುದಾಗಿ ತಿಳಿದು ಬಂದಿದೆ. ಈ ಮೂಲಕ ಬಿ–ಖಾತಾಗಳಿಗಿದ್ದ ಬಿಬಿಎಂಪಿ ನಕ್ಷೆ ಅನುಮೋದನೆ, ಓಸಿ ಹಾಗೂ ಸಿಸಿ, ಸಮಸ್ಯೆ ತನ್ಮೂಲಕ ಉಂಟಾಗಿದ್ದ ವಿದ್ಯುತ್ ಸಂಪರ್ಕ, ನೀರು, ಒಳಚರಂಡಿ ಸಂಪರ್ಕ ಸಮಸ್ಯೆಗಳಿಗೆ ಮುಕ್ತಿ ನೀಡಲು ಮುಂದಾಗಿದೆ.

**ಆಧಾರ:**ಕನ್ನಡ ಪ್ರಭ, ದಿನಾಂಕ:18.07.2025

## 6. ರಾಜ್ಯಪಾಲರು 2 ಸಲ ತಿರಸ್ಕಾರ ಮಾಡಿದ್ದ 2 ಮಸೂದೆಗೆ ತಿದ್ದುಪಡಿ ಮಾಡಿದ ಸರ್ಕಾರ

ರಾಜ್ಯಪಾಲರು ಹಾಗೂ ಸರ್ಕಾರದ ನಡುವೆ ತಿಕ್ಕಾಟಕ್ಕೆ ಕಾರಣವಾಗಿದ್ದ ಕರ್ನಾಟಕ ರಾಜ್ಯ ಸಹಕಾರ ಸಂಘಗಳ ತಿದ್ದುಪಡಿ ವಿಧೇಯಕ–2024 ಹಾಗೂ ಸೌಹಾರ್ದ ಸಂಘಗಳ ತಿದ್ದುಪಡಿ ವಿಧೇಯಕಗಳಿಗೆ ರಾಜ್ಯಪಾಲರ ಸಲಹೆ ಮೇರೆಗೆ ಕೆಲ ಬದಲಾವಣೆ ಮಾಡಲು ಸಚಿವ ಸಂಪುಟ ನಿರ್ಧರಿಸಿದ್ದು, ಒಟ್ಟು ಹದಿನೇಳು ವಿಧೇಯಕಗಳನ್ನು ಮುಂದಿನ ಅಧಿವೇಶನದಲ್ಲಿ ಮಂಡಿಸಲು ತೀರ್ಮಾನಿಸಲಾಗಿದೆ.

ಸಹಕಾರ ಸಂಘಗಳಿಗೆ ಮೀಸಲು ಆಧಾರಿತವಾಗಿ ರಾಜ್ಯ ಸರ್ಕಾರದಿಂದ ಮೂವರನ್ನು ನಾಮನಿರ್ದೇಶಿತ ಸದಸ್ಯರನ್ನಾಗಿ ನೇಮಿಸಲು ಅವಕಾಶ ನೀಡುವ ಕರ್ನಾಟಕ ರಾಜ್ಯ ಸಹಕಾರ ಸಂಘಗಳ ತಿದ್ದುಪಡಿ ವಿಧೇಯಕ–2024 ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ತಿದ್ದುಪಡಿ ವಿಧೇಯಕಗಳನ್ನು ರಾಜ್ಯಪಾಲರು ಸತತ ಎರಡು ಬಾರಿ ತಿರಸ್ಕರಿಸಿದ್ದರು. ಅಲ್ಲದೆ, ವಿಧೇಯಕಗಳು ಪ್ರಜಾಸತ್ತಾತ್ಮಕ ವ್ಯವಸ್ಥೆಗೆ ವಿರುದ್ಧವಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದರು.

ಈ ಹಿನ್ನೆಲೆಯಲ್ಲಿ ದಿನಾಂಕ:07.08.2025ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಸರ್ಕಾರದಿಂದ ಮೂವರನ್ನು ಮೀಸಲು ಆಧಾರದ ಮೇಲೆ ನೇಮಿಸುವ ನಿಯಮ ಕೈಬಿಡಲಾಗಿದೆ. ಬದಲಿಗೆ ಸಂಘದ ಅಧ್ಯಕ್ಷ ಸ್ಥಾನಕ್ಕೆ ಮಾತ್ರ ಮೀಸಲಾತಿ ನಿಗದಿ ಮಾಡಲಾಗಿದೆ.

ರಾಜ್ಯದಲ್ಲಿ ದೇವದಾಸಿ ಪದ್ಧತಿ ನಿರ್ಮೂಲನೆ ಮಾಡುವ, ದೇವದಾಸಿಗೆ ಜನಿಸಿದ ಮಗುವಿಗೆ ತನ್ನ ತಂದೆಯ ಗುರುತಿಸಲು(ಪಿತೃತ್ವ ಹಕ್ಕು) ಹಾಗೂ ಸಮಗ್ರ ಪುನರ್‌ವಸತಿ ಕಲ್ಪಿಸಲು ಅವಕಾಶ ನೀಡುವ ಕರ್ನಾಟಕ ದೇವದಾಸಿ ಪದ್ಧತಿ(ತಡೆಗಟ್ಟುವ, ನಿಷೇಧ, ಪರಿಹಾರ ಮತ್ತು ಪುನರ್‌ವಸತಿ) ವಿಧೇಯಕ–2025ಕ್ಕೆ ಸಚಿವ ಸಂಪುಟ ಅನುಮೋದನೆ ನೀಡಿದೆ.

ಈ ಬಗ್ಗೆ ಮಾತನಾಡಿದ ಸಚಿವ ಎಚ್.ಕೆ. ಪಾಟೀಲ್, ದೇವದಾಸಿಯ ಮಗನಿಗೆ ತನ್ನ ಹೆಸರು, ಉಪನಾಮ ಅಥವಾ ತಾಯಿಯ ಹೆಸರನ್ನು ತಂದೆಯ ಕಲಂನಲ್ಲಿ ಬರೆಯಲು ಅವಕಾಶ ಮಾಡಿಕೊಡಲಾಗಿದೆ ಎಂದು ಹೇಳಿದ್ದಾರೆ. ಇದೇ ವೇಳೆ ಜೈವಿಕ ತಂದೆಯನ್ನು ಗುರುತಿಸುವ ಅವಕಾಶವನ್ನೂ ಸಹ ಕಾಯ್ದೆಯಲ್ಲಿ ನೀಡಲಾಗಿದೆ ಎಂದು ಮೂಲಗಳು ತಿಳಿಸಿವೆ."

ಅಲ್ಪಸಂಖ್ಯಾತರ ಶಿಕ್ಷಣ ಸಂಸ್ಥೆ ಮಾನ್ಯತೆ ಹೊಂದಿರುವ ಶಿಕ್ಷಣ ಸಂಸ್ಥೆಗಳು ಕನಿಷ್ಠ 50ರಷ್ಟು ಅಲ್ಪಸಂಖ್ಯಾತ ವಿದ್ಯಾರ್ಥಿಗಳನ್ನು ಹೊಂದಿರಬೇಕು ಎಂಬ ಷರತ್ತನ್ನು ತೆಗೆಯುವ ಕರ್ನಾಟಕ ಶಿಕ್ಷಣ ಸಂಸ್ಥೆಗಳು(ಅಲ್ಪಸಂಖ್ಯಾತರ ಶಿಕ್ಷಣ ಸಂಸ್ಥೆಗಳಿಗೆ ಮಾನ್ಯತೆ ನೀಡಲು ನಿಬಂಧನೆ ಮತ್ತು ಷರತ್ತು ಕಾಲೇಜು ಶಿಕ್ಷಣ ತಿದ್ದುಪಡಿ ನಿಯಮಗಳು–2025, ಕರ್ನಾಟಕ ಶಿಕ್ಷಣ ಸಂಸ್ಥೆಗಳು ಅಲ್ಪಸಂಖ್ಯಾತರ ಶಿಕ್ಷಣ ಸಂಸ್ಥೆಗಳಿಗೆ ಮಾನ್ಯತೆ ನೀಡಲು ನಿಬಂಧನೆ ಮತ್ತು ಷರತ್ತುಗಳು ತಾಂತ್ರಿಕ ಶಿಕ್ಷಣ) ತಿದ್ದುಪಡಿ ನಿಯಮಗಳು–2025 ವಿಧೇಯಕಗಳಿಗೆ ದಿನಾಂಕ:07.08.2025ರ ಸಂಪುಟ ಸಭೆಯಲ್ಲಿ ಒಪ್ಪಿಗೆ ನೀಡಲಾಗಿದೆ.

ಕರ್ನಾಟಕ ನಾಗರಿಕ ಸೇವಾ(ಸಾಮಾನ್ಯ ನೇಮಕಾತಿ) (ತಿದ್ದುಪಡಿ) ನಿಯಮ–2025ಕ್ಕೆ ಅನುಮೋದನೆ ನೀಡಿದ್ದು, ಕುಟುಂಬ ಸದಸ್ಯರು ಎಂಬ ವ್ಯಾಖ್ಯಾನದಲ್ಲಿ ಸಹೋದರರು, ಸಹೋದರಿಯರು, ಮೊಮ್ಮಗ, ಅವಿವಾಹಿತ ಮೊಮ್ಮಗಳು, ಸೊಸೆ, ವಿಧವಾ ಮಗಳು ಮತ್ತು ವಿಧವಾ ಮೊಮ್ಮಗಳು ಎಂಬ ಸಹೋದರಿಯರು, ಮೊಮ್ಮಗ, ಅವಿವಾಹಿತ ಮೊಮ್ಮಗಳು ಎಂಬ ಪದಗಳ ನಂತರ ವಿವಾಹಿತ ಮಗಳೆಂಬ ಪದಗಳನ್ನು ಸೇರಿಸಲು ಸಚಿವ ಸಂಪುಟ ಅನುಮೋದನೆ ನೀಡಿದೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯದ ರಚನೆ, ಆಯುಕ್ತರ ನೇಮಕಾತಿ, ಅಧಿಕಾರ ಮತ್ತು ಕರ್ತವ್ಯಗಳಿಗೆ ಸಂಬಂಧಿಸಿದಂತೆ ಶಾಸನಬದ್ಧ ಅವಕಾಶವನ್ನು ಕಲ್ಪಿಸಲು ತೀರ್ಮಾನಿಸಲಾಗಿದೆ. ಅಲ್ಲದೆ, ರಚನೆಯಿಂದ ನಗರಾಭಿವೃದ್ಧಿ ಪ್ರಾಧಿಕಾರಗಳ ಹಾಗೂ ಮೈಸೂರು ಅಭಿವೃದ್ಧಿ ಪ್ರಾಧಿಕಾರದ ನಿಯಂತ್ರಣವನ್ನು ಆಯುಕ್ತಾಲಯದ ವ್ಯಾಪ್ತಿಗೆ ಒಳಪಡಿಸಲು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ, 1987ಕ್ಕೆ ಹಾಗೂ ಮೈಸೂರು ಅಭಿವೃದ್ಧಿ ಪ್ರಾಧಿಕಾರ ಕಾಯ್ದೆ 2024ಗಳಿಗೆ ತಿದ್ದುಪಡಿ ತರಲು ತೀರ್ಮಾನಿಸಲಾಗಿದೆ.

**ಆಧಾರ:**ಕನ್ನಡ ಪ್ರಭ, ದಿನಾಂಕ:08.08.2025

## 7. SEP emphasises importance of 'constitutional value Education

The much awaited State Education Policy (SEP) for Karnataka, the final report of which was submitted to the State government on 8th September 2025 has proposed that "Constitutional Value Education should be institutionalised as a compulsory subject".

Prof. Sukhadeo Thorat, Chairman of the SEP Commission, and other members, submitted the report to Chief Minister Siddaramaiah.

The report stated that "values enshrined in the Preamble, Fundamental Rights, Fundamental Duties and Directive Principles of State Policy must be embedded across the curriculum to nurture informed, responsible and constitutionally, aware citizens."

The commission has said that the government should ensure equitable and inclusive access to education, especially for low income groups and socially disadvantaged groups.

As part of this effort, the commission also recommended free education to girls in government, aided, and private unaided colleges, encouraging girls to prioritise education over domestic economic acovities and provide financial incentives to delay child marriage.

“Provide full financial support to all low income Muslim students, support to households with less parental education, incentives to increase enrolment of rural Muslim girls and incentives to delay marriage for girls' education,” it added.

The commission, which believes that the shortage of teachers is the main reason for the backwardness of quality education, has proposed for action to be taken to fill all the vacant posts of teachers. “Contract and guest teacher appointments should be discontinued. All vacant teaching positions must be filled with qualified, regular staff”.

Further, the commission recommended that the coverage of the Right to Education (RTE) Act should be extended in a phased manner to include all children from ages 4 to 18.

The SEP commission for cused on the quality of education in government schools and said that it must be aligned with the standards of Kendriya Vidyalayas. Reilance on guest teachers should be ended by ensuring regular and timely recruitment of qualified staff it said.

A Comprehensive Curriculum for School Education(CCSE) should be developed to guide learning across all stage, with a strong emphasis on foundational learning up to class 5.

The focus should be on values, sustainability, and holistic development. “The reliance on NCERT text books should be ended, and subject content should be localized,” it stated.

SEP Commission, batting for the regulation of private schools and fee regulation said, privatization of school education should be actively discouraged.

"Strict enforcement of fee regulations and obligations related to admissions under the Economically Backward Sections (EBS) quota is essential. A dedicated regulatory body for private schools must be established," it stated.

To improve the quality of education, SEP recommends that the State must raise and allocate 3% of its Gross State Domestic Product (GSDP) specifically for school education, while also increasing the education sector's share to 30% of the total annual State Budget expenditure. "To ensure sustained improvement in educational outcomes, there should be steady real growth in perstudent spending, ideally between 5-10% annually," the commission said.

As per its poll promise, the Congress had constituted the SEP Commission to formulate a separate education policy for the State instead of the National Education Policy(NEP-2020) and issued an order on October 11, 2023.

**Courtesy:**The Hindu, dated:09.08.2025

## 8. ದ್ವಿಭಾಷಾ ನೀತಿಗೆ ಶಿಫಾರಸು

ಶಾಲಾ ಶಿಕ್ಷಣದಲ್ಲಿ ದ್ವಿಭಾಷಾ ನೀತಿಯನ್ನು ಕಡ್ಡಾಯವಾಗಿ ಅನುಷ್ಠಾನಗೊಳಿಸುವಂತೆ ರಾಜ್ಯ ಶಿಕ್ಷಣ ನೀತಿ ಆಯೋಗ ಶಿಫಾರಸು ಮಾಡಿದೆ. ತೃತೀಯ ಭಾಷೆಯಾಗಿ ಹಿಂದಿಯನ್ನು ಕಲಿಸುವ ಬಗ್ಗೆ ಆಯೋಗ ಪ್ರಸ್ತಾಪಿಸಿಲ್ಲ.

ರಾಷ್ಟ್ರೀಯ ಹೊಸ ಶಿಕ್ಷಣ ನೀತಿ–2020ರ(ಎನ್‌ಇಪಿ) ಬದಲಿಗೆ ರಾಜ್ಯಕ್ಕೆ ಪ್ರತ್ಯೇಕವಾದ ಶಿಕ್ಷಣ ನೀತಿ ರೂಪಿಸಲು ಪ್ರೊ.ಸುಖದೇವ್ ಥೋರಟ್ ಅಧ್ಯಕ್ಷತೆಯಲ್ಲಿ ರಾಜ್ಯ ಶಿಕ್ಷಣ ನೀತಿ ಆಯೋಗವನ್ನು ಸರ್ಕಾರ ರಚಿಸಿತ್ತು. 2,197 ಪುಟಗಳಿರುವ ಮೂರು ಸಂಪುಟ ಒಳಗೊಂಡ ತನ್ನ ಅಂತಿಮ ವರದಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಆಯೋಗವು ದಿನಾಂಕ:08.08.2025ರಂದು ಸಲ್ಲಿಸಿತ್ತು. ಮೂರು ಸಂಪುಟಗಳನ್ನು ಶಾಲಾ ಶಿಕ್ಷಣ, ಉನ್ನತ ಶಿಕ್ಷಣ ಹಾಗೂ ವೃತ್ತಿ ಶಿಕ್ಷಣ ಎಂದು ವರ್ಗೀಕರಿಸಲಾಗಿದೆ.

ಕನ್ನಡ ಸೇರಿದಂತೆ ಇತರೆ ಮಾತೃ ಭಾಷೆಗಳನ್ನು ಪ್ರಥಮ ಭಾಷೆಯಾಗಿ, ಇಂಗ್ಲಿಷ್ ಅನ್ನು ದ್ವಿತೀಯ ಭಾಷೆಯಾಗಿ ನಿಗದಿ ಮಾಡಬೇಕು. ಈ ನಿಯಮವನ್ನು ಸರ್ಕಾರಿ, ಅನುದಾನಿತ ಹಾಗೂ ಎಲ್ಲ ಖಾಸಗಿ ಶಾಲೆಗಳಲ್ಲೂ ಅನುಷ್ಠಾನಗೊಳಿಸಬೇಕು. ಐದನೇ ತರಗತಿಯವರೆಗೆ ಮಾತೃ ಭಾಷೆಯಲ್ಲೇ ಬೋಧನೆಗೆ ಅವಕಾಶ ನೀಡಬೇಕು ಎಂದು ಆಯೋಗ ಶಿಫಾರಸ್ಸು ಮಾಡಿದೆ.

**ಆಧಾರ:** ಪ್ರಜಾವಾಣಿ, ದಿನಾಂಕ:11.08.2025

## 9. ಸಂಪುಟದಿಂದ ರಾಜಣ್ಣ ಡಿಸ್‌ಮಿಸ್

ತಮ್ಮ ಸಡಿಲ ಹೇಳಿಕೆಗಳಿಂದ ವಿವಾದಗಳ ಸರಮಾಲೆ ಸೃಷ್ಟಿಸಿದ್ದ ಸಹಕಾರ ಸಚಿವ ಕೆ. ಎನ್. ರಾಜಣ್ಣ ಅವರನ್ನು ಕ್ಷಿಪ್ರ ರಾಜಕೀಯ ಬೆಳವಣಿಗೆಯೊಂದರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೈಕಮಾಂಡ್ ಆಣತಿಯ ಮೇರೆಗೆ ಸಂಪುಟದಿಂದ ವಜಾ ಮಾಡಿದ್ದಾರೆ. ಹಾಲಿ ಸಚಿವರು ರಾಜೀನಾಮೆ ನೀಡುವುದು ಆಗಾಗ್ಗೆ ನಡೆಯುವ ಬೆಳವಣಿಗೆಯಾದರೂ ಸಂಪುಟದಿಂದ ಮಂತ್ರಿಯನ್ನೇ ವಜಾಗೊಳಿಸುವುದು ಅತ್ಯಂತ ಅಪರೂಪ, ಇತ್ತೀಚಿನ ದಶಕಗಳಲ್ಲಿ ಇದನ್ನು ರಾಜ್ಯ ಕಂಡಿಲ್ಲ. ಮತಗಳ್ಳತನ ಕುರಿತು ರಾಜಣ್ಣ ನೀಡಿದ್ದ ಹೇಳಿಕೆಯು ಕಾಂಗ್ರೆಸ್ ಪಕ್ಷಕ್ಕೆ ಮಾತ್ರವಲ್ಲದೇ ದೇಶಾದ್ಯಂತ ಈ ಬಗ್ಗೆ ಹೋರಾಟಕ್ಕೆ ಮುಂದಾಗಿರುವ 'ಇಂಡಿಯಾ' ಕೂಟಕ್ಕೂ ಮುಜುಗರ ತಂದಿತ್ತು.

ಇಂಡಿಯಾ ಕೂಟದ ಸದಸ್ಯರೇ ಈ ಬಗ್ಗೆ ಹೈಕಮಾಂಡ್ ಬಳಿ ವಿಚಾರ ಪ್ರಸ್ತಾಪಿಸಿದ್ದರ ಪರಿಣಾಮವಾಗಿ ರಾಜೀನಾಮೆ ಪಡೆಯುವ ಬದಲಾಗಿ ಸಂಪುಟದಿಂದ ವಜಾಗೊಳಿಸುವ ಕಠೋರ ನಿರ್ಧಾರವನ್ನು ಕಾರ್ಯಗತಗೊಳಿಸಲಾಗಿದೆ.

ರಾಜಣ್ಣ ವಿರುದ್ಧದ ಕಠಿಣ ನಿರ್ಧಾರಕ್ಕೆ ಬದಲಾಗಿ ಅಧಿವೇಶನದ ಮುಗಿದ ಕೂಡಲೇ ರಾಜೀನಾಮೆ ಪಡೆಯುವ ಆಶ್ವಾಸನೆಯನ್ನು ಖುದ್ದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೈಕಮಾಂಡ್‌ಗೆ ನೀಡಿ, ಮನವೊಲಿಸಲು ಯತ್ನಿಸಿದ್ದರೂ ಅದು ಸಫಲವಾಗಿಲ್ಲ. ಆರಂಭದಲ್ಲಿ ದಿನಾಂಕ:11.08.2025ರಂದು ರಾಜೀನಾಮೆ ಪಡೆಯುವಂತೆ ಸೂಚಿಸಿದ್ದ ಹೈಕಮಾಂಡ್, ಮಧ್ಯಾಹ್ನದ ವೇಳೆಗೆ ರಾಜೀನಾಮೆ ಬೇಡ ವಜಾಗೊಳಿಸಿ ಎಂಬ ಸ್ಪಷ್ಟ ಸೂಚನೆಯನ್ನು ನೀಡಿತು ಎನ್ನಲಾಗಿದೆ.

**ಆಧಾರ:** ಕನ್ನಡಪ್ರಭ, ದಿನಾಂಕ:12.08.2025

## 10. ಬೆಂಗಳೂರು ನಗರ ವಿವಿಗೆ ಮನಮೋಹನಸಿಂಗ್ ಹೆಸರು

ಬೆಂಗಳೂರು ನಗರ ವಿಶ್ವವಿದ್ಯಾಲಯಕ್ಕೆ ಮಾಜಿ ಪ್ರಧಾನಿ ಡಾ. ಮನಮೋಹನ್ ಸಿಂಗ್ ಹೆಸರು ನಾಮಕರಣ ಮಾಡುವ ಉದ್ದೇಶದ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ (ತಿದ್ದುಪಡಿ) ವಿಧೇಯಕ 2025ಕ್ಕೆ ಅನುಮೋದನೆ ನೀಡಲಾಯಿತು.

ತಿದ್ದುಪಡಿ ವಿಧೇಯಕ ಮಂಡಿಸಿದ ಉನ್ನತ ಶಿಕ್ಷಣ ಡಾ. ಎಂ.ಸಿ.ಸುಧಾಕರ್, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯ ಬಜೆಟ್‌ನಲ್ಲಿ ಬೆಂಗಳೂರು ನಗರ ವಿಶ್ವವಿದ್ಯಾಲಯಕ್ಕೆ ಡಾ.ಮನಮೋಹನ್ ಸಿಂಗ್ ಹೆಸರಿಡುವ ಕುರಿತು ಘೋಷಣೆ ಮಾಡಿದ್ದರು. ಅದನ್ನು ಅನುಷ್ಠಾನಗೊಳಿಸುವ ಉದ್ದೇಶದೊಂದಿಗೆ ವಿಧೇಯಕಕ್ಕೆ ತಿದ್ದುಪಡಿ ತರಲಾಗಿದೆ ಎಂದು ಹೇಳಿದರು. ಅದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ವಿರೋಧ ಪಕ್ಷದ ನಾಯಕ ಆರ್.ಅಶೋಕ್, ಡಾ.ಮನಮೋಹನ್ ಸಿಂಗ್ ಅವರಂತಹ ಮಹಾನ್ ವ್ಯಕ್ತಿಯ ಹೆಸರನ್ನು ಈಗಾಗಲೇ ಸ್ಥಾಪಿಸಲಾಗಿರುವ ವಿಶ್ವವಿದ್ಯಾಲಯಕ್ಕೆ ಇರುವ ಬದಲು ಅವರ ಹೆಸರಿನಲ್ಲಿಯೇ ಹೊಸದಾಗಿ ವಿಶ್ವವಿದ್ಯಾಲಯ ಸ್ಥಾಪಿಸಿ ಎಂದು ಆಗ್ರಹಿಸಿದರು. ಅದಕ್ಕೆ ಡಾ. ಸುಧಾಕರ್, ಈಗಾಗಲೇ ರಾಜ್ಯದಲ್ಲಿ 32 ವಿಶ್ವವಿದ್ಯಾಲಯಗಳಿವೆ. ಅವುಗಳ ಪರಿಸ್ಥಿತಿ ಕುರಿತಂತೆ ಆಗಾಗ ಚರ್ಚೆಗಳು ನಡೆಯುತ್ತಲೇ ಇರುತ್ತವೆ. ಅದರ ಜತೆಗೆ ಹೊಸದಾಗಿ ವಿಶ್ವವಿದ್ಯಾಲಯ ಸ್ಥಾಪಿಸುವುದು ಹೊರೆಯಾಗಲಿದೆ. ಹೀಗಾಗಿ ಇರುವ ವಿಶ್ವವಿದ್ಯಾಲಯಕ್ಕೆ ಅವರ ಹೆಸರು ನಾಮಕರಣ ಮಾಡಲಾಗುತ್ತಿದೆ. ಜತೆಗೆ ಮುಂದಿನ ದಿನಗಳಲ್ಲಿ ಅವರಲ್ಲಿ ಹೊಸ ಯೋಜನೆ ಅನುಷ್ಠಾನಗೊಳಿಸಲಾಗುವುದು ಎಂದರು.

**ಆಧಾರ:** ಕನ್ನಡ ಪ್ರಭ, ದಿನಾಂಕ:20.08.2025

## 11. ಸಮಾನತೆಗಾಗಿ ಯತ್ನಿಸಿದ ಅರಸು

ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರು ತಮ್ಮ ಅಧಿಕಾರಾವಧಿಯಲ್ಲಿ ಸಾಮಾಜಿಕ ನ್ಯಾಯ ಹಾಗೂ ಸಮಾನತೆಗಾಗಿ ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ದಿನಾಂಕ:20.08.2025ರಂದು ತಿಳಿಸಿದರು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ವಿಧಾನಸೌಧದ ಬ್ಯಾಂಕ್ವೆಟ್‌ಹಾಲ್‌ನಲ್ಲಿ ಆಯೋಜಿಸಲಾಗಿದ್ದ ಡಿ.ದೇವರಾಜ ಅರಸು 110ನೇ ಜನ್ಮದಿನಾಚರಣೆ ಹಾಗೂ ದೇವರಾಜ ಅರಸು ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಅವರು, ಮೈಸೂರು ರಾಜ್ಯವನ್ನು 'ಕರ್ನಾಟಕ' ಎಂದು ನಾಮಕಾರಣ ಮಾಡುವಲ್ಲಿ ಪ್ರಮುಖ ಪಾತ್ರವಹಿಸಿ, ಸಮಾಜದ ಎಲ್ಲ ವರ್ಗಗಳಿಗೂ ನ್ಯಾಯ ಒದಗಿಸಲು ಅರಸು ಶ್ರಮಿಸಿದ್ದರು ಎಂದರು.

ದೇವರಾಜ ಅರಸು ಅವರು 8 ವರ್ಷ ಮುಖ್ಯಮಂತ್ರಿ ಆಗಿದ್ದರು. ಅವರ ನಂತರ ಹೆಚ್ಚು ವರ್ಷ ಮುಖ್ಯಮಂತ್ರಿಯಾಗಿರುವುದು ನಾನೇ. ಈ ವಿಚಾರದಲ್ಲಿ ಸಾಮ್ಯತೆ ಇದೆ. ಎಲ್ಲಾ ಹಿಂದುಳಿದ ಸಮುದಾಯಗಳಿಗೂ ರಾಜಕೀಯ ಅವಕಾಶಗಳು, ಸಾಮಾಜಿಕ, ಆರ್ಥಿಕ ಸ್ವಾತಂತ್ರ್ಯ ಸಿಗಬೇಕು ಎನ್ನುವ ಅಚಲ ನಿಲುವು ಹೊಂದಿದ್ದರು. ಅದಕ್ಕಾಗಿ ಪ್ರಾಮಾಣಿಕ ಪ್ರಯತ್ನ ಮಾಡಿದರು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

**ಆಧಾರ:** ಕನ್ನಡ ಪ್ರಭ, ದಿನಾಂಕ:21.08.2025

## 12. ಕೇಂದ್ರದ ಅನುದಾನ, ತೆರಿಗೆ ಪಾಲು ಬಗ್ಗೆ ಶೀಘ್ರ 'ಶ್ವೇತ ಪತ್ರ' ಸಿಎಂ

ಕೇಂದ್ರ ಸರ್ಕಾರವು ಕೇಂದ್ರ ಪರಸ್ಕೃತ ಯೋಜನೆಗಳಿಗೆ ರಾಜ್ಯಕ್ಕೆ ನೀಡುತ್ತಿರುವ ಅನುದಾನ ಹಾಗೂ ತೆರಿಗೆ ಪಾಲು ಕುರಿತು ಕೆಲವೇ ದಿನಗಳಲ್ಲಿ ನಮ್ಮ ಸರ್ಕಾರ 'ಶ್ವೇತಪತ್ರ' ಹೊರಡಿಸಲಿದೆ ಎಂದು ಸಿಎಂ ಸಿದ್ದರಾಮಯ್ಯ ಸದನಕ್ಕೆ ತಿಳಿಸಿದರು. ನಿಯಮ 69ರ ಅಡಿ ಕಾಂಗ್ರೆಸ್‌ನ ಸದಸ್ಯರಾದ ಕೆ.ಎಂ ಶಿವಲಿಂಗೇಗೌಡ, ಎನ್.ಎಚ್.ಕೋನರೆಡ್ಡಿ, ಶರತ್ ಬಚ್ಚೇಗೌಡ ಈ ವಿಷಯ ಪ್ರಸ್ತಾಪಿಸಿ ಮಾತನಾಡಿದ್ದರು. ದಿನಾಂಕ:22.08.2025ರಂದು ಸದನದಲ್ಲಿ ಉತ್ತರಿಸಿದ ಸಿಎಂ, ಶ್ವೇತಪತ್ರ ಹೊರಡಿಸಲು ಸರ್ಕಾರ ಸಿದ್ಧವಿದೆ. ಕೆಲವೇ ದಿನಗಳಲ್ಲಿ ಹೊರಡಿಸಲಾಗುವುದು ಎಂದರು. ಕೆಲ ವರ್ಷಗಳ ಹಿಂದೆ ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಕೇಂದ್ರ ಶೇ.75 ಮತ್ತು ರಾಜ್ಯ ಶೇ.25ರಷ್ಟು ಅನುಪಾತದಲ್ಲಿ ಅನುದಾನ ನೀಡಲಾಗುತ್ತಿತ್ತು. ಮೋದಿ ಅಧಿಕಾರಕ್ಕೆ ಬಂದ ಬಳಿಕ ಆ ಪ್ರಮಾಣವನ್ನು ಶೇ.40ಕ್ಕೆ ಇಳಿಸಲಾಗಿದೆ. ಸಂಬಂಧ ಶ್ವೇತಪತ್ರ ಹೊರಡಿಸುವಂತೆ ಸದಸ್ಯರು ಆಗ್ರಹಿಸಿದ್ದಾರೆ. ಅದರಂತೆ ಶ್ವೇತ ಪತ್ರ ಹೊರಡಿಸಲು ಸಿದ್ಧವಿದೆ ಎಂದು ಸಿದ್ದರಾಮಯ್ಯ ಹೇಳಿದರು.

**ಆಧಾರ:** ಕನ್ನಡ ಪ್ರಭ, ದಿನಾಂಕ:23.08.2025

## 13. Property registration fee doubled in State from 1% to 2%

Property registrations in Karnataka are all set to get dearer from this weekend. The State government on dated:29.08.2025 doubled the registration fee for all properties from 1% to 2%.

This move comes in the context of the Department of Stamps and Registrations falling severely short of revenue targets both in 2024-25 and the first quarter of 2025-26.

The State used to levy a stamp duty of 5% of the guidance value of a property, 1% registration fee, 0.5% cess and 0.1% surcharge, adding up to 6.6%. With the registration fee now doubling to 2%, the total fee payable for any property transaction is 7.6% from August 31, 2025.

Mullai Muhilan M.P., Inspector General of Registration and Commissioner of Stamps, Karnataka, told The Hindu that despite this hike, the total fee payable for any property transaction in Karnataka is among the lowest among all neighbouring States in South India. For instance, in Tamil Nadu it is 11%, he said.

The government order issued on dated:29th May, 2025 also doubled the registration fee for Joint Development Agreements(JDA) and General Power of Attorney (GPA) for JDAs from 1% to 2%. The impact of this is expected to be big, as these are usually large parcels of land and will impact the real estate sector dear.

The realty sector has been slow for multiple quarters now. As against an initial revenue target of Rs.26,000 crore, the department collected only 22,500 crore in 2024-25 and in the first quarter that ended on June 30 the Department has fallen back by 35% against the proportional target for the year, set at an ambitious Rs.28,000 crore.

Builders blame this on the e-Khata mandate for property transactions which they term a "bottleneck", among other factors. They argue that doubling registration fee is not the answer to missing revenue targets.

While there was a proposal to increase the stamp duty by 1%, following a performance review meeting of the Department of Stamps and Registrations chaired by Chief Minister Siddaramaiah in June earlier this year, the decision was taken to hike registration fee by 1%. Karnataka continues to be one of the few States to impose a lower stamp duty of less than 6%.

Asked what is the additional revenue expected through this hike, Mr. Muhilan said they were working towards achieving the revenue target set, but did not put a number to it.

**Courtesy:**The Hindu, dated:30.08.2025

## 14. ಗ್ರೇಟರ್ ಬೆಂಗಳೂರಿಗೆ 5 ಪಾಲಿಕೆ

ರಾಜಧಾನಿಯ ಆಡಳಿತ ಯಂತ್ರವನ್ನು ನಿಭಾಯಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ(ಬಿಬಿಎಂಪಿ) ವ್ಯಾಪ್ತಿಯಲ್ಲಿ ಅಸ್ತಿತ್ವಕ್ಕೆ ಬಂದಿರುವ 'ಗ್ರೇಟರ್ ಬೆಂಗಳೂರು ಪ್ರಾಧಿಕಾರ'ದ (ಜಿಬಿಎ) ಅಡಿಯಲ್ಲಿ ಐದು ನಗರ ಪಾಲಿಕೆಗಳು ರಚನೆಯಾಗಿವೆ.

ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ–2024'(ಜಿಬಿಜಿಎ) ಅಡಿಯಲ್ಲಿ ಬಿಬಿಎಂಪಿ ವ್ಯಾಪ್ತಿಯನ್ನು 'ಗ್ರೇಟರ್ ಬೆಂಗಳೂರು ಪ್ರದೇಶ'(ಜಿಬಿಎ) ಎಂದು ಗುರುತಿಸಿ 2025ರ ಮೇ 15ರಂದು ಸರ್ಕಾರ ಅಧಿಸೂಚಿಸಿತ್ತು. 'ಗ್ರೇಟರ್ ಬೆಂಗಳೂರು ಪ್ರದೇಶ'ದಲ್ಲೇ ಐದು ನಗರ ಪಾಲಿಕೆಗಳನ್ನು ರಚಿಸಿ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ. ಇದರಿಂದ ಬಿಬಿಎಂಪಿ ತನ್ನ ಅಸ್ತಿತ್ವ ಕಳೆದುಕೊಂಡಿದೆ.

ಜಿಬಿಜಿಎ ಕಾಯ್ದೆಯ ಪ್ರಕರಣ 4ರ ಉಪ ಪ್ರಕರಣ(1) ಹಾಗೂ ಪ್ರಕರಣ 7ರ ಉಪ ಪ್ರಕರಣದಡಿ(1) ಅಧಿಕಾರ ಚಲಾಯಿಸಿರುವ ಸರ್ಕಾರ, ಜನಸಂಖ್ಯೆ, ವಿಸ್ತೀರ್ಣ, ಜನಸಂಖ್ಯಾ ಸಾಂದ್ರತೆ, ಬರುವ ಆದಾಯ, ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗ ಪ್ರಮಾಣ, ಆರ್ಥಿಕ ಪ್ರಾಮುಖ್ಯವನ್ನು ಪರಿಗಣಿಸಿ ಐದು ನಗರ ಪಾಲಿಕೆಗಳನ್ನು ರಚಿಸಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ 225 ವಾರ್ಡ್‌ಗಳನ್ನು ಮರುರಚಿಸಿ 2023ರ ಸೆಪ್ಟೆಂಬರ್ 25ರಂದು ಸರ್ಕಾರ ಅಧಿಸೂಚನೆ ಹೊರಡಿಸಿತ್ತು. ಹೊಸ ಐದು ನಗರ ಪಾಲಿಕೆಗಳನ್ನು ಬಿಬಿಎಂಪಿ ಚುನಾವಣೆ ನಡೆದಿದ್ದ 198 ವಾರ್ಡ್‌ಗಳಿಗೆ ಅನುಗುಣವಾಗಿ ವಿಂಗಡಿಸಲಾಗಿದೆ. ಜೊತೆಗೆ 225 ವಾರ್ಡ್‌ಗಳ ವಿಂಗಡಣೆ ಸಮಯದಲ್ಲಿ ಸೇರಿಸಲಾದ ಪ್ರದೇಶಗಳನ್ನು ಸೇರಿಸಿಕೊಳ್ಳಲಾಗಿದೆ.

712 ಚದರ ಕಿ.ಮೀ. ವ್ಯಾಪ್ತಿಯಲ್ಲಿ ಐದು ನಗರ ಪಾಲಿಕೆಗಳನ್ನು ರಚಿಸಿ ಕರಡು ಅಧಿಸೂಚನೆ ಹೊರಡಿಸಲಾಗಿತ್ತು. ಆನೇಕಲ್ ವಿಧಾನಸಭೆ ಕ್ಷೇತ್ರದ (ಕೂಡ್ಲು) ಸಿಂಗಸಂದ್ರ ವಾರ್ಡ್ ಸೇರಿದಂತೆ 225 ವಾರ್ಡ್‌ಗಳನ್ನು ಪುನರ್ ವಿಂಗಡಿಸಿದಾಗ ಸೇರಿಕೊಂಡ ಪ್ರದೇಶಗಳು ಸೇರಿದಂತೆ 9 ಚದರ ಕಿ.ಮೀ. ವೃದ್ಧಿಸಿ 720.9 ಚದರ ಕಿ.ಮೀ. ವ್ಯಾಪ್ತಿಯಲ್ಲಿ ಐದು ನಗರ ಪಾಲಿಕೆಗಳ ಗಡಿಗಳನ್ನು ಗುರುತಿಸಿ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ.

**ಆಧಾರ:** ಪ್ರಜಾವಾಣಿ, ದಿನಾಂಕ:03.09.2025

## 15. ಪೊಲೀಸರ ಆರೋಗ್ಯ ತಪಾಸಣೆಗೆ 'ಖುಷಿ' ಯೋಜನೆ

ಹ್ಯಾಪಿಯೆಸ್ಟ್ ಹೆಲ್ತ್ ಸಂಸ್ಥೆ ಹಾಗೂ ನಗರ ಪೊಲೀಸ್ ಇಲಾಖೆ ಸಹಯೋಗದಲ್ಲಿ ಪೊಲೀಸರ ಆರೋಗ್ಯ ತಪಾಸಣೆಗೆ 'ಖುಷಿ' ಯೋಜನೆ ಜಾರಿ ಮಾಡಲಾಗಿದೆ.

ನಗರದಲ್ಲಿ ದಿನಾಂಕ:11.09.2025ರಂದು ನಡೆದ ಕಾರ್ಯಕ್ರಮದಲ್ಲಿ ನಗರ ಪೊಲೀಸ್ ಕಮಿಷನರ್ ಸೀಮಾಂತಕುಮಾರ್ ಸಿಂಗ್ ಅವರು ಈ ಯೋಜನೆಗೆ ಚಾಲನೆ ನೀಡಿದರು.

ಪೊಲೀಸರ ಆರೋಗ್ಯ ನಿರ್ವಹಣೆಗೆ ರೂಪಿಸಲಾದ ಯೋಜನೆ ಇದಾಗಿದೆ. ಮಧುಮೇಹ, ಅಧಿಕ ರಕ್ತದ ಒತ್ತಡ, ಬೊಜ್ಜು, ಜೀರ್ಣಕ್ರಿಯೆಗೆ ಸಂಬಂಧಿಸಿದ ಸಮಸ್ಯೆಗಳಿದ್ದರೆ ತಪಾಸಣೆ ಮಾಡಿಸಿಕೊಳ್ಳಬಹುದು. ಪೊಲೀಸ್ ವೃತ್ತಿಯಲ್ಲಿ ದೀರ್ಘಾವಧಿ ಕೆಲಸ, ಅತಿಯಾದ ಒತ್ತಡದ ವಾತಾವರಣ, ಅನಿಯಮಿತ ದಿನಚರಿಗಳಿರುತ್ತವೆ. ಪೊಲೀಸರ ಆರೋಗ್ಯದ ಕಾಳಜಿ ಹಾಗೂ ನಿರ್ವಹಣೆ

ಸುಲಭವಾಗಿಲ್ಲ. ವೈಯಕ್ತಿಕ ಯೋಗಕ್ಷೇಮದ ಜೊತೆಗೆ ವೃತ್ತಿಪರ ದಕ್ಷತೆ ಮತ್ತು ಜೀವನದ ಗುಣಮಟ್ಟದ ಮೇಲೂ ಪರಿಣಾಮ ಬೀರುತ್ತದೆ. ಜೀವನಶೈಲಿಯ ಸಮಸ್ಯೆಗಳು ಮತ್ತು ಪೊಲೀಸರು ಎದುರಿಸುತ್ತಿರುವ ಅನೇಕ ಆರೋಗ್ಯ ಸವಾಲುಗಳನ್ನು ಗಮನದಲ್ಲಿ ಇರಿಸಿಕೊಂಡು 'ಖುಷಿ ಯೋಜನೆ' ಜಾರಿಗೆ ತರಲಾಗಿದೆ ಎಂದು ಹ್ಯಾಪಿಯೆಸ್ಟ್ ಹೆಲ್ತ್ ಯೋಜನೆ ಅಧಿಕಾರಿಗಳು ತಿಳಿಸಿದರು.

ಹ್ಯಾಪಿಯೆಸ್ಟ್ ಹೆಲ್ತ್‌ನ ಮುಖ್ಯ ಸಂಪಾದಕ ರವಿ ಜೋಶಿ ಮಾತನಾಡಿ, 'ಸಮಾಜದ ಬೆನ್ನೆಲುಬು ಆಗಿರುವ ಪೊಲೀಸ್ ಸಿಬ್ಬಂದಿ ಸಮತೋಲನ ಜೀವನ ನಡೆಸಲು ಸಹಾಯ ಮಾಡುವುದೇ ಈ ಯೋಜನೆಯ ಉದ್ದೇಶ' ಎಂದು ಹೇಳಿದರು. 'ಮಧುಮೇಹ, ಅಧಿಕ ರಕ್ತದ ಒತ್ತಡ ಹಾಗೂ ಬೊಜ್ಜಿನಂತಹ ಸಮಸ್ಯೆಗಳನ್ನು ಪರೀಕ್ಷಿಸದೇ ಬಿಟ್ಟರೆ ಅವುಗಳು ಸದ್ದಿಲ್ಲದೇ ಜೀವನದ ಗುಣಮಟ್ಟ ಹಾಳು ಮಾಡುತ್ತವೆ' ಎಂದು ಹ್ಯಾಪಿಯೆಸ್ಟ್ ಹೆಲ್ತ್‌ನ ಸಿಇಒ ಶ್ರೀನಿವಾಸ್ ನಾರಾಯಣ್ ಹೇಳಿದರು.

**ಆಧಾರ:** ಪ್ರಜಾವಾಣಿ, ದಿನಾಂಕ:11.09.2025

## 16. ಕಲ್ಯಾಣ ಕರ್ನಾಟಕಕ್ಕೆ ಪ್ರತ್ಯೇಕ ಸಚಿವಾಲಯ

ಕಲ್ಯಾಣ ಕರ್ನಾಟಕದ ಅಭಿವೃದ್ಧಿಗಾಗಿ ಪ್ರತ್ಯೇಕ ಸಚಿವಾಲಯ ಸ್ಥಾಪಿಸಬೇಕು ಎಂಬ ಆ ಭಾಗದ ಜನರ ಬೇಡಿಕೆಗೆ ಪೂರಕವಾಗಿ ಪ್ರತ್ಯೇಕ ಸಚಿವಾಲಯ ಸ್ಥಾಪಿಸಲು ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದು ಕಾನೂನು ಸಚಿವ ಎಚ್.ಕೆ.ಪಾಟೀಲ ತಿಳಿಸಿದರು.

**ಆಧಾರ:** ಪ್ರಜಾವಾಣಿ, ದಿನಾಂಕ:17.09.2025

## 17. ಮುನಿರತ್ನ ವಿರುದ್ಧದ ಪ್ರಕರಣ ರದ್ದು

ಸಾಮೂಹಿಕ ಅತ್ಯಾಚಾರ ಪ್ರಕರಣದಲ್ಲಿ ಬಿಜೆಪಿ ಶಾಸಕ ಮುನಿರತ್ನ ಸೇರಿ ನಾಲ್ವರ ವಿರುದ್ಧ ವಿಶೇಷ ತನಿಖಾ ದಳ (ಎಸ್ಐಟಿ) ವಿಚಾರಣಾಧೀನ ನ್ಯಾಯಾಲಯಕ್ಕೆ ಬಿ ರಿಪೋರ್ಟ್ ಸಲ್ಲಿಸಿರುವುದನ್ನು ಪರಿಗಣಿಸಿ ಹೈಕೋರ್ಟ್ ದಿನಾಂಕ:17.09.2025ರಂದು ಅರ್ಜಿಗಳನ್ನು ವಜಾಗೊಳಿಸಿತು.

ಬೆಂಗಳೂರಿನ ಯಶವಂತಪುರದ ಆರ್‌ಎಂಸಿ ಯಾರ್ಡ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣ ರದ್ದತಿ ಕೋರಿ ಮುನಿರತ್ನ, ವಸಂತ ಕುಮಾರ್, ಚನ್ನಕೇಶವ್ ಮತ್ತು ಕಮಲ್ ಸಲ್ಲಿಸಿದ್ದ ಪ್ರತ್ಯೇಕ ಅರ್ಜಿಗಳ ವಿಚಾರಣೆಯನ್ನು ನ್ಯಾಯಮೂರ್ತಿ ಎಂ.ಐ. ಅರುಣ್ ಅವರ ಏಕಸದಸ್ಯ ಪೀಠ ನಡೆಸಿತು. ಎಸ್ಐಟಿಯು ವಿಚಾರಣಾ ನ್ಯಾಯಾಲಯಕ್ಕೆ ಬಿ ರಿಪೋರ್ಟ್ ಸಲ್ಲಿಸಿದ್ದು, ಅದನ್ನು ಒಪ್ಪಿಕೊಳ್ಳಲಾಗಿದೆ. ಹೀಗಾಗಿ, ಅರ್ಜಿಯು ಅಸ್ತಿತ್ವ ಕಳೆದುಕೊಂಡಿದ್ದು, ಅವುಗಳನ್ನು ವಜಾ ಮಾಡಲಾಗಿದೆ ಎಂದು ನ್ಯಾಯಾಲಯ ಆದೇಶಿಸಿತು.

ಸಿಐಡಿ–ಎಸ್ಐಟಿ ಪರವಾಗಿ ಹಾಜರಾಗಿದ್ದ ವಿಶೇಷ ಸರ್ಕಾರಿ ಅಭಿಯೋಜಕ ಪ್ರದೀಪ್ ಅವರು ಎಸ್ಐಟಿಯು ವಿಚಾರಣಾ ನ್ಯಾಯಾಲಯಕ್ಕೆ ಪ್ರಕರಣದ ಸಂಬಂಧ ಬಿ ರಿಪೋರ್ಟ್ ಸಲ್ಲಿಸಿದ್ದು, ಅದನ್ನು ನ್ಯಾಯಾಲಯ ಒಪ್ಪಿಕೊಂಡಿದೆ ಎಂದರು. ಆದರೆ, ಅರ್ಜಿದಾರರ ಪರ ವಕೀಲರು ಬಿ ರಿಪೋರ್ಟ್ ಅನ್ನು ವಿಚಾರಣಾ ನ್ಯಾಯಾಲಯ ಒಪ್ಪಿಕೊಂಡಿರುವ ಬಗ್ಗೆ ಮಾಹಿತಿ ಇಲ್ಲ. ವಿಶೇಷ ಸರ್ಕಾರಿ ಅಭಿಯೋಜಕರ ಹೇಳಿಕೆಯ ಅನ್ವಯ ಅರ್ಜಿ ವಜಾಗೊಳಿಸಬಹುದು ಎಂದರು. ಇದನ್ನು ಪುರಸ್ಕರಿಸಿದ ನ್ಯಾಯಾಲಯವು ಅರ್ಜಿಗಳನ್ನು ವಜಾಗೊಳಿಸಿತು.

**ಆಧಾರ:** ವಿಶ್ವವಾಣಿ, ದಿನಾಂಕ:18.09.2025

# ಭಾಗ–6

# ನ್ಯಾಯಾಲಯ ಸುದ್ದಿಗಳು

## 1. ಬಿಹಾರದಲ್ಲಿ ಮತದಾರರ ವಿಶೇಷ ಪಟ್ಟಿ ಪರಿಷ್ಕರಣೆ ಸಂವಿಧಾನಬದ್ಧ: ಸುಪ್ರೀಂ

ವರ್ಷಾಂತ್ಯದಲ್ಲಿ ವಿಧಾನಸಭೆ ಚುನಾವಣೆ ಎದುರಿಸಲಿರುವ ಬಿಹಾರದಲ್ಲಿ ಚುನಾವಣಾ ಆಯೋಗವು ನಡೆಸಲುದ್ದೇಶಿಸಿರುವ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆಗೆ ಸುಪ್ರೀಂ ಕೋರ್ಟ್ ತಡೆ ನೀಡಲು ನಿರಾಕರಿಸಿದೆ. ಆಯೋಗದ ಕಾರ್ಯ ಸಂವಿಧಾನಬದ್ಧವಾಗಿದೆ ಎಂದಿರುವ ಕೋರ್ಟ್, ಈ ಕಾರ್ಯಕ್ಕೆ ಆಯ್ಕೆ ಮಾಡಿಕೊಂಡಿರುವ ಸಮಯದ ಕುರಿತು ಆಕ್ಷೇಪ ವ್ಯಕ್ತಪಡಿಸಿದೆ.

ಇದೇ ವೇಳೆ, ಮತದಾರರ ಪಟ್ಟಿ ಪರಿಷ್ಕರಣೆ ವೇಳೆ ಸಲ್ಲಿಸಬೇಕಿರುವ 11 ದಾಖಲೆಗಳ ಪಟ್ಟಿಗೆ ಆಧಾರ್ ಕಾರ್ಡ್, ಪಡಿತರ ಚೀಟಿ ಮತ್ತು ವೋಟರ್ ಐಡಿಗಳನ್ನು ಸೇರಿಸುವಂತೆಯೂ ಆಯೋಗಕ್ಕೆ ಸೂಚಿಸಿದೆ. ಬಿಹಾರದಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ಪ್ರಶ್ನಿಸಿ ಸಲ್ಲಿಕೆಯಾಗಿದ್ದ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾ. ಸುಧಾಂಶು ಧುಲಿಯಾ ಮತ್ತು ನ್ಯಾ. ಜೋಯ್‌ಮಲ್ಯಾ ಬಗಾಚಿ ಅವರಿದ್ದ ಪೀಠ ಈ ನಿರ್ದೇಶನ ನೀಡಿತು.

'ನಾವು ಆಯೋಗದ ಪ್ರಾಮಾಣಿಕತೆಯನ್ನು ಪ್ರಶ್ನಿಸುತ್ತಿಲ್ಲ. ಅದರ ಕಾರ್ಯವನ್ನು ತಡೆಯುವ ಉದ್ದೇಶವೂ ನಮಗಿಲ್ಲ, ಏಕೆಂದರೆ ಇದು ಸಂವಿಧಾನಬದ್ಧವಾಗಿದೆ' ಎಂದು ಆಯೋಗದ ಪರ ಹಾಜರಿದ್ದ ವಕೀಲ ರಾಕೇಶ್ ದ್ವಿವೇದಿಗೆ ತಿಳಿಸಿತು.

ಇದೇ ವೇಳೆ 10 ರಾಜಕೀಯ ಪಕ್ಷಗಳು ಸೇರಿ ಯಾವುದೇ ಅರ್ಜಿದಾರರು ಚುನಾವಣಾ ಆಯೋಗದ ಕಾರ್ಯಕ್ಕೆ ಮಧ್ಯಂತರ ತಡೆ ನೀಡುವಂತೆ ಮನವಿ ಮಾಡಿಲ್ಲ ಎಂದ ಪೀಠ, ಮುಂದಿನ ವಿಚಾರಣೆಯನ್ನು ಜುಲೈ 28ಕ್ಕೆ ಮುಂದೂಡಿತು.

ವಿಚಾರಣೆ. ವೇಳೆ ಆಧಾರ್ ಕಾರ್ಡ್‌ನ್ನು ಮತದಾರರ ಪಟ್ಟಿ ಪರಿಷ್ಕರಣೆ ವೇಳೆ ನೀಡಬೇಕಿರುವ 11 ದಾಖಲೆಗಳ ಪಟ್ಟಿಯಲ್ಲಿ ಯಾಕಿಲ್ಲ ಎಂದು ಪೀಠ ಪ್ರಶ್ನಿಸಿತು. ಆಗ ಆಯೋಗದ ಪರ ವಕೀಲ ದ್ವಿವೇದಿ ಅವರು, 'ಭಾರತದ ಪ್ರಜೆ ಅಲ್ಲದವರೂ ಆಧಾರ್ ಹೊಂದಬಹುದು. ಸಂವಿಧಾನದ 326ನೇ ವಿಧಿ ಪ್ರಕಾರ ಪ್ರತಿ ಮತದಾರರೂ ದೇಶದ ಪ್ರಜೆಯಾಗಿರಬೇಕು ಮತ್ತು ಆಧಾರ್ ಕಾರ್ಡ್ ಎಂಬುದು ನಾಗರಿಕತ್ವದ ದಾಖಲೆ ಅಲ್ಲ' ಎಂದು ವಾದಿಸಿದರು.

ಆಗ ನ್ಯಾ. ಧುಲಿಯಾ, 'ಒಂದು ವೇಳೆ ನೀವು ನಾಗರಿಕತ್ವವನ್ನು ಪರಿಶೀಲಿಸುವುದೇ ಆಗಿದ್ದರೆ ಮೊದಲೇ ಪರಿಷ್ಕರಣೆ ಕಾರ್ಯ ಆರಂಭಿಸಬೇಕಿತ್ತು. ಈಗ ತುಂಬಾ ವಿಳಂಬವಾಗಿದೆ' ಎಂದರು.

ಇದಕ್ಕೂ ಮೊದಲು ಆಯೋಗದ ವಿಶೇಷ ಪರಿಷ್ಕರಣೆ ಕಾರ್ಯವನ್ನು ಸಮರ್ಥಿಸಿಕೊಂಡ ದ್ವಿವೇದಿ, ಕೆಲ ಅರ್ಜಿದಾರರೇ 2003ರಿಂದೀಚೆಗೆ 1.1 ಕೋಟಿ ಮಂದಿ ಮೃತಪಟ್ಟಿದ್ದಾರೆ. 70 ಲಕ್ಷ ಮಂದಿ ವಲಸೆ ಹೋಗಿದ್ದಾರೆ ಎಂದು ಹೇಳುತ್ತಿದ್ದಾರೆ. ಈ ವಿಚಾರವೇ ವಿಶೇಷ ತೀವ್ರ ಪರಿಷ್ಕರಣೆಯ ಅಗತ್ಯವನ್ನು ಒತ್ತಿಹೇಳುತ್ತದೆ ಎಂದು ತಿಳಿಸಿದರು.

ಜತೆಗೆ ಮತದಾರರ ಪಟ್ಟಿ ಪರಿಷ್ಕರಣೆಯನ್ನು ಆಯೋಗವಲ್ಲದೆ ಮತ್ಯಾರು ಮಾಡಬೇಕು ಎಂದು ಪ್ರಶ್ನಿಸಿದ ಅವರು, ಈಗಾಗಲೇ ಶೇ.60ರಷ್ಟು ಮತದಾರರು ದಾಖಲೆಗಳನ್ನು ಸಲ್ಲಿಸಿದ್ದಾರೆ. ನಾವು ಯಾವುದೇ ವ್ಯಕ್ತಿಯ ಅಭಿಪ್ರಾಯ ಆಲಿಸದೆ ಮತದಾರರ ಪಟ್ಟಿಯಿಂದ ಹೊರಗಿಡುವುದಿಲ್ಲ ಎಂದು ನ್ಯಾಯಾಲಯಕ್ಕೆ ಭರವಸೆ ನೀಡಿದರು.

ಕಳೆದ ತಿಂಗಳಷ್ಟೇ ಚುನಾವಣಾ ಆಯೋಗವು ಮತದಾರರ ಪಟ್ಟಿ ಪರಿಷ್ಕರಣೆಯ ಘೋಷಣೆ ಮಾಡಿತ್ತು. ಇದನ್ನು ಪ್ರಶ್ನಿಸಿ ಆರ್‌ಜೆಡಿ ಸೇರಿ 10ಕ್ಕೂ ಹೆಚ್ಚು ರಾಜಕೀಯ ಪಕ್ಷಗಳ ಮುಖಂಡರು, ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ ಎನ್‌ಜಿಒ ಕೂಡ ಅರ್ಜಿ ಸಲ್ಲಿಸಿದ್ದರು.

**ಆಧಾರ:** ಕನ್ನಡ ಪ್ರಭ, ದಿನಾಂಕ:11.07.2025

## 2. ಹೈಕೋರ್ಟ್ ಸಿಜೆ ನ್ಯಾ.ವಿಭು ಶಪಥ

ನ್ಯಾಯಾಂಗದ ಸ್ವಾತಂತ್ರ್ಯದ ರಕ್ಷಣೆ, ನ್ಯಾಯಾಂಗ ವ್ಯವಸ್ಥೆಯನ್ನು ಬಲಗೊಳಿಸುವ ಬದ್ಧತೆಯೊಂದಿಗೆ ಕೆಲಸ ಮಾಡುವ ಜೊತೆಗೆ ನ್ಯಾಯದಾನದಲ್ಲಿನ ವಿಳಂಬ ಕಡಿಮೆ ಮಾಡಲು ತಂತ್ರಜ್ಞಾನದ ಬಳಕೆಗೆ ಒತ್ತು ನೀಡಿ ನಾಗರಿಕರಿಗೆ ಉತ್ತಮ ಸೇವೆ ನೀಡಲಾಗುವುದು ಎಂದು ಮುಖ್ಯ ನ್ಯಾಯಮೂರ್ತಿ ನ್ಯಾ.ವಿಭು ಬಖ್ರು ಹೇಳಿದರು.

ದಿನಾಂಕ:19.07.2025ರಂದು ರಾಜಭವನದ ಗಾಜಿನ ಮನೆಯಲ್ಲಿ ನಡೆದ ಸಮಾರಂಭದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಅಧಿಕಾರದ ಪ್ರಮಾಣ ವಚನ ಬೋಧಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಉಪಸ್ಥಿತರಿದ್ದರು.

ಬಳಿಕ ಹೈಕೋರ್ಟ್‌ನಲ್ಲಿ ಬಾರ್ ಕೌನ್ಸಿಲ್ ಆಫ್ ಕರ್ನಾಟಕದಿಂದ ಆಯೋಜಿಸಿದ್ದ ಸ್ವಾಗತ ಕಾರ್ಯಕ್ರಮದಲ್ಲಿ 'ಎಲ್ಲರಿಗೂ ನಮಸ್ಕಾರ' ಎಂದು ಕನ್ನಡದಲ್ಲಿ ಮಾತು ಆರಂಭಿಸಿದ ನ್ಯಾ.ವಿಭು ಬಖ್ರು ಕರ್ನಾಟಕದ ಮುಖ್ಯ ನ್ಯಾಯಮೂರ್ತಿಯಾಗಿ ಅಧಿಕಾರವಹಿಸಿಕೊಂಡಿರುವುದು ನನ್ನ ಸೌಭಾಗ್ಯ, ದೇಶದ ಸಂವಿಧಾನ ಮತ್ತು ಕಾನೂನಿನ ಅಭಿವೃದ್ಧಿಯಲ್ಲಿ ಕರ್ನಾಟಕ ಮಹತ್ವದ ಪಾತ್ರ ವಹಿಸಿದೆ. ಮೊದಲಿನಿಂದಲೂ ಶ್ರೇಷ್ಠ ನ್ಯಾಯಾಂಗ ಅಧಿಕಾರಿಗಳು, ವಿದ್ವಾಂಸರು, ಸುಧಾರಕರನ್ನು ದೇಶಕ್ಕೆ ನೀಡಿದೆ ಎಂದರು.

ನ್ಯಾ.ಎಂ.ವೆಂಕಟಾಚಲಯ್ಯ ಅವರನ್ನು ಹೆಮ್ಮೆಯಿಂದ ನಾವು ಸ್ಮರಿಸುತ್ತೇವೆ. ದೇಶದ ಮುಖ್ಯ ನ್ಯಾಯಮೂರ್ತಿಯಾಗಿದ್ದ ಅವರು ನ್ಯಾಯಾಂಗಕ್ಕೆ ಚಾತುರ್ಯ, ಗೌರವ, ನಿಷ್ಪಕ್ಷಪಾತತೆ ತಂದುಕೊಟ್ಟರು. ನ್ಯಾಯಾಂಗದ ಸ್ವಾಯತ್ತೆ, ಮಾನವ ಹಕ್ಕುಗಳ ಕುರಿತ ಅವರ ಬದ್ಧತೆ ಅನೇಕ ತಲೆಮಾರುಗಳಿಗೆ ಸ್ಫೂರ್ತಿ ನೀಡುತ್ತದೆ. ಕಾನೂನು ನಮಗೆ ಧರ್ಮ. ಕಾನೂನು ಎತ್ತಿಹಿಡಿಯಲು ಬದ್ಧರಾಗಿರುತ್ತೇವೆ.

ನ್ಯಾಯಾಂಗ ಬಲವಾಗಿದ್ದರೆ ಸಂವಿಧಾನ ನೀಡಿರುವ ಸ್ವಾತಂತ್ರ್ಯದ ಹಕ್ಕು ಸುಸ್ಥಿರವಾಗಿರುತ್ತದೆ. ನಿಮಗಿರುವ ನಂಬಿಕೆಯೇ ಈ ಸಂಸ್ಥೆ ಸುಸ್ಥಿರವಾಗಿರಲು ಕಾರಣವಾಗುತ್ತದೆ. ಹೀಗಾಗಿ, ನಿಮ್ಮ ನಂಬಿಕೆ ಉಳಿಸಿಕೊಳ್ಳುವುದು ನಮ್ಮ ಜವಾಬ್ದಾರಿ ಎಂದು ನ್ಯಾಯಮೂರ್ತಿ ಹೇಳಿದರು.

ಪರಸ್ಪರ ಸಹಭಾಗಿತ್ವದ ಈ ಪಯಣದಲ್ಲಿ ನಾವು ಕರ್ನಾಟಕದ ಶ್ರೀಮಂತ ತತ್ವಜ್ಞಾನದ ಪರಂಪರೆಯಿಂದಲೂ ಸ್ಫೂರ್ತಿಯನ್ನು ಪಡೆಯಬೇಕಿದೆ. ಸಮಾಜದ ಪ್ರತಿಯೊಬ್ಬರಿಗೂ ಗೌರವ,

ಸಮಾನತೆ, ನೈತಿಕ ಸ್ಥೈರ್ಯ ಸಿಗಬೇಕು ಎಂದು ದೂರದೃಷ್ಟಿಯ ಬಸವಣ್ಣನವರು ಹೇಳಿದ್ದರು. ಸಮಾಜದ ಕಟ್ಟ ಕಡೆಯ ವ್ಯಕ್ತಿಗೆ, ತಳಮಟ್ಟಕ್ಕೆ ನ್ಯಾಯದಾನ ತಲುಪಬೇಕು ಎಂದು ಅವರು ಹೇಳಿದ್ದಾರೆ. ಡಾ.ಬಿ.ಆರ್. ಅಂಬೇಡ್ಕರ್ ಅವರ ಸಾಮಾಜಿಕ ನ್ಯಾಯ ಮತ್ತು ಸಂವಿಧಾನದ ಮೌಲ್ಯಗಳ ಕುರಿತಾದ ಬದ್ಧತೆ ನಮಗೆ ದಾರಿ ದೀಪವಾಗಿದೆ ಎಂದು ನ್ಯಾ.ವಿಭು ಬಖ್ರು ತಿಳಿಸಿದರು.

ಸರ್ಕಾರಿ ಸೇವೆಯಲ್ಲಿರುವ ಎಂಜಿನಿಯರ್, ಆಡಳಿತಗಾರರು, ನ್ಯಾಯಾಂಗ ಅಧಿಕಾರಿಯಾದವರು ಶಿಸ್ತು, ಶ್ರೇಷ್ಠತೆ ಮತ್ತು ಐಕ್ಯತೆಯನ್ನು ಹೊಂದಿರಬೇಕು ಎಂದು ಸರ್.ಎಂ.ವಿಶ್ವೇಶ್ವರಯ್ಯ ಅವರು ಹೇಳಿದ್ದಾರೆ. ತುಳಿತಕ್ಕೊಳಗಾದವರು ಸೇರಿ ಎಲ್ಲರನ್ನು ಒಳಗೊಳ್ಳುವ, ಎಲ್ಲರನ್ನು ಒಳಗೊಂಡ ಸುರಕ್ಷಿತ ವಾತಾವರಣ ಕಲ್ಪಿಸಲು ಕ್ರಮವಹಿಸುತ್ತೇವೆ. ಬಾರ್ ಕೌನ್ಸಿಲ್ ಆಫ್ ಕರ್ನಾಟಕದ ಸಹಕಾರದಿಂದ ಇದೆಲ್ಲವೂ ಸಾಧ್ಯ ಎಂದರು.

ಅಡ್ವಕೇಟ್ ಜನರಲ್ ಶಶಿಕಿರಣ್ ಶೆಟ್ಟಿ, ಬಾರ್ ಕೌನ್ಸಿಲ್ ಅಧ್ಯಕ್ಷ ಸಿದ್ದಲಿಂಗಪ್ಪ ಮಿತ್ತಲ್‌ಕೋಡ್ ಸೇರಿ ಹಿರಿಯ ನ್ಯಾಯವಾದಿಗಳು ಉಪಸ್ಥಿತರಿದ್ದರು.

**ಆಧಾರ:**ಕನ್ನಡ ಪ್ರಭ, ದಿನಾಂಕ:20.07.2025

## 3. ವಿಧಾನಸಭೆ ಕಾಗದಪತ್ರ ಸಮಿತಿಗೆ ಸೀಮಿತ ಅಧಿಕಾರ: ಹೈಕೋರ್ಟ್

ಸದನ ಸಮಿತಿಯ 'ಸೀಮೋಲ್ಲಂಘನೆ'ಗೆ ತಡೆ ಹಾಕಿರುವ ಹೈಕೋರ್ಟ್, ಕರ್ನಾಟಕ ಲೋಕಸೇವಾ ಆಯೋಗ ಹಾಗೂ ಕರ್ನಾಟಕ ವಿಧಾನಸಭೆ ಸಚಿವಾಲಯದ ನಡುವೆ ಕಳೆದ ಒಂದು ದಶಕದಿಂದ ನಡೆಯುತ್ತಿದ್ದ ಕಾನೂನು ಸಂಘರ್ಷಕ್ಕೆ ತೆರೆ ಎಳೆದಿದೆ.

ಕರ್ನಾಟಕ ಲೋಕಸೇವಾ ಆಯೋಗದ ಲೆಕ್ಕ ಪರಿಶೋಧನಾ ವರದಿಗಳನ್ನು ವಿಧಾನಸಭೆಯ ಕಾಗದ ಪತ್ರಗಳ ಸಮಿತಿ ಮುಂದೆ ಮಂಡಿಸುವಂತೆ ಹಾಗೂ ಅದರ ವಿವರಣೆ ನೀಡಲು ಆಯೋಗದ ಕಾರ್ಯದರ್ಶಿ ಸದನ ಸಮಿತಿ ಮುಂದೆ ಹಾಜರಾಗುವಂತೆ ವಿಧಾನಸಭೆಯ ಕಾರ್ಯದರ್ಶಿ ಹೊರಡಿಸಿದ್ದ ಆದೇಶವನ್ನು ರದ್ದುಪಡಿಸಿರುವ ಹೈಕೋರ್ಟ್, ಅಂತಹ ಯಾವುದೇ ಅಧಿಕಾರ ಸದನ ಸಮಿತಿಗಿಲ್ಲ. ಈ ಕ್ರಮ ಕಾಗದ ಪತ್ರಗಳ ಸಮಿತಿಗೆ ಇರುವ ಅಧಿಕಾರಕ್ಕೆ ವ್ಯತಿರಿಕ್ತ ಹಾಗೂ 'ಅತಿರೇಕ'ವಾಗಿದೆ ಎಂದು ಸಾರಿದೆ.

ಕಾಗದ ಪತ್ರಗಳ ಸಮಿತಿಯ ಕಾರ್ಯವ್ಯಾಪ್ತಿ ಸೀಮಿತವಾಗಿದೆ. ಅದರ ಹೆಸರಲ್ಲೇ ಇರುವಂತೆ ಈಗಾಗಲೇ ಸದನದ ಮುಂದಿಡಲಾದ ಕಾಗದ ಪತ್ರಗಳನ್ನು ಪರಿಶೀಲಿಸುವುದು ಮಾತ್ರ ಆ ಸಮಿತಿಯ ಕೆಲಸವಾಗಿದೆ. ಈ ಕಾಗದ ಪತ್ರಗಳ ಸಮಿತಿಯ ರಚನೆ ಮತ್ತು ಕಾರ್ಯವ್ಯಾಪ್ತಿಗೆ ಸಂಬಂಧಿಸಿದಂತೆ ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 290 ಮತ್ತು 291ರಲ್ಲಿ ಉಲ್ಲೇಖವಿದೆ. ಅದರ ಪ್ರಕಾರ ಸಭೆಯಲ್ಲಿ (ಸದನದಲ್ಲಿ) ಮಂಡಿಸಲಾದ ಕಾಗದಪತ್ರಗಳನ್ನು ಪರಿಶೀಲಿಸಿ ಸಮಿತಿಯು ಸದನಕ್ಕೆ ವರದಿ ಸಲ್ಲಿಸಬೇಕು. ಅದನ್ನು ಹೊರತುಪಡಿಸಿ ಯಾವುದೇ ಇಲಾಖೆ, ಪ್ರಾಧಿಕಾರಿಗಳಿಂದ ದಾಖಲೆಗಳು ಅಥವಾ ಮಾಹಿತಿಗಳನ್ನು ಸ್ವತಃ ತರಿಸಿಕೊಳ್ಳುವುದು, ಅಧಿಕಾರಿಗಳನ್ನು ಕರೆಸಿಕೊಂಡು ಸಾಕ್ಷಿ ಹೇಳಿಸಿಕೊಳ್ಳುವುದು ಕಾಗದಪತ್ರ ಸಮಿತಿಯ ಅಧಿಕಾರ ವ್ಯಾಪ್ತಿಗೆ ಬರುವುದಿಲ್ಲ.

'ಸಭೆಯಲ್ಲಿ ಮಂಡಿಸಲಾದ ಕಾಗದ ಪತ್ರಗಳು' ಎಂಬುದು ಭೂತಕಾಲದ ಸೂಚಕವಾಗಿದೆ. ದಾಖಲೆಗಳನ್ನು ತರಿಸಿಕೊಳ್ಳುವುದು ಅಂದರೆ ಭವಿಷ್ಯಕಾಲ ಸೂಚಕವಾಗಿದೆ. ಸಭೆಯ ಮುಂದೆ ಮಂಡಿಸಲಾದ ಕಾಗದ ಪತ್ರಗಳಷ್ಟೇ ಸಮಿತಿಯ ಪರಿಶೀಲನಾ ವ್ಯಾಪ್ತಿ ಹೊಂದಿರುತ್ತವೆಯೇ ಹೊರತು,

ತರಿಸಿಕೊಂಡು ಅಥವಾ ತರಿಸಿಕೊಳ್ಳಬಹುದಾದ ಕಾಗದ ಪತ್ರಗಳು ಸಮಿತಿಯ ಪರಿಶೀಲನಾ ವ್ಯಾಪ್ತಿಗೆ ಬರುವುದಿಲ್ಲ ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

ಕರ್ನಾಟಕ ಲೋಕಸೇವಾ ಆಯೋಗದ ವಾದ ಪರಿಗಣಿಸಿದ ಹೈಕೋರ್ಟ್, ಆಯೋಗದ ಲೆಕ್ಕಪರಿಶೋಧನಾ ವರದಿಗಳನ್ನು ಕಾಗದಪತ್ರ ಸಮಿತಿಯ ಮುಂದೆ ಮಂಡಿಸುವಂತೆ ಕರ್ನಾಟಕ ವಿಧಾನಸಭೆ ಸಚಿವಾಲಯದ ಕಾರ್ಯದರ್ಶಿ 2015ರ ನವೆಂಬರ್ 13ರಂದು ಹೊರಡಿಸಿದ್ದ ಆದೇಶ ಹಾಗೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಪ್ರಧಾನ ಕಾರ್ಯದರ್ಶಿ 2026ರ ಅಕ್ಟೋಬರ್ 19ರಂದು ಲೋಕಸೇವಾ ಆಯೋಗಕ್ಕೆ ರವಾನಿಸಿದ್ದ ಸೂಚನೆಯನ್ನು ರದ್ದುಪಡಿಸಿದೆ. ಇಂತಹದ್ದೇ ಆದೇಶವನ್ನು ಇತ್ತೀಚೆಗೆ ದಕ್ಷಿಣ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಪ್ರಕರಣದಲ್ಲೂ ಹೈಕೋರ್ಟ್ ನೀಡಿತ್ತು. ಈ ಮೂಲಕ ವಿಧಾನಸಭೆಯ ಕಾಗದ ಪತ್ರಗಳ ಸಮಿತಿಯ ಅಧಿಕಾರ ವ್ಯಾಪ್ತಿಯನ್ನು ಹೈಕೋರ್ಟ್ ತಿಳಿಸಿಕೊಟ್ಟಿದೆ.

**ಆಧಾರ:**ಉದಯವಾಣಿ, ದಿನಾಂಕ:01.08.2025

## 4. SC:Parl must review powers of speaker under anti-defection law

In a significant Judgment, the Supreme Court on 31st July,2025 said to protect foundations of democracy Parliament must take a call on the effectiveness of the anti-defection law mechanism, which has been virtually blunted due to the widely perceived partisanship of speakers, leading to delay in deciding disqualification petitions against political turncoats.

Chief Justice BR Gavai and Justice A G Masih gave this ruling while directing the Telangana assembly speaker to decide within three months the disqualification petitions filed against 10 BRS MLAS who defected to Congress after it formed govt in the State following the Nov 2023 elections. The verdict marks a departure from the restraint that courts have shown in setting deadlines for speakers and could well be a precedent in settling defection-related cases in the future.

The CJI-led bench also directed the speaker not to allow the 10 MLAs, facing disqualification proceedings, to protract proceedings.

"In the event, any of such MLAs attempt to protract the proceedings, the speaker would draw an adverse inference against him," the bench said.

Constitutional courts have generally refrained from fastening speakers with a timeline to decide pending disqualification petitions. However, SC said since the Telangana speaker has delayed adjudication of the disqualification petitions by more than a year, it warranted issuance of directions to him.

It was critical of the way the speaker issued notice on the disqualification petitions seven months after they were filed, and said such a delay breached the trust Parliament reposed in presiding officers to adjudicate defection cases fearlessly and

expeditiously. In the 2023 elections to the 119-member assembly, Congress had won 64 seats, BRS 39, BJP eight, AIMM seven and CPI one. However, Congress's numbers rose after the defection of the 10 BRS MLAS.

Writing the 74-page judgment recording numerous instances of speakers' deliberate inaction in speedy adjudication of disqualification petitions against MLAs, CJI said, "It is for Parliament to consider if the mechanism of entrusting speakers the important task of deciding the issue of disqualification on the ground of defection is serving the purpose of effectively combating political defections or not?"

"If the very foundation of our democracy and the principles that sustain it are to be safeguarded, it will have to be examined whether the present mechanism is sufficient or not... it is for Parliament to take a call on that," he said,

**Courtesy:** Times of India, dated:01.08.2025

## 5. ಸ್ಪಂದಿಸದ ಅಧಿಕಾರಿಗಳ ವರ್ಗಕ್ಕೆ ಶಾಸಕರ ಪತ್ರ ತಪ್ಪಲ್ಲ: ಕೋರ್ಟ್

ಕಚೇರಿಗೆ ನಿಗದಿತ ಸಮಯಕ್ಕೆ ಬಾರದ ಹಾಗೂ ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದಿಸಿ ಪರಿಹಾರ ಕಲ್ಪಿಸದ ಆರೋಪವಿದ್ದಾಗ ಸ್ಥಳೀಯ ಶಾಸಕರ (ಜನಪ್ರತಿನಿಧಿ) ಸಲಹೆ ಶಿಫಾರಸು ಮೇರೆಗೆ ಸರ್ಕಾರಿ ಅಧಿಕಾರಿಗಳನ್ನು ವರ್ಗಾವಣೆ ಮಾಡುವುದು ತಪ್ಪಾಗುವುದಿಲ್ಲ ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

ಬಂಗಾರಪೇಟೆ ತಹಸೀಲ್ದಾರ್ ಗ್ರೇಡ್–1 ಆಗಿ ಸೇವೆ ಸಲ್ಲಿಸುತ್ತಿದ್ದ ತಮ್ಮನ್ನು ಅವಧಿ ಪೂರ್ವವಾಗಿ ಕೋಲಾರ ಜಿಲ್ಲಾಧಿಕಾರಿಗಳ ಕಚೇರಿಗೆ ವರ್ಗಾವಣೆ ಮಾಡಿದ ಸರ್ಕಾರದ ಕ್ರಮ ಪುರಸ್ಕರಿಸಿದ ಕೆಎಟಿ ಆದೇಶ, ಪ್ರಶ್ನಿಸಿ ಎಸ್. ವೆಂಕಟೇಶಪ್ಪ ಎಂಬುವವರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ಈ ಅರ್ಜಿ ವಜಾಗೊಳಿಸಿದ ನ್ಯಾಯಮೂರ್ತಿ ಎಸ್.ಜಿ.ಪಂಡಿತ್ ಅವರ ನೇತೃತ್ವದ ವಿಭಾಗೀಯ ಪೀಠ, ಅರ್ಜಿದಾರರ ವಿರುದ್ಧ ಕಚೇರಿಗೆ ಸಮಯಕ್ಕೆ ಬಾರದ, ಸಾರ್ವಜನಿಕರ ಸಮಸ್ಯೆಗಳನ್ನು ಆಲಿಸಿ ಪರಿಹಾರ ಒದಗಿಸದ ಆರೋಪವಿತ್ತು. ಈ ಕುರಿತು ಬಂಗಾರಪೇಟೆ ಕ್ಷೇತ್ರದ ಶಾಸಕರಿಗೆ ಸಾರ್ವಜನಿಕರೇ ದೂರು ನೀಡಿದ್ದರು. ಆ ದೂರು ಆಧರಿಸಿ ಶಾಸಕರು ಕಂದಾಯ ಸಚಿವರಿಗೆ ಪತ್ರ ಬರೆದು, ಅರ್ಜಿದಾರರ ವರ್ಗಾವಣೆಗೆ ಕೋರಿದ್ದರು. ಬಳಿಕ ಸರ್ಕಾರ ಅರ್ಜಿದಾರರನ್ನು ವರ್ಗಾಯಿಸಿದೆ. ಈ ಎಲ್ಲಾ ಅಂಶ ಪರಿಗಣಿಸಿ ಕೆಎಟಿಯು ಅರ್ಜಿದಾರರ ಅವಧಿಪೂರ್ವ ವರ್ಗಾವಣೆ ಪುರಸ್ಕರಿಸಿದ್ದು, ಅದರಲ್ಲಿ ಯಾವುದೇ ದೋಷಗಳು ಕಂಡು ಬರುತ್ತಿಲ್ಲ ಎಂದು ಹೇಳಿದೆ.

**ಆಧಾರ:**ಕನ್ನಡ ಪ್ರಭ, ದಿನಾಂಕ:30.08.2025

## 6. Governors can’t sit over Bills endlessly: SC judges

Three of the five judges on the Presidential Reference Bench dated: 02.09.2025 orally observed along with the States of Tamil Nadu and West Bengal that Governors could not sit endlessly over Bills placed before them for assent.

Chief Justice of India B.R. Gavai and Justices Vikram Nath and P.S. Narasimha separately remarked that Governors could neither delay the wisdom of the legislature indefinitely nor impede the functioning of the Constitution. "No organ can impair the functioning of the Constitution," Justice Narasimha said.

Tamil Nadu, represented by senior advocates A.M. Singhvi and P. Wilson, said Governors "cannot assume to be royalty in a Republic". Senior advocate Kapil Sibal, for West Bengal, submitted that high offices under the Constitution must work collaboratively and not combatively with each other.

"When the Constitution is clear that a Governor should act with immediacy, why should he hold back Bills? There is a sense of urgency associated with the Governor's assent. Legislation is a sovereign act. It cannot wait," Mr. Sibal emphasised.

Mr. Singhvi said that Bills were meant to realise the felt necessity of the times. Mr. Sibal argued that "absurdity" would follow if the court agreed with the Centre's argument that Governors had absolute power to withhold State Bills under Article 200 (Governors' power to assent to Bills).

Countering the Centre, he said States cannot go in search of political solutions to coax Governors' assent. Gubernatorial delay thwarts the constitutional scheme, he said. "This Constitution has its genesis in history, but its alignment is with the future. And who decides the future of this country? You five in this case. The future of India is at stake if you give such absurd powers to the Governor," Mr. Sibal submitted.

The Bench is hearing a Presidential Reference of May questioning time limits placed on the Governors and the President to deal with State Bills.

The Reference followed an April 8 judgment pronounced by a two judge Bench of the apex court in the case of the Tamil Nadu Governor, who had delayed assent to 10 State Bills since 2020. The Division Bench had imposed a three month deadline for the President and Governors to decide the fate of the Bills. If the Bills were left pending beyond three months, they would be "deemed" to have received assent and become laws.

The Bench, however, expressed doubts about the court imposing "general" time limits on the President and Governors and granting "deemed assent" to Bills. "What happens if the time limit of three months set by the Supreme Court [in the TN Governor judgment] is not followed by the President or Governors," Justice Nath asked. He queried why it was "deemed assent" alone. Why cannot the other options withholding assent or reference to the President - also be "deemed".

Justice Narasimha said time limits could be prescribed in individual cases after considering the peculiar facts and circumstances of each.

Chief Justice Gavai said a broad brushstroke of a "general" timeline applicable to all cases of delay may amount to over reaching by the judiciary. "Timelines help in maintaining discipline and immediacy. This dispute began with individual cases. Kerala and Tamil Nadu came with their own cases. However, the problem [gubernatorial delay] has proven to be endemic and repetitive," Mr. Singhvi said explaining the reason for the Tamil Nadu Governor case judgment fixing a "general" three month deadline.

Mr. Sibal said the sovereign act of the legislation cannot be impaired by a recalcitrant Governor.

"He cannot say 'I choose to sit back and do nothing'. The Governor is not a postman. He has certain play in the joints. If he feels a Bill requires consideration by the President, the Governor can consult lawyers, etc" and refer it," he said.

**Courtesy**:The Hindu, dated:03.09.2025

## 7. ಮಾಲೂರು ಶಾಸಕರ ಆಯ್ಕೆಗೆ ಕೋರ್ಟ್ ಕತ್ತರಿ

ಮಾಲೂರು ವಿಧಾನಸಭಾ ಕ್ಷೇತ್ರದ ಫಲಿತಾಂಶವನ್ನು ಹೈಕೋರ್ಟ್ ದಿನಾಂಕ:16.09.2025ರಂದು ರದ್ದುಪಡಿಸಿ ಮಹತ್ವದ ಆದೇಶ ನೀಡಿದೆ. ಮುಂದಿನ ನಾಲ್ಕು ವಾರಗಳಲ್ಲಿ ಹೊಸದಾಗಿ ಮತ ಎಣಿಕೆ ನಡೆಸಿ ಫಲಿತಾಂಶ ಪ್ರಕಟಿಸಬೇಕು ಎಂದು ಕೇಂದ್ರ ಚುನಾವಣಾ ಆಯೋಗಕ್ಕೆ (ಸಿಇಸಿ) ನಿರ್ದೇಶನ ನೀಡಿದೆ.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕೋಲಾರದ ಮಾಲೂರು ಕ್ಷೇತ್ರದಿಂದ ಶಾಸಕರಾಗಿ ಕೆ.ವೈ.ನಂಜೇಗೌಡ ಅವರು ಆಯ್ಕೆ ಆಗಿರುವುದನ್ನು ಅನೂರ್ಜಿತಗೊಳಿಸುವಂತೆ ಕೋರಿ ಬಿಜೆಪಿಯ ಪರಾಜಿತ ಅಭ್ಯರ್ಥಿ ಕೆ.ಎಸ್.ಮಂಜುನಾಥ್‌ಗೌಡ ಸಲ್ಲಿಸಿದ್ದ ಅರ್ಜಿ ಪುರಸ್ಕರಿಸಿರುವ ನ್ಯಾಯಮೂರ್ತಿ ಆರ್.ದೇವದಾಸ್ ನ್ಯಾಯಪೀಠ ಈ ಆದೇಶ ನೀಡಿದೆ.

ಇದೇ ವೇಳೆ ಕೆ.ವೈ. ನಂಜೇಗೌಡ ಪರ ವಕೀಲರ ಮನವಿ ಮೇರೆಗೆ ಶಾಸಕ ಸ್ಥಾನ 'ಅಸಿಂಧು' ಎಂದು ನೀಡಿದ್ದ ಆದೇಶಕ್ಕೆ 30 ದಿನ ಹೈಕೋರ್ಟ್ ತಡೆ ನೀಡಿದೆ. ಈ ಅವಧಿಯಲ್ಲಿ ಶಾಸಕರು ಸುಪ್ರೀಂಕೋರ್ಟ್‌ಗೆ ಮನವಿ ಸಲ್ಲಿಸಬಹುದು.

ಒಂದು ವೇಳೆ, ಸುಪ್ರೀಂಕೋರ್ಟ್‌ನಿಂದ ಯಾವುದೇ ನಿರ್ದೇಶನ ಬರದೇ ಇದ್ದರೆ ಶಾಸಕ ಸ್ಥಾನ ಅಸಿಂಧುವಾಗುತ್ತದೆ ಹಾಗೂ ಮರು ಮತ ಎಣಿಕೆ ನಡೆಯಲಿದೆ. ಅದೇ ರೀತಿ, ಹೈಕೋರ್ಟ್ ಆದೇಶಕ್ಕೆ ತಡೆಯಾಜ್ಞೆ ತಂದರೆ ಶಾಸಕ ಸ್ಥಾನಕ್ಕೆ ಯಾವುದೇ ಸಮಸ್ಯೆಯಾಗುವುದಿಲ್ಲ.

ಕಳೆದ ವಿಧಾನಸಭೆ ಚುನಾವಣೆಯಲ್ಲಿ ಮಾಲೂರು ಕ್ಷೇತ್ರದಿಂದ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ ಕೆ.ವೈ.ನಂಜೇಗೌಡ ಗೆಲುವು ಸಾಧಿಸಿದ್ದರು. ಇದನ್ನು ಪ್ರಶ್ನಿಸಿರುವ ಅರ್ಜಿದಾರರು, ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಎಲ್ಲಾ 15 ಮಂದಿ ಸ್ಪರ್ಧಿಗಳ ಏಜೆಂಟ್‌ಗಳಿಗೆ ಮತ ಎಣಿಕೆ ಕೇಂದ್ರದಲ್ಲಿ ಸಮರ್ಪಕ ವ್ಯವಸ್ಥೆ ಮಾಡಿರಲಿಲ್ಲ. ಒಂದೇ ಕೊಠಡಿಯಲ್ಲಿ ಮತಗಳ ಎಣಿಕೆ ಕಾರ್ಯ ನಡೆಯಬೇಕಿದ್ದು, ಎರಡು ಪ್ರತ್ಯೇಕ ಕೊಠಡಿಯಲ್ಲಿ ಎಣಿಕೆ ಮಾಡಲಾಗಿದೆ. ಆ ಮೂಲಕ ಜನಪ್ರತಿನಿಧಿಗಳ ಕಾಯ್ದೆಯ ನಿಯಮಗಳು ಮತ್ತು ಚುನಾವಣಾ ಆಯೋಗ ಪ್ರಕಟಿಸಿದ್ದ ನಿಯಮಗಳನ್ನು ಉಲ್ಲಂಘಿಸಲಾಗಿದೆ. ಹೀಗಾಗಿ, ನಂಜೇಗೌಡರನ್ನು ವಿಜೇತ ಅಭ್ಯರ್ಥಿಯಾಗಿ ಘೋಷಣೆ ಮಾಡಿದ ಚುನಾವಣಾ ಆಯೋಗದ ಕ್ರಮವನ್ನು ರದ್ದುಪಡಿಸಬೇಕು. ಅಷ್ಟೇ ಅಲ್ಲದೆ, ಕ್ಷೇತ್ರದ ಮತಗಳನ್ನು ಮರು ಎಣಿಕೆ ಮಾಡುವಂತೆ ನಿರ್ದೇಶನ ನೀಡಬೇಕು ಎಂದು ಕೋರಿದ್ದರು.

248 ಮತಗಳಿಂದ ಸೋತಿದ್ದ ಬಿಜೆಪಿ ಅಭ್ಯರ್ಥಿ ಕೆ.ಎಸ್.ಮಂಜುನಾಥ್ ಗೌಡ: 2023ರ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಕೆ.ಎಸ್.ಮಂಜುನಾಥ್‌ಗೌಡ ಅವರು ಕಾಂಗ್ರೆಸ್ ಅಭ್ಯರ್ಥಿ ಕೆ.ವೈ.ನಂಜೇಗೌಡ ಅವರ ವಿರುದ 248 ಮತಗಳ ಅಂತರದಿಂದ ಸೋತಿದ್ದರು.

**ಆಧಾರ:**ಕನ್ನಡ ಪ್ರಭ, ದಿನಾಂಕ:17.09.2025

# ಭಾಗ–7

# ಹೊರ ರಾಜ್ಯಗಳ ಸುದ್ದಿಗಳು

## 1. Bill passed to hike UP MLA's salary by 30%

Uttar Pradesh assembly on dated:14.08.2025 passed a bill to allow 30% raise in legislators' salaries and allowances. The increased salary will be effective from April 1, 2025, finance minister Suresh Khanna told TOI and added that the much awaited demand to link salary with cost inflation index has also been heeded to.

From now on, the salary of the legislators would be revised as per cost inflation index every five years, Khanna said and added that only a notification would be issued when the revision is effected. As per the bill, legislators' basic salary has been increased from the existing Rs 25,000 to Rs 35,000 while ministers' salary has been increased from existing Rs 40,000 to Rs 50,000. The area allowance given to legislators has also been increased from the existing Rs 50,000 to Rs 75,000, the bill stated.

The railway coupon has been increased from Rs 4.25 lakh per year to Rs 5 lakh per year. The increased Rs 5 lakh railway coupon will be 100% convertible. Earlier, of the Rs 4.25 lakh railway coupon, only Rs 3lakh worth coupons were convertible to other means of transport like vehicle and flight while Rs 1.25 lakh coupon had to be mandatorily used as railway conveyance. UP govt has also increased legislators' personal assistance allowance from existing Rs 20,000 to Rs 30,000 while medical allowance has also been increased from Rs 30,000 to Rs 45,000. Telephone allowance has also been increased from existing Rs 6,000 to Rs 9,000, Khanna said.

Allowance and pension for ex-MLA has also been increased from Rs 1 lakh to 1.5 lakh, including Railway coupons. Since the increased salary will be effective from April 1, 2025, the arrears will be given to the legislators when the next salary would be given. The increased salary of the legislators will give an additional burden of over Rs 100 crore annually.

**Courtesy:** Times of India, dated:15.08.2025

## 2. ಆಂಧ್ರದಲ್ಲೂ ಕರ್ನಾಟಕ ರೀತಿ ಸ್ತ್ರೀಯರಿಗೆ ಫ್ರೀ ಬಸ್

ಕರ್ನಾಟಕದಲ್ಲಿ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಒದಗಿಸುವ 'ಶಕ್ತಿ ಯೋಜನೆ' ರೀತಿ ನೆರೆಯ ಆಂಧ್ರ ಪ್ರದೇಶವೂ 'ಸ್ತ್ರೀ ಶಕ್ತಿ' ಯೋಜನೆಯನ್ನು ದಿನಾಂಕ:15.08.2025ರಂದು ಜಾರಿಗೆ ತಂದಿದೆ. ಸ್ವಾತಂತ್ರ್ಯ ದಿನದಂದು ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡು, ಡಿಸಿಎಂ ಪವನ್ ಕಲ್ಯಾಣ್ ಮತ್ತು ಸಚಿವ ನಾರಾ ಲೋಕೋಶ್ ಸ್ತ್ರೀಶಕ್ತಿಗೆ ಚಾಲನೆ ನೀಡಿದರು. ಯೋಜನೆ ಅಡಿ ಮಹಿಳೆಯರು ಮತ್ತು ತೃತೀಯ ಲಿಂಗಿಗಳು ಸಾಮಾನ್ಯ ಮತ್ತು ಎಕ್ಸ್‌ಪ್ರೆಸ್ ಬಸ್‌ನಲ್ಲಿ ಉಚಿತವಾಗಿ ಪ್ರಯಾಣಿಸಬಹುದು ಇದು 2.62 ಕೋಟಿ ಮಹಿಳೆಯರಿಗೆ ಸಹಾಯವಾಗಲಿದೆ.

**ಆಧಾರ:**ಕನ್ನಡ ಪ್ರಭ, ದಿನಾಂಕ:16.08.2025

## 3. AP Cabinet approves India's 1st comprehensive circular economy policy

The Andhra Pradesh Cabinet meeting, held under the chairmanship of Chief Minister N. Chandrababu Naidu at the State Secretariat on dated:21.08.2025, gave its nod to the AP Circular Economy Waste Recycling Policy (4.0) and approved various proposals from different departments. Minister for Information & Public Relations and Housing, Kolasu Partha sarathy, disclosed the decisions taken by the Cabinet to media persons. He said the Cabinet comprehensively reviewed the growing challenges of industrial waste, evolving sustainability needs, and economic opportunities emerging from circular economy models.

After a detailed evaluation, the Cabinet officially approved the Andhra Pradesh Circular Economy and Waste Recycling Policy for 2025-2030. As part of the Swarna Andhra 2047 vision, this policy stands as India's first comprehensive circular economy and waste to wealth creation. It features dua-ltier infrastructure models, industrial symbiosis requirements, special task forces, and circular economy interactive dashboards. This policy will also create large-scale opportunities for establishing MSMEs focused on waste-to-wealth generation.

The State Cabinet approved the renaming of the Official Language Commission as the "Mandali Venkata Krishna Rao Official Language Commission" in recognition of Mandali Venkata Krishna Rao's key role in establishing the commission and formulating its objectives.

**Courtesy:** Indian Express, dated:22.08.2025

# ಭಾಗ–8

# ಅಂತರಾಷ್ಟ್ರೀಯ ಸುದ್ದಿಗಳು

## 1. Global South’s voice key to contemporary world’s progress: PM

Progress in the contemporary world will not be possible without giving a voice to the Global South, Prime Minister Narendra Modi said on dated:03.07.2025 while addressing a joint session of Ghana's Parliament in its capital Accra.

Mr. Modi, who received Ghana's highest state honour 'The Officer of the Order of the Star of Ghana', quoted the country's founding father Kwame Nkrumah, who said Africa and India are connected by "intrinsic" forces.

"The world order created after the Second World War is changing fast… the rise of the Global South, and the shifting demographics are contributing to its pace and scale. Challenges that humanity has faced in earlier centuries still persist in different forms," Mr. Modi said.

The Prime Minister described the state honour that he received as the "symbol of enduring friendship between India and Ghana, which has been a priority of India's ties with Africa since the early days of decolonisation in the 1950s.

"Progress cannot come without giving voice to the Global South," he emphasised, listing "climate change, pandemics, terrorism, and cyber security" as the "new and complex crises" that are posing fresh challenges to the world. "The changing circumstances demand credible and effective reforms in global governance," the Prime Minister said, highlighting the inclusion of the African Union into the G-20.

"We put emphasis on Africa's rightful place at the global high table. We are proud that the African Union became a permanent member of the G-20 during our Presidency," Mr. Modi said.

Quoting Dr. Nkrumah, Mr. Modi said, "The forces that unite us are intrinsic and greater than the super imposed influences that keep us apart." India is a "pillar of strength in the world" that will stand "shoulder to shoulder" with Ghana as it pursues its developmental goals, he vowed.

This is the first speech by an Indian Prime Minister in Ghana's Parliament, with the special meeting being convened by the Speaker of the Ghanaian Parliament Alban Kingsford Sumana Bagbin, who had visited India in 2023. Mr. Modi appreciated Ghana's parliamentary system and expressed satisfaction over the formation of the Ghana. India Parliamentary Friendship Society.

**Courtesy:**The Hindu**,** dated:04.07.2025

## 2. ಮೋದಿಗೆ ಬ್ರೆಜಿಲ್‌ನ ಉನ್ನತ ನಾಗರಿಕ ಗೌರವ ಪ್ರದಾನ

ಬ್ರೆಜಿಲ್ ಪ್ರವಾಸ ಕೈಗೊಂಡಿರುವ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಅಲ್ಲಿನ ಅತ್ಯುನ್ನತ ನಾಗರಿಕ ಪ್ರಶಸ್ತಿಯನ್ನು ನೀಡಿ ದಿನಾಂಕ:08.07.2025ರಂದು ಗೌರವಿಸಲಾಗಿದೆ. ಬ್ರೆಜಿಲ್‌ನ ಅಧ್ಯಕ್ಷ ಲೂಯಿಜ್ ಇನಾಶಿಯೋ ಲೂಡಾ ಡ ಸಿಲ್ವಾ ಅವರು ಈ ಗೌರವವನ್ನು ಪ್ರದಾನ ಮಾಡಿದರು.

ಬ್ರೆಜಿಲ್‌ನ 'ದ ಗ್ರಾಂಡ್ ಕಾಲರ್ ಆಫ್ ದ ನ್ಯಾಷನಲ್ ಅವಾರ್ಡ್ ಆಫ್ ದ ಸದರ್ನ್ ಕ್ರಾಸ್' ಗೌರವ ಪಡೆದ ಬಳಿಕ ಮೋದಿಗೆ ದೊರೆತ ಅಂತಾರಾಷ್ಟ್ರೀಯ ಪ್ರಶಸ್ತಿಗಳ ಸಂಖ್ಯೆ 26ಕ್ಕೇರಿಕೆಯಾಗಿದೆ.

ಪ್ರಶಸ್ತಿ ಸ್ವೀಕರಿಸಿದ ಬಳಿಕ ಮಾತನಾಡಿದ ಮೋದಿ, 'ಬ್ರೆಜಿಲ್‌ನ ಅಧ್ಯಕ್ಷರಿಂದ ಈ ಉನ್ನತ ನಾಗರಿಕ ಗೌರವವನ್ನು ಸ್ವೀಕರಿಸಿದ್ದು, ಅತ್ಯಂತ ಹೆಮ್ಮೆಯ ಕ್ಷಣವಾಗಿದೆ. ಈ ಹೆಮ್ಮೆ ಕೇವಲ ನನ್ನದಲ್ಲ ಇದು 140 ಕೋಟಿ ಮಂದಿ ಭಾರತೀಯರದ್ದಾಗಿದೆ. ಹೀಗಾಗಿ ಭಾರತೀಯರ ಪರವಾಗಿ ನಾನು ಬ್ರೆಜಿಲ್‌ಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ' ಎಂದು ಹೇಳಿದ್ದಾರೆ.

ಭಾರತ ಮತ್ತು ಬ್ರೆಜಿಲ್ ನಡುವಿನ ಸಂಬಂಧ ಫುಟ್ಬಾಲ್‌ನಂತೆ ವೈವಿಧ್ಯಮಯವಾಗಿರಬೇಕು ಎಂದು ನಾನು ಬಯಸುತ್ತೇನೆ. ಹೀಗಾಗಿ ಉಭಯ ದೇಶಗಳ ಜನರು ಅದರಲ್ಲೂ ಮುಖ್ಯವಾಗಿ ವಿದ್ಯಾರ್ಥಿಗಳು ನೇರವಾಗಿ ಸಂಪರ್ಕಕ್ಕೆ ಬರುವಂತೆ ಮಾಡಲು ಕೈಗೊಳ್ಳಬೇಕಾದ ಕೆಲಸಗಳನ್ನು ನಾವು ಮಾಡುತ್ತೇವೆ ಎಂದು ಅವರು ಹೇಳಿದರು.

**ಆಧಾರ:**ಉದಯವಾಣಿ, ದಿನಾಂಕ:09.07.2025

## 3. ಜಗತ್ತಿನ ವಿಶ್ವಾಸಾರ್ಹ ನಾಯಕರಲ್ಲಿ ಪ್ರಧಾನಿ ನರೇಂದ್ರ ಮೋದಿ ನಂ.1

ಪ್ರಧಾನಿ ನರೇಂದ್ರ ಮೋದಿ ಅವರು ಜಾಗತಿಕ ಮಟ್ಟದಲ್ಲಿ ಅತ್ಯಂತ ವಿಶ್ವಾಸಾರ್ಹ ನಾಯಕರ ಪೈಕಿ ಅಗ್ರಗಣ್ಯರಾಗಿ ಹೊರಹೊಮ್ಮಿದ್ದಾರೆ. ಅಮೆರಿಕದ ಮಾರ್ನಿಂಗ್ ಕನ್ಸಲ್ಟ್ ಸಂಸ್ಥೆ ನಡೆಸಿದ ಗ್ಲೋಬಲ್ ಲೀಡರ್ ಅಪ್ರೂವಲ್ ರೇಟಿಂಗ್ ಸಮೀಕ್ಷೆಯಲ್ಲಿ ಮೋದಿ ನಂ.1 ಸ್ಥಾನದಲ್ಲಿದ್ದರೆ, ಅಮೆರಿಕ ಅಧ್ಯಕ್ಷ ಟ್ರಂಪ್ ಭಾರಿ ಹಿನ್ನಡೆ ಕಂಡಿದ್ದಾರೆ. ಮೋದಿ ಶೇ.75 ಮತಗಳೊಂದಿಗೆ ಮೊದಲ ಸ್ಥಾನದಲ್ಲಿದ್ದರೆ, ಶೇ.59 ಮತಗಳೊಂದಿಗೆ ದಕ್ಷಿಣ ಕೊರಿಯಾ ಅಧ್ಯಕ್ಷ ಲೀ ಜೆ–ಮ್ಯುಂಗ್ 2ನೇ ಸ್ಥಾನದಲ್ಲಿದ್ದಾರೆ. ಶೇ.57 ಮತಗಳೊಂದಿಗೆ ಅರ್ಜೆಂಟೀನಾ ಅಧ್ಯಕ್ಷ ಜೇವಿಯರ್ ಮಿಲಿ 3ನೇ ಸ್ಥಾನದಲ್ಲಿದ್ದಾರೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಶೇ.44 ಮತಗಳೊಂದಿಗೆ 8ನೇ ಸ್ಥಾನದಲ್ಲಿದ್ದಾರೆ. ಜುಲೈ 4ರಿಂದ 10ರವರೆಗೆ ಸಮೀಕ್ಷೆ ನಡೆಸಲಾಗಿತ್ತು. ಮೋದಿ ಅವರು 2021ರಿಂದ 24ರವರೆಗಿನ ಸಮೀಕ್ಷೆಯಲ್ಲೂ ಟಾಪ್ ನಾಯಕರಾಗಿ ಹೊರಹೊಮ್ಮಿದ್ದರು.

**ಆಧಾರ:**ವಿಜಯ ಕರ್ನಾಟಕ, ದಿನಾಂಕ:27.07.2025

## 4. ಎಸ್‌ಸಿಒದಲ್ಲಿ ಭಾರತ ವಿಕ್ರಮ

ಶಾಂಘೈ ಸಹಕಾರ ಸಂಸ್ಥೆಯಲ್ಲಿ ಪಹಲ್ಗಾಮ್ ಭಯೋತ್ಪಾದಕ ದಾಳಿಯನ್ನು ಖಂಡನೆ ವ್ಯಕ್ತವಾಗಿರುವುದರಿಂದ ಭಾರತ ಮತ್ತೊಮ್ಮೆ ವಿದೇಶ ನೆಲದಲ್ಲಿ ವಿಕ್ರಮ ಸಾಧಿಸಿದೆ. ಪಹಲ್ಗಾಮ್ ಭಯೋತ್ಪಾದಕರ ಕೃತ್ಯದ ಕುರಿತು ಜಂಟಿ ಹೇಳಿಕೆಯಲ್ಲಿ ಖಂಡಿಸಲಾಗಿದೆ.

2 ತಿಂಗಳ ಹಿಂದೆ ಅಂದರೆ ಜೂನ್ 26ರಂದು ಚೀನಾದ ಕ್ವಿಂಗ್‌ಡಾವೋ ನಗರದಲ್ಲಿ ನಡೆದಿದ್ದ ಎಸ್‌ಸಿಒ ರಕ್ಷಣಾ ಸಚಿವರ ಸಭೆಯ ಜಂಟಿ ಘೋಷಣೆಯಲ್ಲಿ ಪಹಲ್ಗಾಮ್ ದಾಳಿಯನ್ನು ಖಂಡಿಸದಿರುವುದಕ್ಕಾಗಿ ಭಾರತದ ಸಚಿವ ರಾಜನಾಥ್ ಸಿಂಗ್ ಅದಕ್ಕೆ ಸಹಿ ಹಾಕಿರಲಿಲ್ಲ. ಆದರೀಗ ಅದೇ

ಭಯೋತ್ಪಾದಕ ದಾಳಿಯನ್ನು ಖಂಡಿಸಿರುವುದು ರಾಜತಾಂತ್ರಿಕವಾಗಿ ಭಾರತಕ್ಕೆ ಸಿಕ್ಕ ಅತಿದೊಡ್ಡ ರಾಜತಾಂತ್ರಿಕ ಗೆಲುವಾಗಿದೆ.

ಭಾರತದಲ್ಲಿ ಬಹಳ ಸಮಯದಿಂದ ಭಯೋತ್ಪಾದನೆಗೆ ಬೆಂಬಲ ನೀಡುತ್ತಿರುವ ಪಾಕ್ ಪ್ರಧಾನಿ ಶೆಹಬಾಜ್ ಷರೀಫ್ ಎಸ್‌ಸಿಒ ಶೃಂಗಸಭೆಯಲ್ಲಿ ಉಪಸ್ಥಿತರಾಗಿದ್ದಾಗಲೇ ಪಹಲ್ಗಾಮ್ ದಾಳಿಯನ್ನು ಖಂಡಿಸಿದ ಜಂಟಿ ಘೋಷಣೆ ಹೊರಬಿದ್ದಿದೆ.

ಅದಕ್ಕೂ ಮೊದಲು ಪ್ರಧಾನಿ ಮೋದಿ, ಭಯೋತ್ಪಾದನೆ ಕುರಿತು ದ್ವಿಮುಖ ನೀತಿಗಳು ಸ್ವೀಕರಾರ್ಹವಲ್ಲ. ಎಸ್‌ಸಿಒ ಸದಸ್ಯ ದೇಶಗಳು ಇಂಥ ಧೋರಣೆಯನ್ನು ಏಕತ್ರವಾಗಿ ಖಂಡಿಸಬೇಕು ಎಂದು ಆಗ್ರಹಿಸಿದ್ದರು. ಪಹಲ್ಗಾಮ್ ದಾಳಿ ಕೇವಲ ಭಾರತದ ಆತ್ಮಕ್ಕೆ ಮಾತ್ರವಲ್ಲದೇ ಮಾನವೀಯತೆಯನ್ನು ನಂಬುವ ಪ್ರತಿಯೊಂದು ದೇಶಕ್ಕೂ ಬಹಿರಂಗವಾಗಿ ಸವಾಲಾಗಿದೆ ಎಂದವರು ದೂಷಿಸಿದರು.

ಪ್ರತಿಯೊಂದು ದೇಶದ ಅಭಿವೃದ್ಧಿಗೆ ಭದ್ರತೆ, ಶಾಂತಿ ಹಾಗೂ ಸ್ಥಿರತೆ ನಿರ್ಣಾಯಕ ಎಂದರು. ಅಭಿವೃದ್ಧಿಯ ಹಾದಿಯಲ್ಲಿ ಈಗ ಭಯೋತ್ಪಾದನೆ, ಪ್ರತ್ಯೇಕವಾದ ಹಾಗೂ ಮೂಲಭೂತವಾದ ತೊಡಕಾಗಿದೆ. ಭಯೋತ್ಪಾದನೆಯನ್ನು ಅದರ ಬಣ್ಣಗಳು ಹಾಗೂ ರೂಪಗಳಲ್ಲಿ ನಾವು ವಿರೋಧಿಸಬೇಕು. ಇದು ಮಾನವೀಯತೆಯ ದೃಷ್ಟಿಯಿಂದ ನಮ್ಮ ಜವಾಬ್ದಾರಿಯಾಗಿದೆ ಎಂದೂ ಹೇಳಿದರು. ಪ್ರಧಾನಿ ಮೋದಿ ಬಳಸಿದ ಪದಗಳೇ ಟಿಯಾಂಜಿನ್ ಜಂಟಿ ಘೋಷಣೆಯಲ್ಲೂ ಕಂಡುಬಂದವು.

ಇದಕ್ಕೂ ಮುನ್ನ ಶೃಂಗಸಭೆಯಲ್ಲಿ ಯುರೋಷಿಯಾದ ಶಕ್ತಿಗಳಾದ ಭಾರತ, ರಷ್ಯಾ ಹಾಗೂ ಚೀನಾ ದೇಶಗಳ ಶಕ್ತಿ ಹಾಗೂ ಏಕತೆಯ ಪ್ರದರ್ಶನ ನಡೆಯಿತು. ಪ್ರಧಾನಿ ಮೋದಿ, ರಷ್ಯಾ ಅಧ್ಯಕ್ಷ ವ್ಲಾದಿಮೀರ್ ಪುಟಿನ್ ಹಾಗೂ ಚೀನಾ ಪ್ರಧಾನಿ ಜಿನ್ಪಿಂಗ್ ಅವರ ನಗು, ಅಪ್ಪುಗೆ ಹಾಗೂ ಹಸ್ತಲಾಘವ ವಿನಿಮಯ ಪ್ರಮುಖವಾಗಿ ಪ್ರತಿಬಿಂಬಿತವಾದವು. ಪ್ರಧಾನಿ ಮೋದಿ ಹಾಗೂ ರಷ್ಯಾ ಅಧ್ಯಕ್ಷ ಪುಟಿನ್ ಕೈ–ಕೈ ಹಿಡಿದು ನಡೆದಿರುವುದು ಅಮೆರಿಕದ ಬೆದರಿಕೆಗಳಿಗೆ ಮಣಿಯುವುದಿಲ್ಲ ಎಂಬ ಸೂಚನೆ ನೀಡಿತು.

**ಆಧಾರ:**ಸಂಯುಕ್ತ ಕರ್ನಾಟಕ, ದಿನಾಂಕ:02.09.2025

## 5. ನೇಪಾಳದಲ್ಲಿ ಸಚಿವ ಸಂಪುಟ ವಿಸ್ತರಣೆ, ಮೂವರ ಸೇರ್ಪಡೆ

ನೇಪಾಳದಲ್ಲಿ ಸುಪ್ರೀಂ ಮುಖ್ಯ ನಿವೃತ್ತ ನ್ಯಾಯಮೂರ್ತಿ ಸುಶೀಲಾ ಕರ್ಕಿ ಅವರ ನೇತೃತ್ವದಲ್ಲಿ ಹೊಸದಾಗಿ ರಚನೆಯಾಗಿರುವ ಮಧ್ಯಂತರ ಸರಕಾರದ ಸಚಿವ ಸಂಪುಟ ದಿನಾಂಕ: 15.09.2025ರಂದು ವಿಸ್ತರಣೆಯಾಗಿದೆ. ಸಂಪುಟಕ್ಕೆ ಮೂವರು ಸಚಿವರ ಸೇರ್ಪಡೆಯಾಗಿದೆ.

ಕುಲ್ಮನ್ ಘೀಸಿಂಗ್, ಓಂ ಪ್ರಕಾಶ್ ಆರ್ಯಲ್ ಮತ್ತು ರಾಮೇಶ್ವರ್ ಖನಾಲ್ ಕಠ್ಮಂಡುವಿನಲ್ಲಿ ರಾಷ್ಟ್ರಾಧ್ಯಕ್ಷರ ಭವನ ಸಿತಲ್ ನಿವಾಸ್‌ನಲ್ಲಿ ನೂತನ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು. ರಾಮೇಶ್ವರ್ ಖನಾಲ್ ಹಣಕಾಸು ಸಚಿವರಾಗಿ ಅಧಿಕಾರ ವಹಿಸಿಕೊಂಡಿದ್ದಾರೆ. ಕುಲ್ಮನ್ ಘೀಸಿಂಗ್ ಅವರಿಗೆ ಇಂಧನ, ನಗರಾಭಿವೃದ್ಧಿ ಮತ್ತು ಭೌತಿಕ ಮೂಲ ಸೌಕರ್ಯ ಸಚಿವಾಲಯ ಜವಾಬ್ದಾರಿ ನೀಡಲಾಗಿದ್ದರೆ, ಓಂ ಪ್ರಕಾಶ್ ಆರ್ಯಲ್ ಅವರಿಗೆ ಕಾನೂನು ಮತ್ತು ಗೃಹ ವ್ಯವಹಾರಗಳ ಹೊಣೆ ವಹಿಸಿಕೊಡಲಾಗಿದೆ.

ಕುಲ್ಮನ್ ಘೀಸಿಂಗ್ ನೇಪಾಳ ವಿದ್ಯುತ್ ಪ್ರಾಧಿಕಾರದ ಮಾಜಿ ವ್ಯವಸ್ಥಾಪಕ ನಿರ್ದೇಶಕ. ನೇಪಾಳದಲ್ಲಿ ಪದೇ ಪದೇ ವಿದ್ಯುತ್ ಕಡಿತವಾಗುವುದನ್ನು ತಪ್ಪಿಸಿ ಪರಿವರ್ತನಾತ್ಮಕ ಇಂಧನ ಸುಧಾರಣೆಗಳನ್ನು ತಂದವರು. ಮುಂದಿನ ದಶಕದಲ್ಲಿ 10,000 ಮೆಗಾವ್ಯಾಟ್ ವಿದ್ಯುತ್ ವಿನಿಮಯ ಗುರಿಯಾಗಿರಿಸಿಕೊಂಡು ಭಾರತ–ನೇಪಾಳ ಇಂಧನ ವ್ಯಾಪಾರ ಒಪ್ಪಂದವನ್ನು ಸುಗಮಗೊಳಿಸಿದವರು. ಓಂ ಪ್ರಕಾಶ್ ಆರ್ಯಲ್ ಅವರು ನೇಪಾಳದ ಸುಪ್ರೀಂ ಕೋರ್ಟ್ ವಕೀಲರು. ಸುಶೀಲಾ ಕರ್ಕಿ ಅವರ ಆಪ್ತ ಸಹಾಯಕರಾಗಿದ್ದವರು. ಕಾನೂನು ಚಟುವಟಿಕೆಗೆ ಹೆಸರುವಾಸಿ. ಹಿಂದಿನ ಸರಕಾರಗಳ ವಿರುದ್ಧ 50ಕ್ಕೂ ಹೆಚ್ಚು ಅರ್ಜಿಗಳನ್ನು ಸಲ್ಲಿಸಿದ್ದರು. ಪಾರದರ್ಶಕತೆ ಮತ್ತು ನ್ಯಾಯಕ್ಕಾಗಿ ಹೋರಾಡುವವರು ಎಂದೇ ಹೆಸರಾಗಿದ್ದಾರೆ. ಆರ್ಯಲ್ ಕಠ್ಮಂಡು ಮೇಯರ್ ಬಲೇಂದ್ರ ಷಾ ಅವರ ಸಲಹೆಗಾರರೂ ಆಗಿದ್ದಾರೆ.

**ಆಧಾರ:**ವಿಶ್ವವಾಣಿ, ದಿನಾಂಕ:16.09.2025

## 6. ಎಚ್–1ಬಿ ವೀಸಾ ಶುಲ್ಕ 1 ಲಕ್ಷ ಡಾಲರ್‌ಗೆ ಹೆಚ್ಚಳ

ವಿವಿಧ ದೇಶಗಳ ಜನರನ್ನು ನೇಮಕ ಮಾಡಿಕೊಳ್ಳುವ ಅಮೆರಿಕದ ಕಂಪನಿಗಳು ತಮ್ಮ ಉದ್ಯೋಗಿಗಳಿಗಾಗಿ ಪಡೆಯುವ ಎಚ್–1ಬಿ ವೀಸಾ ಅರ್ಜಿಗೆ ಸಂಬಂಧಿಸಿದ ವಾರ್ಷಿಕ ಶುಲ್ಕವನ್ನು 1ಲಕ್ಷ ಡಾಲರ್‌ಗೆ (ಅಂದಾಜು ₹88 ಲಕ್ಷ) ಹೆಚ್ಚಿಸುವ ಆದೇಶಕ್ಕೆ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ದಿನಾಂಕ:19.09.2025ರಂದು ಸಹಿ ಹಾಕಿದ್ದಾರೆ.

ಈ ಆದೇಶವು, ಭಾರತೀಯ ಕಾಲಮಾನದಂತೆ ದಿನಾಂಕ:22.09.2025ರಂದು ಬೆಳಿಗ್ಗೆ 9.31ರಿಂದ ಜಾರಿಗೆ ಬರಲಿದೆ. ಚಾಲ್ತಿಯಲ್ಲಿ ಇರುವವರಿಗೆ ಅನ್ವಯಿಸದು: 'ಪರಿಷ್ಕೃತ ನಿಯಮವು ಮಾನ್ಯತೆ ಹೊಂದಿದ ಎಚ್–1ಬಿ ವೀಸಾ ಹೊಂದಿರುವವರಿಗೆ ಅನ್ವಯ ಆಗುವುದಿಲ್ಲ' ಎಂದು ಶ್ವೇತಭವನ ಸ್ಪಷ್ಟಪಡಿಸಿರುವುದಾಗಿ 'ಅಕ್ಸಿಯೊಸ್' ವರದಿ ಮಾಡಿದೆ.

ಹೊಸ ಶುಲ್ಕವು ಈಗಾಗಲೇ ಎಚ್–1ಬಿ ವೀಸಾ ಹೊಂದಿರುವವರ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ ಎಂದು ವರದಿಯಲ್ಲಿ ಅದು ತಿಳಿಸಿದೆ. ಅಮೇರಿಕಕ್ಕೆ ಮರಳಲು ಯಾವುದೇ ಸಮಸ್ಯೆಯಿಲ್ಲ. ವೀಸಾ ನವೀಕರಿಸುವವರಿಗೂ ಯಾವುದೇ ತೊಂದರೆಯಿಲ್ಲ ಎಂದು ವರದಿಯಲ್ಲಿ ತಿಳಿಸಲಾಗಿದೆ.

ಮುಂದಿನ ದಿನಗಳಲ್ಲಿ ಲಾಟರಿ ಮೂಲಕ ಆಯ್ಕೆಯಾಗುವ ಎಚ್–1ಬಿ ವೀಸಾ ಅರ್ಜಿದಾರರಿಗೆ ಮಾತ್ರ ಪರಿಷ್ಕೃತ ಶುಲ್ಕ ಅನ್ವಯವಾಗಲಿದೆ' ಎಂದು ಸ್ಪಷ್ಟಪಡಿಸಿದೆ. ಇತರ ದೇಶಗಳಿಂದ ಅಮೇರೀಕಕ್ಕೆ ಬರುವ ಜನರು ಅಧಿಕ ಕೌಶಲ ಉಳ್ಳವರಾಗಿರಬೇಕು ಹಾಗೂ ಈ ವೀಸಾ ಪಡೆದು ಬರುವವರಿಂದಾಗಿ ಸ್ಥಳೀಯರು ತಮ್ಮ ಉದ್ಯೋಗ ಕಳೆದುಕೊಳ್ಳುವುದಿಲ್ಲ ಎಂಬುದನ್ನು ಖಾತ್ರಿಪಡಿಸುವ ಉದ್ದೇಶದಿಂದ ಈ ಕ್ರಮಕೈಗೊಳ್ಳಲಾಗಿದೆ' ಎಂದು ಟ್ರಂಪ್ ಆಡಳಿತ ಹೇಳಿದೆ.

ಟ್ರಂಪ್ ಅವರ ಈ ನಡೆಯು, ಉದ್ಯೋಗ ವೀಸಾ ಪಡೆದು ಅಮೇರಿಕದಲ್ಲಿ ಕಾರ್ಯನಿರ್ವಹಿಸುತ್ತಿರುವ ಭಾರತೀಯರು, ಅದರಲ್ಲೂ ವಿಶೇಷವಾಗಿ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ದುಡಿಯುತ್ತಿರುವವರ ಮೇಲೆ ಭಾರಿ ಪರಿಣಾಮ ಬೀರಲಿದೆ.

ಎಚ್–1ಬಿ ವೀಸಾ ಸೌಲಭ್ಯದ ಪ್ರಯೋಜನ ಪಡೆಯಲು ಬಯಸುವ ಕಂಪನಿಗಳ ಮೇಲೆ ಅಧಿಕ ವೆಚ್ಚ ಹೇರುವುದು ಅಗತ್ಯವಾಗಿದೆ. ಈ ಮೂಲಕ, ಅವುಗಳು ಈ ವೀಸಾ ಸೌಲಭ್ಯ ದುರ್ಬಳಕೆ ಮಾಡದಂತೆ ತಡೆಯಬಹುದಾಗಿದೆ' ಎಂದು ಟ್ರಂಪ್ ಹೇಳಿದ್ದಾರೆ.

**ಆಧಾರ:**ಪ್ರಜಾವಾಣಿ, ದಿನಾಂಕ:21.09.2025

# ಭಾಗ–9

# ಪ್ರಮುಖ ಲೇಖನಗಳು

## 1. The free fall of moral leadership

In an era of global conflicts and democratic decline, the question of political leadership in the democratic world has acquired a heightened significance. Intensified rivalries in several parts of the world represent a failure of leadership. The unconscionable ambivalence of world leaders in standing up for principle over expedience, and their abject sarvender to hegemonic power, speaks for itself. The tragedies of Ukraine, Gaza, and the Israael-Iran conflict show the ravages of war caused by the insolence of power, untamed by bumanitarian interdicts.

Despite the fragile ceasefire brokered by US President Donald Trump from a position of overarching military superiority, the footprints of these hostilities will remain visible symbols of an oppressive exercise of military power that has taken thousands of innocent lives. Those responsible for the catastrophe have clearly forgetten the absiding lesson of history that people carrying a Bestecing wound in their souls find chature only when injustice is avenged. Lasting peace in West Asia will remain hostage to an Indelible sense of injustice and moral outrage

It is, therefore, imperative to foster leadership that values Justice above raw power. In the deeply distressing trans border conflicts that have driven the world perilously close to a global war, the moral and intellectual impoverishment of the principal actors has raised concerns about the failure of contemporary democracies to yield inspiring Leadership, answerable to the 'injuction of conscience'. The pretence of a functional rules based International order helmed by the United Nations charter stands demolished yet again, reconfirming the impotence of International law in outlawing the use of force in relations between nations. The legal invasion of Iraq and parts of Ukraine are no more than footnotes of history.

But there are lesson to be learned. The world needs loadeeship, driven by a search for global consensus and subject to the discipline of international law to address the defining challenges of our times, including the settlement of territorial disputes. This is a particularly important reminder for those who claim to lead the democratic world and propound the necessity of a credible international legal order. Democratic leadership is about walking alone in defence of principle, where necessary. It is about holding on to the truth against all odds and empowering the weak. It is about uniting people in trying times and advancing human dignity by removing disparities. Inspirational leadership is about an unremitting endeavour to create favourable conditions of social and political existence that can optimise the realisation of human potential in an environment of peace and harmony. And as shown in the tortuous process of securing a fragile truce between Israel and Iran, deceit and two-facedness annul leadership

Leadership does not emerge out of a vacuum. As Karl Marx reminded us famously, "Men make their own history, but they do not make it as they please... (they do so) under circumstances existing already, given and transmitted from the past. The French statesman Chateaubriand proclaimed that 'the leader of the nation must be the leader of the times', so that his exertions mirror the aspirations of the people and invest politics with a moral purpose larger than himself. The current global conflicts present an opportunity for democracies to look inwards for correction and to reinforce their appeal.

Indian democracy, which has survived several vicissitudes and a ‘thousand mutinies', has been enriched by the exertions and selflessness of several of its towering leaders. They were led by Mahatma Gandhi, who defined for us the meaning of transformative leadership. The Mahatma's promise of polities impervious to the trappings of power and rooted instead in the moral imagination of the people yearning for freedom and dignity, enabled him to forge a sustainable non-violent struggle against Injustice. He accomplished the "will of his age', defined it for the people, and personified it.

As a proud inheritor of the Gandhian legacy of morality-driven politics and drawing strength from its civilisational ethos of Vasudhaiva Katumbham, India must stand out in defence of justice everywhere. It must flex its moral muscle for shaping a just world order. Its economic heft, nuclear capabilities, and regional power status should enable India to espouse international morality without compromising its strategic autonomy or without allenating key allies.

In these defying times, we must summon our tallest leaders to collectively energise Indian democracy. They must establish the exceptionality of their leadership in the service of national goals and global peace. Our leaders must reinforce the tone of modesty, Introduce dignity at the centre of political processes, revive the spirit of collegiality, be seen as symbols of hope in times of fracture and fear, and re-purpose their politics beyond the pursuit of row power.

At this juncture of the nation's history, when domestic and external challenges threaten the social accord and disruptive shifts in the power pendulum are testing the societal equilibrium, we need leadership that is strong and compassionate, resolute but conciliatory, and decisive whole striving for democratic consensus on critical issues.

Author: Ashwani Kumar: Former Law Minister

**Courtesy:**The Hindu, dated:8.07.2025

## 2. ಕುಶಲಾಧಾರಿತ ಉದ್ಯೋಗ ಸೃಷ್ಟಿಯತ್ತ ಇಂದಿನ ನವ ಭಾರತ

ಭಾರತದ ಉದ್ಯೋಗ ಕ್ಷೇತ್ರವು ಕಳೆದ ನೂರು ವರ್ಷಗಳಲ್ಲಿ ವಿಭಿನ್ನ ಮತ್ತು ವ್ಯಾಪಕ ಬದಲಾವಣೆ ಕಂಡಿದೆ. ಬ್ರಿಟಿಷ್ ಆಡಳಿತದಿಂದ ಹಿಡಿದು ಇಂದಿನ ಡಿಜಿಟಲ್ ಆಧಾರಿತ ಆರ್ಥಿಕತೆಯವರೆಗೆ ಉದ್ಯೋಗ, ಉದ್ಯಮ ಕ್ಷೇತ್ರಗಳು ಹೊಸದೊಂದು ಆಯಾಮಕ್ಕೆ ತೆರೆದುಕೊಂಡಿವೆ. ಸರಕಾರದ ಜೊತೆಗೆ ಖಾಸಗಿ ವಲಯಗಳು ಹೆಚ್ಚು ಬೆಳವಣಿಗೆ ಕಾಣುತ್ತಿರುವುದು ಮತ್ತು ಕಾರ್ಮಿಕ ವಲಯ ಸಂಘಟಿತರಾಗುತ್ತಿರುವುದು ದುಡಿಯುವ ವರ್ಗದ ಸ್ವತಂತ್ರ ಮನೋಭಾವವನ್ನು ತೋರಿಸುತ್ತದೆ.

ಇದನ್ನು ಮೂರು ಪ್ರಮುಖ ಕಾಲಘಟ್ಟದಲ್ಲಿ ವಿಶ್ಲೇಷಿಸಬಹುದು. ಸ್ವಾತಂತ್ರಪೂರ್ವ ಕಾಲದ 1947ರ ಪರಿಸ್ಥಿತಿ ಗಮನಿಸಿದಾಗ, ಬಹುತೇಕ ಕೃಷಿ ಆಧಾರಿತ ಕ್ಷೇತ್ರದಲ್ಲಿ ಅಂದಿನ ಸಮಾಜ ತೊಡಗಿತ್ತು. ಅಸಂಘಟಿತ ವಲಯದ ಅತಿದೊಡ್ಡ ಕ್ಷೇತ್ರ ಕೃಷಿ ಕ್ಷೇತ್ರವಾಗಿತ್ತು. ಅಂದಿನ ಅಂಕಿ ಅಂಶಗಳನ್ನು ಅಂದಾಜು ಗಮನಿಸಿದಾಗ, ಒಟ್ಟು ದುಡಿಯುವ ವರ್ಗ 13 ಕೋಟಿಯಷ್ಟಿದ್ದು, ಕೃಷಿ ಉದ್ಯೋಗದಲ್ಲಿಯೇ ಶೇ.70ರಿಂದ 75ರಷ್ಟು ಪಾಲಿರುತ್ತಿತ್ತು. ಬ್ರಿಟಿಷ್ ಆಡಳಿತ, ರೈಲ್ವೆ, ಅಂಚೆ, ಪೊಲೀಸ್ ಸೇವೆ ಸೇರಿದಂತೆ 20 ಲಕ್ಷಗಳಷ್ಟು ಸರ್ಕಾರಿ ಉದ್ಯೋಗಗಳು ಮತ್ತು ಬ್ರಿಟಿಷ್ ಮಾಲಿಕತ್ವದ ಕಾರ್ಖಾನೆಗಳು, ತೋಟಗಳಂತಹ ಖಾಸಗಿ ಉದ್ಯೋಗಗಳಿದ್ದವು. ಶೇ.90ಕ್ಕಿಂತ ಹೆಚ್ಚು ಅಸಂಘಟಿತ ವಲಯವಾಗಿಯೇ ದುಡಿಯುತ್ತಿತ್ತು.

1947ಕ್ಕೂ ಮೊದಲು, 12 ಕೋಟಿಯಷ್ಟು ಒಟ್ಟು ಉದ್ಯೋಗದಲ್ಲಿ, 20ಲಕ್ಷ ಸರ್ಕಾರಿ ಉದ್ಯೋಗ, ಅಷ್ಟಕ್ಕಷ್ಟೆ ಎಂಬಂತೆ ಖಾಸಗಿ ಉದ್ಯೋಗವಲಯವಿತ್ತು. 2013ಕ್ಕೂ ಪೂರ್ವದಲ್ಲಿ ಒಟ್ಟು 45 ಕೋಟಿ ಉದ್ಯೋಗಗಳಲ್ಲಿ, ಒಂದೂವರೆ ಕೋಟಿ ಸರ್ಕಾರಿ ಉದ್ಯೋಗಗಳು, 2 ಕೋಟಿಯಷ್ಟು ಖಾಸಗಿ ಉದ್ಯೋಗಗಳ ಜೊತೆಗೆ ಅಸಂಘಟಿತ ಉದ್ಯೋಗಗಳು ಚಾಲ್ತಿಯಲ್ಲಿದ್ದವು. 2024–25ಕ್ಕೆ ಒಟ್ಟು 55 ಕೋಟಿಯಷ್ಟು ಉದ್ಯೋಗಗಳಲ್ಲಿ, 2 ಕೋಟಿಯಷ್ಟು ಸರ್ಕಾರಿ, 5 ಕೋಟಿಯಷ್ಟು ಖಾಸಗಿ ಉದ್ಯೋಗ ವಲಯದ ಜೊತೆಗೆ ಅಸಂಘಟಿತ ಕಾರ್ಮಿಕ ವಲಯದಲ್ಲಿ ಗಣನೀಯ ಇಳಿಕೆಯಾಗಿದ್ದು ವಿಶೇಷ.

ಕೇಂದ್ರದಲ್ಲಿ 2014ರ ನವೆಂಬರ್ 9ರಂದು ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮೋದ್ಯಮ ಮಂತ್ರಾಲಯ ರಚನೆಯಾದ ಮೇಲೆ, ಯುವಜನತೆಗೆ ಅಗತ್ಯವಿರುವ ಮತ್ತು ಪಾರಂಪರಿಕ ಕೌಶಲ್ಯ ಗಳನ್ನು ಇದರಡಿಯಲ್ಲಿ ತಂದು ರಾಷ್ಟ್ರಮಟ್ಟದಲ್ಲಿ ಜಾರಿಗೊಳಿಸಲಾಯಿತು. ಭಾರತವು ವಿಶ್ವದ ಅತಿದೊಡ್ಡ ಯುವಜನಸಂಖ್ಯೆ ಹೊಂದಿರುವ ರಾಷ್ಟ್ರವಾಗಿದೆ. ಇದು ದೇಶದ ಭವಿಷ್ಯಕ್ಕಾಗಿ ಬಹುದೊಡ್ಡ ಸಂಪತ್ತು ಎನಿಸಿದ್ದರೂ, ನಿರುದ್ಯೋಗದ ಸಮಸ್ಯೆ ತೀವ್ರವಾಗಿದೆ. ಪ್ರತಿವರ್ಷ ಲಕ್ಷಾಂತರ ಯುವಕರು ಉದ್ಯೋಗ ಮಾರುಕಟ್ಟೆಗೆ ಪ್ರವೇಶಿಸುತ್ತಾರೆ. ಬಹುಪಾಲು ಮಂದಿ ನಿರುದ್ಯೋಗಿಗಳಾಗಿಯೇ ಉಳಿಯುತ್ತಾರೆ. ಈ ಸಮಸ್ಯೆಗೆ ಪ್ರಮುಖ ಪರಿಹಾರವೆಂದರೆ ಕೌಶಲ್ಯಾಭಿವೃದ್ಧಿ,

ನಿರುದ್ಯೋಗದಿಂದ ಜಾಗತಿಕ ಕಾರ್ಯಶಕ್ತಿಯತ್ತ ಯುವಕರನ್ನು ಉತ್ತಮ ಕುಶಲ ಉದ್ಯೋಗಿಗಳನ್ನಾಗಿ ಮಾಡಲು ಕೌಶಲ್ಯ ಆಧಾರಿತ ತರಬೇತಿ, ಮಾರ್ಗದರ್ಶನದ ಕೊರತೆ ಎದ್ದು ಕಾಣುತ್ತಿತ್ತು. ಇದನ್ನು ಹೋಗಲಾಡಿಸಲು, MSDE ಕಾರ್ಯತತ್ಪರವಾಯಿತು. ಇದು ದೇಶದ ಒಳಗಿನ ಉದ್ಯೋಗಾವಕಾಶಗಳಷ್ಟೇ ಅಲ್ಲದೆ ವಿದೇಶಗಳಲ್ಲಿಯೂ ಉದ್ಯೋಗ ಅವಕಾಶಗಳನ್ನು ನೀಡುತ್ತದೆ.

ದೇಶದಲ್ಲಿ, ಒಂದು ಕಡೆ ಲಕ್ಷಾಂತರ ನಿರುದ್ಯೋಗಿ ಯುವಕರು ಇದ್ದಾರೆ, ಮತ್ತೊಂದೆಡೆ ಕೈಗಾರಿಕೆಗಳಿಗೆ ಬೇಕಾದ ತರಬೇತಿದಾರರು ಲಭ್ಯವಿಲ್ಲ. ಇದಕ್ಕೆ, ಶಿಕ್ಷಣ ಹಾಗೂ ಕೈಗಾರಿಕಾ ಅಗತ್ಯಗಳ ನಡುವೆ ಹೊಂದಾಣಿಕೆಯ ಕೊರತೆ, ವೃತ್ತಿಪರ ಅಥವಾ ಪ್ರಾಯೋಗಿಕ ಕೌಶಲ್ಯದ ಅಭಾವ, ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗಾವಕಾಶಗಳ ಕೊರತೆ, ಕೆಲಸಕ್ಕೆ ಬೇಕಾದ ಕೌಶಲ್ಯದ ಕೊರತೆಯಂತಹ ಪ್ರಮುಖ ಕಾರಣಗಳೆಂದು ಗುರುತಿಸಲಾಯಿತು.

NSO (National Statistics Office) ಪ್ರಕಾರ, ದೇಶದಲ್ಲಿ ಶೇ.5.6ರಷ್ಟು ನಿರುದ್ಯೋಗ ಸಮಸ್ಯೆ ಇದೆ. ಅಂದರೆ, ಹೆಚ್ಚು ಕಡಿಮೆ 20 ಕೋಟಿ ಜನಸಂಖ್ಯೆಗೆ ಉದ್ಯೋಗದ ಅಗತ್ಯವಿದೆ. ಗ್ರಾಮೀಣ ಪ್ರದೇಶದಲ್ಲಿ ಶೇ.4.9ರಷ್ಟಿದ್ದರೆ, ನಗರಪ್ರದೇಶಗಳಲ್ಲಿ ಶೇ.7ರಷ್ಟಿದೆ. ನಿರುದ್ಯೋಗ ಪುರುಷರ ಸಂಖ್ಯೆ ಶೇ.5.6ರಷ್ಟಿದ್ದರೆ, ಮಹಿಳೆಯರಲ್ಲಿ ಶೇ.5.6 ಇದೆ. ಇನ್ನು, ಜಗತ್ತಿನಾದ್ಯಂತ 205 ಮಿಲಿಯನ್ ಸಮಸ್ಯೆಯಿದೆಂದು ವರದಿ ಹೇಳುತ್ತದೆ.

ತಂತ್ರಜ್ಞಾನ, ಮಾನವ ಕೌಶಲ್ಯಗಳ ಮೇಲೆ ಆಧಾರಿತವಾಗಿರುವ ನಿರ್ಮಾಣ, ಆರೋಗ್ಯ ಸೇವೆ (ನರ್ಸಿಂಗ್, ಪ್ಯಾರಾಮೆಡಿಕ್), ಐಟಿ–ಡಿಜಿಟಲ್ ಸೇವೆಗಳು, ಆತಿಥ್ಯವಲಯ (hospitality),ತಯಾರಿಕೆ ಮತ್ತು ಲಾಜಿಸ್ಟಿಕ್ಸ್‌ನಂತಹ ಕ್ಷೇತ್ರಗಳಿಗೆ ಕೌಶಲ್ಯ ಆಧಾರಿತ ಉದ್ಯೋಗಕ್ಕೆ ಹೆಚ್ಚು ಮಹತ್ವ ನೀಡಲಾಯಿತು. ಸ್ಕಿಲ್ ಇಂಡಿಯಾ ಪ್ರೋಗ್ರಾಂ (MSDE) ಮೂಲಕ 2022ರಿಂದ 2025ರವರೆಗೆ 9 ಸಾವಿರ ಕೋಟಿ ಅನುದಾನ ನೀಡಿ PMKVY-4.0. PM NAPS ಮೂಲಕ 3 ಕೋಟಿ ಜನರಿಗೆ ಲಾಭವಾಗುವಂತೆ ನೋಡಿಕೊಳ್ಳಲಾಗಿದೆ ಎಂಬುದು ಮಾಹಿತಿ. ಇದರಲ್ಲಿ Al, ಸೈಬರ್ ಸೆಕ್ಯುರಿಟಿ, ಹಸಿರು ಹೈಡ್ರೋಜನ್, ಡ್ರೋನ್, 5G ಸೇರಿದಂತೆ 400ಕ್ಕೂ ಅಧಿಕ ಹೊಸ ತರಬೇತಿ ಕೋರ್ಸ್‌ಗಳು ಸೇರಿಸಲಾಗಿದೆ.

ಕೇಂದ್ರ ಸರ್ಕಾರದ ಕೌಶಲ್ಯಾಭಿವೃದ್ಧಿ ಯೋಜನೆಗಳು ಸಹ ಉದ್ಯೋಗಿಗಳಿಗೆ ಸಹಾಯಕವಾಗಿ ನಿಂತವು. ಪ್ರಧಾನ ಮಂತ್ರಿ ಕೌಶಲ್ಯ ವಿಕಾಸ ಯೋಜನೆ (PMKVY) ಮೂಲಕ ವಿವಿಧ ಕ್ಷೇತ್ರಗಳಲ್ಲಿ ಉಚಿತ ತರಬೇತಿ ನೀಡಿ ಸ್ಕಿಲ್ ಇಂಡಿಯಾ ಮಿಷನ್ ಯೋಜನೆಯಡಿ ಕೋಟ್ಯಾಂತರ ಯುವಕರಿಗೆ ತರಬೇತಿ ನೀಡುವ ಗುರಿ, ದೀನದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ (DDU-GKY), ಗ್ರಾಮೀಣ ಯುವಕರಿಗೆ ನ್ಯಾಷನಲ್ ಅಪ್ರೆಂಟಿಸ್ ಪ್ರೋತ್ಸಾಹ ಯೋಜನೆ (NAPS)ಗಳನ್ನು ಜಾರಿಗೆ ತರಲಾಯಿತು. ಕೇಂದ್ರ ಸರ್ಕಾರದ 15 ಸಚಿವಾಲಯಗಳಲ್ಲಿ 19 ಯೋಜನೆಗಳ ಮೂಲಕ 5ವರ್ಷಗಳಲ್ಲಿ 42ಲಕ್ಷ ಯುವಕರಿಗೆ ವಿವಿಧ ಕೌಶಲ್ಯಗಳ ಆಧಾರಿತ ನಿಗದಿತ ಸಮಯ ನೀಡಿ ತರಬೇತಿಗೊಳಿಸುವ ಮತ್ತು ಪೂರ್ಣ ಅನುಷ್ಠಾನಗೊಳಿಸಲು ಯೋಜನೆ ರೂಪಿಸಿದ್ದು, ಮುಂದಿನ 50ಲಕ್ಷಕ್ಕೂ ಅಧಿಕ ಜನರಿಗೆ ಉದ್ಯೋಗ ದೊರಕಿಸುವ ಯೋಜನೆಗೆ ಚಾಲನೆ ದೊರೆತಿದೆ.

ಪ್ರಧಾನಮಂತ್ರಿ ನರೇಂದ್ರಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಚಿವ ಸಂಪುಟ ಸಭೆಯು, ಎಲ್ಲಾ ವಲಯಗಳಲ್ಲಿ ಉದ್ಯೋಗ ಸೃಷ್ಟಿಯನ್ನು ಬೆಂಬಲಿಸಲು ಉದ್ಯೋಗಾವಕಾಶ ಮತ್ತು ಸಾಮಾಜಿಕ ಭದ್ರತೆಯನ್ನು ಹೆಚ್ಚಿಸಲು ಉದ್ಯೋಗ ವಲಯದ ಮೇಲೆ ವಿಶೇಷ ಗಮನ ಹರಿಸಲು ಉದ್ಯೋಗ ಸಂಬಂಧಿತ ಪ್ರೋತ್ಸಾಹಕ(ಇಎಲ್‌ಐ) ಯೋಜನೆಗೆ ಅನುಮೋದನೆ ನೀಡಿದ್ದು, 2025ರ ಆಗಸ್ಟ್ 1 ರಿಂದ 2027 ಜುಲೈ 31ರ ನಡುವೆ ಜಾರಿಯಾಗಲಿದೆ.

ಈ ಯೋಜನೆಯಡಿಯಲ್ಲಿ ಮೊದಲ ಬಾರಿಗೆ ಉದ್ಯೋಗಿಗಳು ಒಂದು ತಿಂಗಳ ವೇತನವನ್ನು (ರೂ.15,000/–ರವರೆಗೆ) ಪಡೆಯುತ್ತಾರೆ. ಹೊಸ ಉದ್ಯೋಗಿಗೆ ಮಾಸಿಕ ರೂ.3000ದಂತೆ ಎರಡು ವರ್ಷಗಳವರೆಗೆ ವೇತನ ಪ್ರೋತ್ಸಾಹಧನ ಮತ್ತು ಉತ್ಪಾದನಾ ವಲಯಕ್ಕೆ ಇನ್ನೂ ಎರಡು ವರ್ಷಗಳ ವರೆಗೆ ವಿಸ್ತೃತ ಪ್ರಯೋಜನ ನೀಡಲಾಗುತ್ತದೆ. ಇದಕ್ಕಾಗಿ, 1ಲಕ್ಷ ಕೋಟಿ ರೂ.ಗಳ ಯೋಜನೆ ರೂಪಿಸಿದ್ದು, 2.60ಕೋಟಿ ಉದ್ಯೋಗ ಸೃಷ್ಟಿಯ ಗುರಿ ಹೊಂದಿದೆ. ಐಟಿಐ ಹಾಗೂ ನ್ಯಾಷನಲ್ ಸ್ಕಿಲ್ ಟ್ರೈನಿಂಗ್ ಇನ್ಸ್ಟಿಟ್ಯೂಟ್ (NSTI)ಗಳ ನವೀಕರಣಕ್ಕಾಗಿ 60,000 ಕೋಟಿ ಯೋಜನೆ ರೂಪಿಸಲಾಗಿದ್ದು, 1,000 ಐಟಿಐ ಹಾಗೂ 5 ¥sÉRRLಗಳನ್ನು ಉನ್ನತದರ್ಜೆಗೇರಿಸಲಾಗುತ್ತಿದೆ. ಇದರಡಿಯಲ್ಲಿ 5 ವರ್ಷಗಳಲ್ಲಿ 20 ಲಕ್ಷ ಯುವಕರಿಗೆ ದೇಶ, ವಿದೇಶಗಳಲ್ಲಿ ಕೌಶಲ್ಯಾಧಾರಿತ ಉದ್ಯೋಗ ಕೈಗೊಳ್ಳಲು ಉತ್ತಮ ತರಬೇತಿ ಕಡೆಗೂ ಗಮನಹರಿಸಲಾಗಿದೆ.

ಜಾಗತಿಕ ಸಂಸ್ಥೆಯಾದ OECD (organisation for Economic Cooperation and Development) ಪ್ರಕಾರ, 2030ರ ವೇಳೆಗೆ ಜಗತ್ತಿನಲ್ಲಿ 1.5 ಬಿಲಿಯನ್ ಉದ್ಯೋಗಗಳು ಸೃಷ್ಟಿಯಾಗುವ ಮೂಲಕ ಕೌಶಲ್ಯಯುಳ್ಳ ಯುವ ಉದ್ಯೋಗಿಗಳಿಗಾಗಿ ಕಾಯುತ್ತಿರುತ್ತವೆ ಎಂದಿದೆ. ಜೊತೆಗೆ, ಅನುಭವ, ಕುಶಲ ಕೆಲಸಗಾರರ ಕೊರತೆಯನ್ನೂ ಒತ್ತಿಹೇಳಿದೆ. ಅಮೇರಿಕಾದಲ್ಲಿ 10 ಮಿಲಿಯನ್ ಉದ್ಯೋಗಗಳು ಕುಶಲ ಕೆಲಸಗಾರರನ್ನು ಎದುರು ನೋಡುತ್ತಿವೆ.

ವಿಶ್ವಬ್ಯಾಂಕ್ 2028ರ ವೇಳೆಗೆ 1.2 ಬಿಲಿಯನ್ ಕುಶಲ ಉದ್ಯೋಗಿಗಳ ಕೊರತೆ ಇಡೀ ಜಗತ್ತನ್ನು ಕಾಡಲಿದೆ ಎಂದಿದೆ. ಇದೇ ಸಮಯದಲ್ಲಿ, ಭಾರತವು 2014–15 ರಿಂದ 2024ಕ್ಕೆ ಉತ್ತಮ ಕೌಶಲ್ಯ ಆಧಾರಿತ ತರಬೇತಿ ಹೊಂದಿದ ಉದ್ಯೋಗಿಗಳಲ್ಲಿ ಶೇ.36ರಷ್ಟು ಅಭಿವೃದ್ಧಿ ಕಂಡಿರುವುದು ಸಂತಸದ ವಿಚಾರ. ಸದ್ಯ 3.6 ಬಿಲಿಯನ್ ಉದ್ಯೋಗಿಗಳು ಜಗತ್ತಿನಾದ್ಯಂತ ಕೆಲಸ ಮಾಡುತ್ತಿದ್ದಾರೆ. 2030ರ ವೇಳೆಗೆ ಮತ್ತೆ 1.5 ಬಿಲಿಯನ್ ಕೆಲಸಗಳು ಸೃಷ್ಟಿಯಾಗಲಿದ್ದು, ಇವುಗಳಿಗೆ 420 ಮಿಲಿಯನ್ ಉದ್ಯೋಗಿಗಳು ಮಾತ್ರ ಕೆಲಸಕ್ಕೆ ಸಿಗಲಿದ್ದಾರೆ ಎಂದು ಜಾಗತಿಕ ವರದಿಗಳು ಹೇಳುತ್ತಿವೆ.

ಭಾರತೀಯ ಕಾರ್ಮಿಕರು ಇತರರಿಗಿಂತ ಹೆಚ್ಚು ಕೌಶಲ್ಯವುಳ್ಳವರಾದ್ದರಿಂದ ಯುಎಇ, ಸೌದಿ, ಕುವೈತ್, ಕತಾರ್ ಮತ್ತು ಒಮನ್‌ಗಳಲ್ಲಿ ಹಾಗೂ ಅಮೇರಿಕ, ಕೆನಡಾ, ಮಲೇಷಿಯಾಗಳಲ್ಲಿ ಭಾರತೀಯ ನೌಕರರಿಗೆ ಹೆಚ್ಚು ಬೇಡಿಕೆಯಿದೆ. 36 ಮಿಲಿಯನ್ ಭಾರತೀಯರು ವಿದೇಶಗಳಲ್ಲಿ ಕೆಲಸಮಾಡುತ್ತಿದ್ದು, 2.5 ಮಿಲಿಯನ್ ಪ್ರತಿವರ್ಷ ಭಾರತೀಯರು ವಿದೇಶಗಳಿಗೆ ಹೋಗುತ್ತಿರುವುದು ಸಾಮಾನ್ಯವಾಗಿದೆ. ಇಸ್ರೇಲ್, ಜಪಾನ್, ಮಾಲೇಶಿಯಾ, ಮಾರಿಷಸ್, ಪೋರ್ಚುಗಲ್, ತೈವಾನ್ ಸೇರಿದಂತೆ 6 ದೇಶಗಳೊಂದಿಗೆ ಭಾರತ Workforce exchangeನಂತಹ ಒಪ್ಪಂದಗಳನ್ನು ಮಾಡಿಕೊಂಡಿದ್ದು, 2023ರಲ್ಲಿ ಸುಮಾರು 3.98 ಲಕ್ಷ ಅರ್ಧಕುಶಲ ಭಾರತೀಯರಿಗೆ ಉದ್ಯೋಗಕ್ಕಾಗಿ ವಲಸೆ ಅನುಮತಿ (Emigration Clearance) ದೊರೆತಿದೆ. 2022ರಲ್ಲಿ 5.6 ಲಕ್ಷ ಭಾರತೀಯರು OEC ಈ ರಾಷ್ಟ್ರಗಳಿಗೆ ವಲಸೆ ಹೋಗಿದ್ದು, ಭಾರತವನ್ನು ಅತ್ಯಧಿಕ ವಲಸೆ ನೀಡಿದ ರಾಷ್ಟ್ರವನ್ನಾಗಿ ಮಾಡಿದೆ. 1.25 ಲಕ್ಷ ಜನರು ಅಮೇರಿಕಾಗೆ, 1.12 ಲಕ್ಷ ಜನರು ಬ್ರಿಟನ್‌ಗೆ ವಲಸೆ ಹೋಗಿದ್ದಾರೆ.

ಒಂದು ಲಕ್ಷದವರೆಗೆ ನರ್ಸ್‌ಗಳು ವಿದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, 2025ಕ್ಕೆ ಇದು ಶೇ.30ಕ್ಕೆ ಏರಿಕೆಯಾಗುವ ನಿರೀಕ್ಷೆಯಿದೆ. ಐಟಿ, ಆರೋಗ್ಯ ಸೇವೆ, ಇಂಜಿನಿಯರಿಂಗ್, ಸಾರಿಗೆ, ಆತಿಥ್ಯ,

ಶಿಕ್ಷಕರು, ಪಾಲನೆ ಕೆಲಸಗಾರರು ಸೇರಿ, ಜಪಾನಿನಲ್ಲಿ 250% ಹೆಚ್ಚಳವಾಗಿದ್ದು, ಭಾರತೀಯರು Specified Skilled Worker ವೀಸಾ ಮೂಲಕ ಜಪಾನ್ ಪ್ರವೇಶಿಸುತ್ತಿದ್ದಾರೆ. ಗಲ್ಫ್ ರಾಷ್ಟ್ರಗಳಲ್ಲಿ ಅಲ್ಪಕುಶಲ ಉದ್ಯೋಗಿಗಳ ವೇತನ 298% ಹೆಚ್ಚಿದೆ.

ಅಂತರರಾಷ್ಟ್ರೀಯ ಸಹಕಾರ ನೀತಿ ಅಡಿಯಲ್ಲಿ ಭಾರತವು NSQF (National Skill Qualification Framework) ಮೂಲಕ ಜಾಗತಿಕವಾಗಿ ಮಾನ್ಯತೆ ಪಡೆಯುವ ತರಬೇತಿಗಳನ್ನು ನೀಡುತ್ತಿದೆ. ಆಸ್ಟ್ರೇಲಿಯಾ, ಡೆನ್ಮಾರ್ಕ್, ಜಪಾನ್, ಕತಾರ್, ಯುಎಇ ಮೊದಲಾದ ರಾಷ್ಟ್ರಗಳೊಂದಿಗೆ ಶ್ರಮ ಕೊಡುಕೊಳ್ಳುವಿಕೆ ಒಪ್ಪಂದಗಳಿವೆ. ಭಾರತವು ವರ್ಷಕ್ಕೆ 2.5 ಮಿಲಿಯನ್ ಉದ್ಯೋಗಿಗಳನ್ನು ವಿದೇಶಗಳಿಗೆ ಕಳಿಸಬಹುದಾದ ಸಾಮರ್ಥ್ಯ ಹೊಂದಿದ್ದು, ಮುಂಬರುವ ದಿನಗಳಲ್ಲಿ 40 ಲಕ್ಷಕ್ಕೆ ಏರಿಕೆಯಾಗಲಿದೆ ಎಂದು ವರದಿ ಹೇಳುತ್ತದೆ. ಸ್ಥಳೀಯ ಯುಜನತೆಯನ್ನು, ಹಿಂದುಳಿದ ಮತ್ತು ಆಧುನಿಕ ಸೌಕರ್ಯಗಳಿಂದ ದೂರವಿರುವ ಗುಡ್ಡಗಾಡು ಪ್ರದೇಶಗಳನ್ನು ತಲುಪಿ, ಕೌಶಲ್ಯಾಧಾರಿತ ತರಬೇತಿ ನೀಡಲು ಕೆಲವೊಂದು ಸಂಘ ಸಂಸ್ಥೆಗಳಿರುತ್ತವೆ. ಯುವಕರಿಗೆ ವಿದೇಶದಲ್ಲಿ ಉದ್ಯೋಗ ಪಡೆಯಲು ಅಗತ್ಯವಾದ ಶಿಕ್ಷಣ, ತರಬೇತಿ ಮತ್ತು ಮಾರ್ಗದರ್ಶನ ಒದಗಿಸುತ್ತಿದೆ.

ಭಾಷಾ ತರಬೇತಿ (ವಿದೇಶಗಳಲ್ಲಿ ಉದ್ಯೋಗ ಪಡೆಯಲು ಅಗತ್ಯವಿರುವ ಇಂಗ್ಲಿಷ್ ಪರೀಕ್ಷೆಗಳಾದ IELTS, OET, TOEFL, PTE ತರಬೇತಿ), ವೈದ್ಯಕೀಯ ಕ್ಷೇತ್ರದಲ್ಲಿ ಆಸಕ್ತರಿಗಾಗಿ OET (Occupational English Test) ಸೇರಿದಂತೆ ಬಹುಭಾಷಾ ಕಲಿಕೆಯ ಜೊತೆಗೆ ಕೌಶಲ್ಯಾಭಿವೃದ್ಧಿ ತರಬೇತಿ ಜೊತೆಗೆ, ವೃತ್ತಿಪರ ಕೌಶಲ್ಯ ತರಬೇತಿ (ನರ್ಸಿಂಗ್. ಲ್ಯಾಬ್ ಟೆಕ್ನಿಷಿಯನ್, ಫಾರ್ಮಸಿಸ್ಟ್ ಆರೈಕೆದಾರರು ಮುಂತಾದ ಪ್ರಾಯೋಗಿಕ ತರಬೇತಿ), ತಾಂತ್ರಿಕ ಉದ್ಯೋಗಗಳಿಗೆ (ಇಲೆಕ್ಟ್ರಿಷಿಯನ್, ಪ್ಲಂಬರ್ ವೆಲ್ಡರ್) ತರಬೇತಿ ಸೇರಿವೆ.

ವೀಸಾ ಪ್ರಕ್ರಿಯೆ, ಡಾಕ್ಯುಮೆಂಟ್ ಪರಿಶೋಧನೆ, ಜಾಬ್ ಅಪ್ಲಿಕೇಶನ್, ಇಂಟರ್‌ವ್ಯೂಗಳಿಗೆ ತಯಾರಿ, ವಿದ್ಯಾರ್ಥಿಗಳಿಗೆ ಸಿಎನ್‌ಡಿಡಿ (Counselling) ಸೇವೆ, ಜೀವನ ವಿವರಣಾ ಪತ್ರ (resume) ತಯಾರಿ, ಮಾಕ್ ಇಂಟರ್‌ವ್ಯೂ ಮುಂತಾದವುಗಳ ಮೂಲಕ ವಲಸೆ ಮಾರ್ಗದರ್ಶನ ಮತ್ತು ದಾಖಲೆಗಳ ಸಹಾಯ ಮಾಡುತ್ತವೆ.

ಭಾರತ ಇಂದು ಜಾಗತಿಕವಾಗಿ ಕಾರ್ಮಿಕ ಶಕ್ತಿ ಕೇಂದ್ರವಾಗಿ ಮೂಡುತ್ತಿದೆ. ಹೆಚ್ಚುವರಿ ಆದಾಯ, ವೃತ್ತಿಪರ ತರಬೇತಿ, ಜಾಗತಿಕ ಬೇಡಿಕೆಗಳಿಂದ ಉದ್ಯೋಗ ವಲಸೆಯು ಹೆಚ್ಚು ವೇಗಗೊಳ್ಳುತ್ತಿದೆ. ಭಾರತದ ಯುವ ಜನಸಂಖ್ಯೆಯನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳಲು ತರಬೇತಿಗಳನ್ನು ಅಂತರರಾಷ್ಟ್ರೀಯ ಪ್ರಮಾಣಗಳಿಗೆ ಹೊಂದುವಂತೆ ಮಾಡಬೇಕು. ವೃತ್ತಿಪರ ಶಿಕ್ಷಣದ ಬಗ್ಗೆ ಖಾಸಗಿ ಕ್ಷೇತ್ರದ ಪಾಲ್ಗೊಳ್ಳುವಿಕೆ, ಇಂಗ್ಲಿಷ್ ಮತ್ತು ಸಾಫ್ಟ್ ಸ್ಕಿಲ್ಸ್ ತರಬೇತಿಗೆ ಪ್ರಾಮುಖ್ಯತೆ ನೀಡಬೇಕು. ಮುಂದಿನ ದಿನಗಳು ಕೌಶಲ್ಯವಂತರಿಗೆ ಮಾತ್ರ ಎಂಬುದನ್ನು ಯುವ ಜನತೆ ಮರೆಯಬಾರದು. ಭಾರತವು ಜಾಗತಿಕ ಮಾನವ ಸಂಪನ್ಮೂಲ ಕೇಂದ್ರವನ್ನಾಗಿ ಮಾಡುವ ಸಾಮರ್ಥ್ಯ ಹೊಂದಿದ್ದು, ಕೌಶಲ್ಯ ಭಾರತದ ಶಕ್ತಿ ಎಂಬ ದೃಷ್ಟಿಕೋನವು ಭಾರತೀಯ ಯುವಕರ ಭವಿಷ್ಯವನ್ನೂ, ದೇಶದ ಭವಿಷ್ಯವನ್ನೂ ಬೆಳಗಿಸಬಲ್ಲದು.

**ಲೇಖಕರು:ಗುರುರಾಜ್ ಗಂಟಿಹೊಳೆ**

**ಆಧಾರ:** ವಿಜಯ ಕರ್ನಾಟಕ, ದಿನಾಂಕ:17.07.2025

## 3. The new Constitution Bill, the need for a balancing act

Moral integrity in the political class is a paradox that India has continually struggled with. While, on the one hand, the electorate demands moral rectitude in the political class, there has, on the other, been a pervading spectre of criminality prevailing in the political class. The proposed Constitution (One Hundred and Thirtieth Amendment) Bill, 2025, that was introduced in the Lok Sabha on August 20, 2025, is aimed at filling this vacuum by providing a condition. Under this, Ministers, Chief Ministers and even the Prime Minister must either resign or automatically be subject to removal if they continue to be in custody even after a consecutive period of 30 days in crimes that carry a maximum punishment of five years or more of imprisonment.

On the surface, the action appears to be a decisive initiative toward enabling cleaner politics. It touches upon the disturbing fact of corrupt leaders in custody holding on to power, a situation that has made people lose trust in governance. But there are political pitfalls and constitutional quandaries that lurk beneath its promise.

The foundation for this Bill rests on Articles 75, 164 and 239AA of the Constitution, which deal with the appointment and tenure of Ministers in the Union, States and Delhi, respectively. While Articles 75(1), 164(1) and 239AA(5) mandate that Ministers shall hold office at the pleasure of the President of India (or Governor), this "pleasure" has been judicially interpreted within the bounds of constitutional morality and legal propriety, as in cases such as Shamsher Singh and Anr. vs State Of Punjab and Nabam Rebia And Etc. Etc. vs Deputy Speaker And Ors.

The Supreme Court of India, in S.R. Bommai vs Union of India, underscored the role of constitutional morality as a guiding principle, thus pronouncing that democratic institutions must be nurtured through integrity and accountability. Later, in Manoj Narula vs Union of India, the Court directly addressed the ethical dimension of ministerial appointments, warning that individuals with serious criminal charges should not be entrusted with executive power. Although the Court stopped short of mandating automatic removal, it clearly signalled that morality is intrinsic to the constitutional framework. The Bill, therefore, draws strength from these pronouncements, seeking to give legislative form to what has long been a judicially recognised moral imperative.

But this Bill's very ambition may be its Achilles' heel. The most glaring issue concerns the principle of presumption of innocence, which forms part of the right to life and liberty under Article 21. To equate arrest and detention with grounds for removal without conviction or even the framing of the charges, risks undermining this foundational constitutional value, Section 80(3) of the Representation of the people

Act concern disqualification of members on the conviction ov certain offences. In the case of *Lily Thomas vs Union of India* the Supreme Court held that a lawmaker only upon conviction, immediately, stands immediately disqualified. The three-month window to file an appeal and continue as a legislator was also struck down, thus providing jurisprudential support for stringent accountability even before the existence of the Bill. Here, it is important to note that disqualification begins only when someone is convicted, and not when someone is arrested or detained.

The problem is compounded by the Bill's reliance on executive discretion through the insertion of Clause 5A after Clause 5 of Article 75, Clause 4A after clause 4 of Article 164 and Clause 5A after Clause 5 of Article 239AA of the Constitution. Ministers can be removed on the advice of the Prime Minister or Chief Minister, but automatic removal kicks in if such advice is withhead. This dual mechanism politicises the procese a Prime Minister may shield allies for 30 days, while a hostile Chief Minister may allow rivals to fall by the automatic rule. Instead of Insulating governance from partisanship, the Bill risks embedding accountability in the shifting sands of political calculation.

The inconsistency in treatment between legislators and Ministers further complicates matters of parliament and members of State legislatures face disqualification only upon conviction under the Representation of the People Act. By contrast, Ministers under this Bill would be forced to resign on mere detention. This creates a paradoxical situation wherein a legislator convicted of corruption may technically continue as a Minister until disqualified under the Act, while a Minister only under arrest would be forced out. The asymmetry may appear to elevate the standards for executive office, but it also undermines consistency in the constitutional treatment of public officials. It risks deterring capable individuals from accepting ministerial responsibility, knowing that they face harsher consequences than their legislative peers on the basis of unproven allegations.

There is also the problem of the "revolving door". Because the Bill allows reappointment once a Minister is released from custody, there could be cycles of resignation and reinstatement depending on the pace of legal proceedings. Imagine a Chief Minister who is arrested and detained for 31 days, who is forced to resign, but later released on bail and promptly reinstated by the Governor. The State would have endured weeks of political uncertainty with little to gain in ethical accountability. Such instability may not only weaken governance but also incentivise tactical legal manoeuvres, where political actors use the law as a tool to manipulate executive offices.

None of this is to deny the urgency of reform. The rise of criminalisation in politics is a stark reality. According to a comprehensive analysis by the Association for Democratic Reforms and National Election Watch of all 543 winning candidates in the 2024 general election, 251 Members of Parliament (46%) had declared criminal cases against themselves, up from 43% in 2019, 34% in 2014, and 30% in 2009, representing a 55% Increase over 15 years. Yet, the bluntness of its approach risks undermining both the principle of fairness and the stability of governance. A more nuanced model would better serve the constitutional goal of clean politics without eroding democratic safeguards.

One pathway could be to link removal not to arrest but, Instead, to judicial milestones such as the framing of charges by a competent court. This would ensure that only cases that pass initial Judicial scrutiny trigger resignation, filtering out frivolous or politically motivated arrests. Another safeguard could be the establishment of an Independent review mechanism, such as a tribunal or a judicial panel, to examine whether the conditions for removal have been met. This would prevent executive overreach and ensure Impartial application. Similarly, instead of outright removal, the law could provide for interim suspension of ministerial functions during ongoing trials, allowing governance to continue without compromising accountability. Most importantly, the Bill should refine its scope to apply only to offences involving moral turpitude and corruption, rather than casting a wide net over any offence punishable with five years' imprisonment, which could include relatively minor criminal conduct.

In sum, the Constitution (One Hundred and Thirtieth Amendment) Bill, 2025, stakes out a significant normative position that citizens might welcome as a forceful stand against corruption and criminality. But its formulation elides the Inherent tension between safeguarding democratic deliverance of justice and urgent demands for ethical governance. Unless the Joint Parliamentary Committee (JPC) carefully recalibrates to incorporate due process and institutional checks - the Bill is with the JPC-it could transmute constitutional safeguards into Instruments of political exclusion, testing the delicate balance of India's democratic experiment. For, in the long run, power without Integrity corrodes democracy, and integrity without fairness endangers it."

**Author**: Samayeta Bal, Advocate,
**Courtesy:**The Hindu, dated:25.08.2025

# 4. ಮೌಲ್ಯಾಧಾರಿತ ರಾಜಕಾರಣದ ಪ್ರತೀಕ

1970ರ ದಶಕಲ್ಲಿ ರಾಷ್ಟ್ರದ ಮೇಲೆ ಏರಿದ ತುರ್ತು ಪರಿಸ್ಥಿತಿಯ ದಿನಗಳಲ್ಲಿ ವಿದ್ಯಾರ್ಥಿ ನಾಯಕನಾಗಿ ಗುರುತಿಸಿಕೊಂಡಿದ್ದ ನಾನು ಕೂಡ, ಹಲವರಂತೆ ಪ್ರತಿಭಟನೆಯ ಹಾದಿ ಹಿಡಿದೆ. ಈ ಹೋರಾಟದ ಫಲವಾಗಿ 1975ರ ಜೂನ್ 24ರಂದು ನನ್ನನ್ನೂ ಬಂಧಿಸಲಾಯಿತು. ಆ ನಂತರ ಜೈಲಿನಲ್ಲಿ ನನ್ನ ಪ್ರತಿಭಟನಾ ಶೈಲಿ ಕಡಿಮೆಯಾಗಲಿಲ್ಲ. ಹಾಗಾಗಿ ನನ್ನನ್ನು ಹಿಂಡಲಗಾ ಜೈಲಿಗೆ ಸ್ಥಳಾಂತರಿಸಲಾಯಿತು.

ಆಗ ತಾನೆ ಹಿಂಡಲಗಾ ಜೈಲಿಗೆ ವರ್ಗವಾಗಿ ಬಂದಿದ್ದ ರಾಮಕೃಷ್ಣ ಹೆಗಡೆಯವರನ್ನು ನಾನು ಮೊದಲು ಭೇಟಿಯಾಗಿದ್ದು ಜೈಲಿನಲ್ಲಿ, ಅವರ ಜತೆ ಕಳೆದ ಅವಧಿ ನನ್ನ ಜೀವನದಲ್ಲಿ ಆಳವಾದ ಪ್ರಭಾವ ಬೀರುವ ಘಟ್ಟವಾಯಿತೆನ್ನಬಹುದು. ಹೆಗಡೆಯವರು 'ಎ' ವರ್ಗದ ರಾಜಕೀಯ ಖೈದಿಯಾಗಿದ್ದರೂ, ಯಾವುದೇ ವಿಶೇಷ ಸೌಲಭ್ಯಗಳನ್ನು ಬಳಸಿಕೊಳ್ಳದೇ ಸಾಮಾನ್ಯ ಖೈದಿಗಳಂತೆ ನಡೆದುಕೊಳ್ಳುತ್ತಿದ್ದರು. ಆರಂಭದಲ್ಲಿ ಅವರು  ಕಲ್ಲು ಬೆಂಚಿನ ಮೇಲೆಯೇ ಮಲಗಬೇಕಾದ ಅನಾನುಕೂಲ ಸ್ಥಿತಿಯನ್ನು ಸಹಜವಾಗಿ ಸ್ವೀಕರಿಸಿದ್ದರು. ಅದರ ಪರಿಣಾಮವಾಗಿ ಅವರಿಗೆ ಸ್ಪಾಂಡಿಲೈಟಿಸ್ ಎಂಬ ದೈಹಿಕ ತೊಂದರೆಯೂ ತಟ್ಟಿತು. ಆದರೆ, ಆಕಸ್ಮಿಕ ದೈಹಿಕ ಸಂಕಷ್ಟಗಳು ಅವರ ಮನಸ್ಸಿನಲ್ಲಿ ಯಾವುದೇ ರೀತಿಯಿಂದಲೂ ನೋವನ್ನುಂಟು ಮಾಡಲಿಲ್ಲ.

ಒಂದು ದಿನ ಬೆಳಗ್ಗೆ 7 ಗಂಟೆಗೆ ಅವರು ಜೈಲಿನಲ್ಲಿ ಕಾಣೆಯಾಗಿದ್ದು, ನಮ್ಮಲ್ಲಿ ಆತಂಕ ಹುಟ್ಟಿಸಿತು. ಹುಡುಕಾಟದ ನಂತರ, ಅವರು ಶೌಚಾಲಯವನ್ನು ತಾವೇ ಸ್ವಚ್ಛಗೊಳಿಸುತ್ತಿರುವ ದೃಶ್ಯ ಕಂಡು ಬೆರಗಾದೆ. ಅವರು ತಮ್ಮ ಬಟ್ಟೆಯನ್ನು ತಾವೇ ತೊಳೆಯುತ್ತಿದ್ದರು. ಚಪ್ಪಲಿಗಳಿಗೆ ತಾವೇ ಪಾಲಿಶ್ ಮಾಡುತ್ತಿದ್ದರು. ಈ ಎಲ್ಲವನ್ನೂ ಅವರು ಅತ್ಯಂತ ಶ್ರದ್ಧೆಯಿಂದ, ಅಹಂಕಾರವಿಲ್ಲದೇ ನಿರ್ವಹಿಸುತ್ತಿದ್ದರು. ಅವರ ಈ ನಡವಳಿಕೆ ನನಗೆ ಹಾಗೂ ಜೈಲಿನಲ್ಲಿದ್ದ ಇತರ ಖೈದಿಗಳಿಗೆ ಜೀವಮಾನದ ಪಾಠವಾಯಿತು.

ವಿನೋಬಾ ಭಾವೆ ಅವರ ಪವನಾರ್ ಆಶ್ರಮ ಹಾಗೂ ಬನಾರಸ್ ಹಿಂದೂ ವಿಶ್ವವಿದ್ಯಾಲಯದಲ್ಲಿ ವಿದ್ಯಾಭ್ಯಾಸ ಮಾಡಿದ ಹೆಗಡೆಯವರು, ಶಿಸ್ತು, ಚಿಂತನೆ ಮತ್ತು ಆತ್ಮಸಾಧನೆಗೆ ಪ್ರಾಮುಖ್ಯತೆ ನೀಡುತ್ತಿದ್ದರು. ಜೈಲಿನ ಸಂಕಷ್ಟಗಳ ನಡುವೆ ಕೂಡ ಅವರು ಸದಾ ಓದು, ಧ್ಯಾನ, ಭಜನೆಗಳಲ್ಲಿ ತೊಡಗಿರುತ್ತಿದ್ದರು. ರಾಮಕೃಷ್ಣ ಹೆಗಡೆಯವರು ತಮ್ಮ ತಾಯಿಯನ್ನು (ಅವರು 'ಆ' ಎಂದು ಕರೆಯುತ್ತಿದ್ದವರು) ಅವರ ಕೊನೆ ಉಸಿರಿನತನಕ ಅಪಾರ ಪ್ರೀತಿಯಿಂದ ಕಾಣುತ್ತಿದ್ದರು. ತಮ್ಮ ಸಂಸ್ಕಾರಗಳ ಮೂಲವೂ ಅವರೇ ಎಂಬುದನ್ನು ಸದಾ ವಿವರಿಸುತ್ತಿದ್ದರು.

ಹೆಗಡೆಯವರೊಂದಿಗೆ ಜೈಲಿನಲ್ಲಿ ಆರಂಭವಾದ ನನ್ನ ಒಡನಾಟ ಬಿಡುಗಡೆ ನಂತರವೂ ಮುಂದುವರೆಯಿತು. ಹೊರಬಂದ ನಂತರ ಅವರು ಜಯಪ್ರಕಾಶ್ ನಾರಾಯಣ್ ನೇತೃತ್ವದ ಜನತಾ ಪಕ್ಷವನ್ನು ಬಲಪಡಿಸುವಲ್ಲಿ ಪ್ರಮುಖ ಪಾತ್ರವಹಿಸಿದರು. 1983ರಲ್ಲಿ ಭಾರತೀಯ ಜನತಾ ಪಕ್ಷದ ಬೆಂಬಲದೊಂದಿಗೆ ಜನತಾ ಪಕ್ಷ ಕರ್ನಾಟಕದಲ್ಲಿ ಆಡಳಿತಕ್ಕೆ ಬಂದಿತು. ರಾಮಕೃಷ್ಣ ಹೆಗಡೆಯವರು ರಾಜ್ಯದ ಮೊದಲ ಕಾಂಗ್ರೆಸ್ಸೇತರ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದರು. ಅವರ ಆಡಳಿತದ ಶೈಲಿ, ಶಿಸ್ತು ಮತ್ತು ಪ್ರಜಾಪ್ರಭುತ್ವ ಪ್ರಾಮಾಣಿಕತೆಯ ಪ್ರತೀಕವಾಗಿತ್ತು.

ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಬಳಿಕ, ರಾಮಕೃಷ್ಣ ಹೆಗಡೆಯವರು ಕರ್ನಾಟಕ ರಾಜಕಾರಣಕ್ಕೆ ಹೊಸ ದಿಕ್ಕು ತೋರಿಸಿದ ಮಹಾನ್ ನಾಯಕರಾದರು. ಅವರ ಸಚಿವ ಸಂಪುಟದಲ್ಲಿ ನಾನೂ ಮಂತ್ರಿಯಾಗಿ ಸೇವೆ ಸಲ್ಲಿಸಿದೆ ಎಂಬುದು ನನ್ನ ಬದುಕಿನ ಮಹತ್ವದ ಘಟ್ಟವಾಗಿದೆ. ನನ್ನ ಜತೆಯಲ್ಲಿ ಬಿ. ಸೋಮಶೇಖರ್, ನಜೀರ್‌ಸಾಬ್, ಜೀವಿಜಯ, ಬಿ. ರಾಚಯ್ಯ, ಎಸ್.ಆರ್. ಬೊಮ್ಮಾಯಿ, ಜೀವರಾಜ್ ಆಳ್ವ ಹಾಗೂ ಇಂದಿನ ಸಿಎಂ ಸಿದ್ದರಾಮಯ್ಯನವರು ಕೂಡ ಅವರ ಸಚಿವ ಸಂಪುಟದ ಭಾಗವಾಗಿದ್ದರು. ತಾವು ಮೇಲ್ವರ್ಗದವರಾಗಿದ್ದರೂ ವಿವಿಧ ಜಾತಿ, ಸಮುದಾಯದ ನಾಯಕರನ್ನು ಬೆಳಸುವ ಮೂಲಕ ಆಶ್ರಮ ಅವರು ಜಾತ್ಯತೀತತೆಯ ನಿಜವಾದ ಪ್ರತಿರೂಪವಾದರು.

ಹೆಗಡೆಯವರು ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ಬಳಿಕ, ಸಂವಿಧಾನದ ಪ್ರಕಾರ ಆರು ತಿಂಗಳೊಳಗೆ ಅವರೊಬ್ಬ ಜನಪ್ರತಿನಿಧಿಯಾಗಬೇಕಿತ್ತು. ಆ ಸಂದರ್ಭದಲ್ಲಿ ಹಿರಿಯ ನಾಯಕರಾದ ದೇವೇಗೌಡರು ಮತ್ತು ಎಸ್.ಆರ್. ಬೊಮ್ಮಾಯಿಯವರ ಸಲಹೆಯಂತೆ ನಾನು ಪ್ರತಿನಿಧಿಸುತ್ತಿದ್ದ ಕನಕಪುರ ಕ್ಷೇತ್ರವನ್ನು ಅವರು ಸ್ಪರ್ಧಿಸಲು ತೆರವುಗೊಳಿಸಲಾಯಿತು. ಅವರು ಉಪಚುನಾವಣೆಯಲ್ಲಿ ಗೆಲುವು ಸಾಧಿಸಿ ವಿಧಾನಸಭೆಯ ಸದಸ್ಯರಾದರು. ಅದಾದ ನಂತರ ನನ್ನನ್ನು ವಿಧಾನ ಪರಿಷತ್ತಿಗೆ ನಿಯೋಜಿಸಿ, ಮಂತ್ರಿಯಾಗಿಯೇ ಮುಂದುವರಿಯುವ ಅವಕಾಶ ನೀಡಿದರು.

1984ರ ಲೋಕಸಭಾ ಚುನಾವಣೆಯಲ್ಲಿ ಪಕ್ಷ ಭಾರಿ ಸೋಲು ಕಂಡಾಗ, ಹೆಗಡೆಯವರು ನೈತಿಕ ಜವಾಬ್ದಾರಿ ಹೊತ್ತು ರಾಜೀನಾಮೆ ನೀಡಿದರು. ಇದು ನೈತಿಕತೆಯ ರಾಜಕಾರಣಕ್ಕೆ ಬಲವಾದ ಉದಾಹರಣೆ ಮತ್ತೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಅವರು ಪಕ್ಷವನ್ನು 144 ಸೀಟುಗಳ ಗೆಲುವಿಗೆ ಕೊಂಡೊಯ್ದರು. ಈ ಗೆಲುವು ಅವರ ಜನಪ್ರಿಯತೆ, ಶ್ರದ್ಧೆಗೆ ಸಾಕ್ಷಿಯಾಯಿತು.

ತಮ್ಮ ಅಧಿಕಾರಾವಧಿಯಲ್ಲಿ ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ತಂದವರು ಹೆಗಡೆ, ನಜೀರ್ ಸಾಬ್ ಅವರ ಮುಖಾಂತರ ಈ ಯೋಜನೆಯನ್ನು ನೈಜ ಅನುಷ್ಠಾನಕ್ಕೆ ತಂದರು. ಯೋಜನೆಗಳನ್ನು ಜನಸಾಮಾನ್ಯರವರೆಗೂ ತಲುಪಿಸಬೇಕೆಂಬ ಅವರ ದೃಷ್ಟಿಕೋನವನ್ನು ಪ್ರತಿಬಿಂಬಿಸಿತು.

ಅವರು 12 ಬಾರಿ ರಾಜ್ಯ ಬಜೆಟ್ ಮಂಡಿಸಿದ ಶ್ರೇಷ್ಠ ಅರ್ಥಶಾಸ್ತ್ರಜ್ಞರಾಗಿದ್ದು, ಗ್ರಾಮೀಣಾಭಿವೃದ್ಧಿ, ಪಡಿತರ ವ್ಯವಸ್ಥೆಯ ಸುಧಾರಣೆ, ಪಾರದರ್ಶಕ ಆಡಳಿತ ಹಾಗೂ ಲೋಕಾಯುಕ್ತ ಸಂಸ್ಥೆಯ ಸ್ಥಾಪನೆಯಂತಹ ಗಣನೀಯ, ಅಪೂರ್ವ ಕೊಡುಗೆಗಳನ್ನು ನೀಡಿದ್ದಾರೆ. ಇದರಿಂದ ಪ್ರೇರಣೆಯುಂಟಾಗಿ, ಪ್ರಧಾನಮಂತ್ರಿ ರಾಜೀವ್ ಗಾಂಧಿಯವರು ರಾಷ್ಟ್ರಮಟ್ಟದಲ್ಲಿಯೇ ಪಂಚಾಯತ್ ರಾಜ್ ಕಾಯಿದೆಗೆ ತಿದ್ದುಪಡಿ ತರುವ ಹಾದಿಗೆ ಮುನ್ನುಡಿ ಬರೆದರು.

ಬದಲಾದ ರಾಜಕಾರಣದ ಸ್ಥಿತ್ಯಂತರಗಳಲ್ಲಿ, ಅವರು ತಾವು ನಂಬಿಕೊಂಡು ಬಂದಿದ್ದ ಜಾತ್ಯತೀತ ತತ್ವಗಳನ್ನೇ ಮೂಲೆಗೆ ಸರಿಸಿ, ಕೋಮುವಾದಿ ಧೋರಣೆ ಹೊಂದಿರುವ ಪಕ್ಷಗಳೊಂದಿಗೆ ಸಖ್ಯ ಬೆಳೆಸಬೇಕಾದ ಸ್ಥಿತಿ ನಿರ್ಮಾಣವಾಯಿತು. ಲೋಕಶಕ್ತಿ ಪಕ್ಷ ಮತ್ತು ನವ ನಿರ್ಮಾಣ ವೇದಿಕೆ ಎಂಬ ಹೊಸ ರಾಜಕೀಯ ವೇದಿಕೆಗಳನ್ನು ಆರಂಭಿಸಿದರೂ, ಅವುಗಳಿಂದ ನಿರೀಕ್ಷಿತ ಯಶಸ್ಸನ್ನು ಕಾಣಲು ಸಾಧ್ಯವಾಗಲಿಲ್ಲ.

ರಾಮಕೃಷ್ಣ ಹೆಗಡೆ ಅವರ ಆಡಳಿತ ವೈಖರಿ, ಶಿಸ್ತುಬದ್ಧ ನಡತೆ, ಜನಪರ ಯೋಜನೆಗಳು ಇಂದಿಗೂ ಜನಮಾನಸದಲ್ಲಿ ಜೀವಂತವಾಗಿವೆ. ಅವರೊಬ್ಬ ಅಪರೂಪದ ಮೌಲ್ಯಾಧಾರಿತ ರಾಜಕಾರಣಕ್ಕೆ ಪ್ರತೀಕವಾಗಿದ್ದರು. ಪ್ರಸಕ್ತ ರಾಜಕಾರಣಕ್ಕೆ ರಾಮಕೃಷ್ಣ ಹೆಗಡೆಯವರಂಥ ನಾಯಕರು ಅತ್ಯಂತ ಅಗತ್ಯವೆನಿಸುತ್ತಾರೆ.

**ಲೇಖಕರು:ಪಿ.ಜಿ.ಆರ್.ಸಿಂಧ್ಯ ಮಾಜಿ ಸಚಿವರು**
**ಆಧಾರ:** ವಿಜಯ ಕರ್ನಾಟಕ, ದಿನಾಂಕ:29.08.2025

## 5. ಭ್ರಾತೃತ್ವದ ಮೂರ್ತರೂ ಡಾ.ಮೋಹನ್ ಜೀ

ಇಂದು ಸೆಪ್ಟೆಂಬರ್11. 'ವಸುಧೈವ ಕುಟುಂಬಕಂ' ತತ್ವದಿಂದ ಪ್ರೇರಿತರಾಗಿ, ಇಡೀ ಜೀವನವನ್ನು ಸಾಮಾಜಿಕ ಪರಿವರ್ತನೆ, ಸಾಮರಸ್ಯ ಮತ್ತು ಸಹೋದರತ್ವಕ್ಕಾಗಿ ಮುಡಿಪಾಗಿಟ್ಟ ವ್ಯಕ್ತಿತ್ವದ ಜನ್ಮದಿನವಿಂದು. ರಾಷ್ಟ್ರೀಯ ಸ್ವಯಂಸೇವಕ ಸಂಘದೊಂದಿಗೆ (ಆರ್‌ಎಸ್‌ಎಸ್) ಸಂಬಂಧ ಹೊಂದಿರುವ ಲಕ್ಷಾಂತರ ಜನರು ಅವರನ್ನು ಗೌರವದಿಂದ 'ಪೂಜನೀಯ ಸರಸಂಘಚಾಲಕ್' ಎಂದು ಕರೆಯುತ್ತಾರೆ. ಹೌದು, ನಾನು ಶ್ರೀ ಮೋಹನ್ ಭಾಗವತ್ ಜೀ ಅವರ ಬಗ್ಗೆ ಮಾತನಾಡುತ್ತಿದ್ದೇನೆ. ಅವರ 75ನೇ ಹುಟ್ಟುಹಬ್ಬವು ಕಾಕತಾಳೀಯವಾಗಿ, ಆರ್‌ಎಸ್‌ಎಸ್ ಶತಮಾನೋತ್ಸವ ವರ್ಷದಲ್ಲೇ ಬಂದಿದೆ. ನಾನು ಅವರಿಗೆ ನನ್ನ ಶುಭಾಶಯಗಳನ್ನು ಕೋರುತ್ತೇನೆ. ಅವರ ಸುದೀರ್ಘ ಮತ್ತು ಆರೋಗ್ಯಕರ ಜೀವನಕ್ಕಾಗಿ ಪ್ರಾರ್ಥಿಸುತ್ತೇನೆ.

**ತಂದೆಯಿಂದಲೇ ಪ್ರೇರಣೆ**

ಮೋಹನ್ ಜೀಯವರ ಕುಟುಂಬದೊಂದಿಗೆ ನನಗೆ ಗಾಢವಾದ ಬಾಂಧವ್ಯವಿದೆ. ಅವರ ತಂದೆ ದಿ. ಮಧುಕರ್‌ರಾವ್ ಭಾಗವತ್ ಜೀ ಅವರೊಂದಿಗೆ ಕೆಲಸ ಮಾಡುವ ಸೌಭಾಗ್ಯ ನನಗೆ ದೊರಕಿತು. ನನ್ನ ಜ್ಯೋತಿಪುಂಜ್ ಪುಸ್ತಕದಲ್ಲಿ ಅವರ ಬಗ್ಗೆ ವಿವರವಾಗಿ ಬರೆದಿದ್ದೇನೆ. ಅವರು ಗುಜರಾತಿನಾದ್ಯಂತ ಆರ್‌ಎಸ್‌ಎಸ್ ಅನ್ನು ಬಲಪಡಿಸುವಲ್ಲಿ ಪ್ರಮುಖ ಪಾತ್ರವಹಿಸಿದರು. ರಾಷ್ಟ್ರನಿರ್ಮಾಣದ ಬಗ್ಗೆ ಮಧುಕರ್‌ರಾವ್ ಜೀಯವರ ಉತ್ಸಾಹ ಎಷ್ಟು ಆಳವಾಗಿತ್ತೆಂದರೆ ಅವರ ಮಗ ಮೋಹನ್ ಜೀಯವರನ್ನು ಭಾರತದ ಪುನರುತ್ಥಾನಕ್ಕಾಗಿ ಕೆಲಸ ಮಾಡುವಂತೆ ಪ್ರೇರೇಪಿಸಿದರು.

**ಪ್ರಚಾರಕನಾಗಿ ರಾಷ್ಟ್ರಸೇವೆಯ ಪಯಣ**

ಮೋಹನ್ ಜೀ 1970ರ ದಶಕದ ಮಧ್ಯಭಾಗದಲ್ಲಿ ಆರ್.ಎಸ್.ಎಸ್‌ನ ಪ್ರಚಾರಕರಾದರು. 'ಪ್ರಚಾರಕ' ಎಂಬ ಪದವನ್ನು ಕೇಳಿದ ತಕ್ಷಣ,ಅದು ಕೇವಲ ಪ್ರಚಾರಪಡಿಸುವ ವ್ಯಕ್ತಿ ಎಂಬ ತಪ್ಪುಕಲ್ಪನೆ ಬರಬಹುದು. ಆದರೆ ಆರ್.ಎಸ್.ಎಸ್ ಕಾರ್ಯವೈಖರಿಯ ಬಗ್ಗೆ ತಿಳಿದಿರುವವರಿಗೆ ಪ್ರಚಾರಕ ಪರಂಪರೆಯ ಸಂಘಟನಾ ಕಾರ್ಯದ ಮೂಲ ಎಂಬುದು ತಿಳಿದೆ. ಕಳೆದ ನೂರು ವರ್ಷಗಳಲ್ಲಿ, ಸಾವಿರಾರು ಯುವಜನರು ದೇಶಭಕ್ತಿಯಿಂದ ಪ್ರೇರಿತರಾಗಿ ತಮ್ಮ ಕುಟುಂಬಗಳನ್ನು ತೊರೆದು ಪ್ರಚಾರಕರಾಗಿದ್ದಾರೆ. 'ಭಾರತ ಮೊದಲು' ಎಂಬ ಧ್ಯೇಯವನ್ನು ನನಸಾಗಿಸಲು ತಮ್ಮ ಜೀವನವನ್ನು ಮುಡಿಪಾಗಿಟ್ಟಿದ್ದಾರೆ.

ಆರ್‌ಎಸ್‌ಎಸ್‌ನಲ್ಲಿ ಅವರ ಆರಂಭಿಕ ವರ್ಷಗಳು ಭಾರತೀಯ ಇತಿಹಾಸದಲ್ಲಿನ ಅತ್ಯಂತ ಕರಾಳ ಅವಧಿಯಾಗಿದ್ದವು. ಆಗಿನ ಕಾಂಗ್ರೆಸ್ ಸರ್ಕಾರ ಕಠಿಣ ತುರ್ತು ಪರಿಸ್ಥಿತಿಯನ್ನು ಹೇರಿತ್ತು. ಪ್ರಜಾಪ್ರಭುತ್ವ ತತ್ವಗಳನ್ನು ಗೌರವಿಸುವ ಮತ್ತು ಭಾರತ ಅಭಿವೃದ್ಧಿ ಹೊಂದಬೇಕೆಂದು ಬಯಸುವ ಯಾರಾದರೂ ತುರ್ತುಪರಿಸ್ಥಿತಿ ವಿರೋಧಿ ಚಳವಳಿಗೆ ಸೇರುವುದು ಸಹಜ. ಮೋಹನ್ ಜೀ ಅದನ್ನೇ ಮಾಡಿದರು. ಮಹಾರಾಷ್ಟ್ರದ ಗ್ರಾಮೀಣ ಮತ್ತು ಹಿಂದುಳಿದ ಪ್ರದೇಶಗಳಲ್ಲಿ ವಿಶೇಷವಾಗಿ ವಿದರ್ಭದಲ್ಲಿ ವ್ಯಾಪಕರಾಗಿ ಕೆಲಸ ಮಾಡಿದರು. ಮುಂದೆ ಆರ್.ಎಸ್.ಎಸ್.ನಲ್ಲಿ ವಿವಿಧ ಹುದ್ದೆಗಳನ್ನಲಂಕರಿಸಿ, ಪ್ರತಿ ಜವಾಬ್ದಾರಿಯನ್ನು ಬಹಳ ದಕ್ಷತೆಯಿಂದ ನಿರ್ವಹಿಸಿದರು.

1990ರ ದಶಕದಲ್ಲಿ ಅಖಿಲ ಭಾರತೀಯ ಶಾರೀರಿಕ್ ಪ್ರಮುಖ್ ಆಗಿ ಮೋಹನ್ ಜೀಯವರ ಅಧಿಕಾರಾವಧಿಯನ್ನು ಇನ್ನೂ ಅನೇಕ ಸ್ವಯಂಸೇವಕರು ಪ್ರೀತಿಯಿಂದ ನೆನಪಿಸಿಕೊಳ್ಳುತ್ತಾರೆ. ಆ ಸಮಯದಲ್ಲಿ ಅವರು ಬಿಹಾರದ ಹಳ್ಳಿಗಳಲ್ಲೇ ಸಾಕಷ್ಟು ಸಮಯ ಕೆಲಸ ಮಾಡಿದರು. ಆ ಅನುಭವಗಳು ತಳಮಟ್ಟದ ಸಮಸ್ಯೆಗಳಿಗೆ ಅವರನ್ನು ಮತ್ತಷ್ಟು ಹತ್ತಿರವಾಗಿಸಿದವು. 2000ರಲ್ಲಿ 'ಸರಕಾರ್ಯ ವಾಹ'ರಾದರು. ಅಲ್ಲಿಯೂ ತಮ್ಮ ವಿಶಿಷ್ಟ ಕಾರ್ಯಶೈಲಿಯನ್ನು ತೋರಿಸಿದರು. 2009ರಿಂದ ಸರಸಂಘಚಾಲಕ್ ಆಗಿ ಇನ್ನೂ ಹೆಚ್ಚಿನ ಚೈತನ್ಯದಿಂದ ಕೆಲಸ ಮಾಡುತ್ತಿದ್ದಾರೆ.

**ವಿಶಿಷ್ಟ ಕಾರ್ಯವೈಖರಿಯಿಂದ ಛಾಪು**

ಮೋಹನ್ ಜೀ ಕಾರ್ಯಶೈಲಿಯಾ 2 ವಿಶಿಷ್ಟತೆಗಳ ಬಗ್ಗೆ ಹೇಳುವುದಾದರೆ, ಅವು ಸ್ಥಿರತೆ ಮತ್ತು ಹೊಂದಾಣಿಕೆ ಅವರು ಅತ್ಯಂತ ಸಂಕೀರ್ಣ ಸಂದರ್ಭಗಳಲ್ಲೂ ಸಂಘಟನೆಯನ್ನು ಮುನ್ನಡೆಸಿದ್ದಾರೆ. ಮೂಲಸಿದ್ಧಾಂತದ ಮೇಲೆ ರಾಜಿ ಮಾಡಿಕೊಳ್ಳದೆ, ಸಮಾಜದ ಬದಲಾಗುತ್ತಿರುವ ಅಗತ್ಯಗಳನ್ನು ಪೂರೈಸಿದ್ದಾರೆ. ಹೆಚ್ಚು ಹೆಚ್ಚು ಯುವಜನರನ್ನು ಸಂಘ ಪರಿವಾರಕ್ಕೆ ತರುವತ್ತ ಗಮಹರಿಸಿದ್ದಾರೆ.

ಭಾಗವತ್ ಜೀ ಅವರ ಅವಧಿಯನ್ನು ಆರ್‌ಎಸ್‌ಎಸ್‌ನ 100 ವರ್ಷಗಳ ಪಯಣದಲ್ಲಿ ಅತ್ಯಂತ ಪರಿವರ್ತನಶೀಲ ಅವಧಿ ಎನ್ನಬಹುದು. ಸಮವಸ್ತ್ರದಲ್ಲಿನ ಬದಲಾವಣೆಗಳಿಂದ ಹಿಡಿದು ಶಿಕ್ಷಾ ವರ್ಗಗಳಲ್ಲಿನ(ತರಬೇತಿ ಶಿಬಿರ) ಬದಲಾವಣೆಗಳವರೆಗೆ, ಅವರ ನಾಯಕತ್ವದಲ್ಲಿ ಅನೇಕ ಪ್ರಮುಖ ಬದಲಾವಣೆಗಳಾದವು. ಕೋವಿಡ್ ಅವಧಿಯಲ್ಲಿ ಮೋಹನ್ ಜೀ ಅವರ ಪ್ರಯತ್ನಗಳನ್ನು ನಾನು ವಿಶೇಷವಾಗಿ ನನಪಿಸಿಕೊಳ್ಳುತ್ತೇನೆ, ಆ ಸಮಯದಲ್ಲಿ, ಆರ್‌ಎಸ್‌ಎಸ್‌ನ ಚಟುವಟಿಕೆಗಳನ್ನು ಮುಂದುವರಿಸುವುದು ಸವಾಲಿನ ಸಂಗತಿಯಾಗಿತ್ತು. ಆದರೆ ಸ್ವಯಂಸೇವಕರು ಸಂಕಷ್ಟದಲ್ಲಿರುವವನ್ನು ತಲುಪಲು ಸಾಧ್ಯವಿರುವ ಎಲ್ಲ ಪ್ರಯತ್ನ ಮಾಡಿದರು. ಅನೇಕ ಸ್ಥಳಗಳಲ್ಲಿ ವೈದ್ಯಕೀಯ ಶಿಬಿರಗಳನ್ನು ಆಯೋಜಿಸಿದರು. ಆನೇಕ ಶ್ರಮಶೀಲ ಸ್ವಯಂಸೇವಕರನ್ನು ಕಳೆದುಕೊಂಡರೂ ಮೋಹನ್ ಜೀಯವರ ದೃಢಸಂಕಲ್ಪ ಬದಲಾಗಲಿಲ್ಲ.

ಈ ವರ್ಷದ ಆರಂಭದಲ್ಲಿ, ನಾಗಪುರದಲ್ಲಿ ಮಾಧವ ನೇತ್ರ ಚಿಕಿತ್ಸಾಲಯದ ಉದ್ಘಾಟನಾ ಸಮಾರಂಭದಲ್ಲಿ 'ಆರ್‌ಎಸ್‌ಎಸ್ ನಮ್ಮ ರಾಷ್ಟ್ರೀಯ ಸಂಸ್ಕೃತಿ ಮತ್ತು ಸಾಮೂಹಿಕ ಪ್ರಜ್ಞೆಯನ್ನು ಚೈತನ್ಯಗೊಳಿಸುವ ಶಾಶ್ವತ ಆಲದ ಮರವಿದ್ದಂತೆ' ಎಂದು ನಾನು ಹೇಳಿದ್ದೆ. ಈ ಆಲದ ಮರದ ಬೇರುಗಳು ಆಳ ಮತ್ತು ಬಲವಾಗಿವೆ. ಏಕೆಂದರೆ ಅವು ಮೌಲ್ಯಗಳಲ್ಲಿ ಬೇರೂರಿವೆ. ಮೋಹನ್ ಭಾಗವತ್ ಜೀ ಈ ಮೌಲ್ಯಗಳನ್ನು ಪೋಷಿಸಲು ಮತ್ತು ಮುನ್ನಡೆಸಲು ತಮ್ಮನ್ನು ಸಮರ್ಪಿಸಿಕೊಂಡಿದ್ದಾರೆ.

**ಸೂಕ್ಷ್ಮತೆ, ಘನತೆಯ ವಿಶೇಷ ವ್ಯಕ್ತಿತ್ವ**

ಮೋಹನ್ ಜೀ ಅವರ ವ್ಯಕ್ತಿತ್ವದ ಪ್ರಶಂಸನೀಯ ಗುಣಗಳೆಂದರೆ, ಅವರ ಮೃದುಮಾತಿನ ಸ್ವಭಾವ ಮತ್ತು ಅಸಾಧಾರಣವಾದ ಆಲಿಸುವ ಸಾಮರ್ಥ್ಯ. ಈ ಗುಣಗಳು ಅವರ ವ್ಯಕ್ತಿತ್ವ ಮತ್ತು ನಾಯಕತ್ವಕ್ಕೆ ಸೂಕ್ಷ್ಮತೆ ಮತ್ತು ಘನತೆಯನ್ನು ತಂದಿವೆ. ವಿವಿಧ ಜನಾಂದೋಲನಗಳಲ್ಲಿ ಅವರ ತೀವ್ರ ಆಸಕ್ತಿಯ ಬಗ್ಗೆಯೂ ಬರೆಯಲು ಇಚ್ಛಿಸುತ್ತೇನೆ. ಸ್ವಚ್ಛ ಭಾರತ ಮಿಷನ್‌ನಿಂದ ಹಿಡಿದು ಬೇಟಿ ಬಚಾವೋ–ಬೇಟಿ ಪಡಾವೋವರೆಗೆ, ಅವರು ಇಡೀ ಸಂಘ ಪರಿವಾರಕ್ಕೆ ಈ ಅಂದೋಲನಗಳಿಗೆ ಶಕ್ತಿ ನೀಡುವಂತೆ ಕರೆ ನೀಡಿದ್ದಾರೆ. ಸಾಮಾಜಿಕ ಕಲ್ಯಾಣವನ್ನು ಉತ್ತೇಜಿಸಲು, ಸಾಮಾಜಿಕ ಸಾಮರಸ್ಯ, ಕುಟುಂಬ ಮೌಲ್ಯಗಳು, ಪರಿಸರ ಜಾಗೃತಿ, ರಾಷ್ಟ್ರೀಯ ಅಸ್ಥಿತೆ ಮತ್ತು ನಾಗರಿಕ ಕರ್ತವ್ಯಗಳೆಂಬ 'ಪಂಚ ಪರಿವರ್ತನೆ'ಗೆ ಕರೆ ನೀಡಿದ್ದಾರೆ.

ಪ್ರತಿಯೊಬ್ಬ ಸ್ವಯಂಸೇವಕ ಬಲಿಷ್ಠ ಮತ್ತು ಸಮೃದ್ಧ ರಾಷ್ಟ್ರದ ಕನಸು ಕಾಣುತ್ತಾನೆ. ಈ ಕನಸನ್ನು ನನಸಾಗಿಸಲು, ಸ್ಪಷ್ಟ ದೃಷ್ಟಿಕೋನ ಮತ್ತು ನಿರ್ಣಾಯಕ ಕ್ರಮ ಎರಡೂ ಅಗತ್ಯ. ಮೋಹನ್ ಜೀಯವರಲ್ಲಿ ಈ ಎರಡೂ ಗುಣಗಳು ಅಪಾರವಾಗಿದ್ದವು.

ಅವರು ಯಾವಾಗಲೂ 'ಏಕ ಭಾರತ–ಶ್ರೇಷ್ಠ ಭಾರತ'ದ ಪ್ರಬಲ ಪ್ರತಿಪಾದಕರಾಗಿದ್ದಾರೆ. ಭಾರತದ ವೈವಿಧ್ಯ, ವಿವಿಧ ಸಂಸ್ಕೃತಿಗಳು ಮತ್ತು ಸಂಪ್ರದಾಯಗಳಲ್ಲಿ ದೃಢನಂಬಿಕೆಯುಳ್ಳವರಾಗಿದ್ದಾರೆ. ತಮ್ಮ ಬಿಡುವಿಲ್ಲ ಕೆಲಸಗಳ ನಡುವೆಯೂ, ಓದುವಿಕೆ ಮತ್ತು ಸಂಗೀತ ವಾದ್ಯಗಳಲ್ಲಿ ಪರಿಣಿತರು ಎಂದು ಹಲವರಿಗೆ ತಿಳಿದಿಲ್ಲ.

ಈ ವರ್ಷ ಆರ್.ಎಸ್.ಎಸ್. ಸ್ಥಾಪನೆಯಾಗಿ 100 ವರ್ಷಗಳನ್ನು ಪೂರೈಸಲಿದೆ. ಈ ವರ್ಷ ವಿಜಯದಶಮಿ, ಗಾಂಧಿಜಯಂತಿ, ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿ ಮತ್ತು ಆರ್‌ಎಸ್‌ಎಸ್ ಶತಾಬ್ದಿ ಆಚರಣೆಗಳು ಒಂದೇ ದಿನ ಬರುತ್ತಿರುವುದು ಸಂತೋಷದ ವಿಷಯ. ಆರ್‌ಎಸ್‌ಎಸ್‌ನೊಂದಿಗೆ ಸಂಬಂಧ ಹೊಂದಿರುವ ಲಕ್ಷಾಂತರ ಜನರಿಗೆ ಇದೊಂದು ಐತಿಹಾಸಿಕ ಮೈಲಿಗಲ್ಲಾಗಲಿದೆ. ಈ ಸಂದರ್ಭದಲ್ಲಿ ಸಂಘಟನೆಯನ್ನು ಮುನ್ನೆಡೆಸುತ್ತಿರುವ ಮೋಹನ್ ಜೀ ಅವರಲ್ಲಿ ಅತ್ಯಂತ ಪ್ರಬುದ್ಧ ಮತ್ತು ಕಠಿಣ ಪರಿಶ್ರಮಿ 'ಸರಸಂಘಚಾಲಕ್ ಇದ್ದಾರೆ. ಎಲ್ಲ ಎಲ್ಲೆಗಳನ್ನು ಮೀರಿ ಎಲ್ಲವನ್ನೂ ನಮ್ಮವರೆಂದು ಪರಿಗಣಿಸಿದಾಗ, ಸಮಾಜದಲ್ಲಿ ನಂಬಿಕೆ, ಸಹೋದರತ್ವ ಮತ್ತು ಸಮಾನತೆ ನೆಲೆಯಾಗುತ್ತದೆ. ಇಂತಹ 'ವಸುಧೈವ ಕುಟುಂಬಕಂ' ಆಶಯದ ಜ್ವಲಂತ ಉದಾಹರಣೆ ಮೋಹನ್ ಜೀ ಭಾರತಮಾತೆಯ ಸೇವೆಗಾಗಿ ಮೋಹನ್ ಜೀಯವರಿಗೆ ಸುದೀರ್ಘ ಮತ್ತು ಆರೋಗ್ಯಕರ ಜೀವನ ಪ್ರಾಪ್ತಿಯಾಗಲಿ ಎಂದು ಮತ್ತೊಮ್ಮೆ ಹಾರೈಸುತ್ತೇನೆ.

**ನರೇಂದ್ರ ಮೋದಿ– ಪ್ರಧಾನಮಂತ್ರಿ**
**ಆಧಾರ:** ಕನ್ನಡ ಪ್ರಭ, ದಿನಾಂಕ:11.09.2025

# ಭಾಗ–10

# ಶ್ರದ್ಧಾಂಜಲಿ

## 1. ಡಾ: ಎನ್. ತಿಪ್ಪಣ್ಣ, ವಿಧಾನ ಪರಿಷತ್ತಿನ ಮಾಜಿ ಸದಸ್ಯರು



ಹಿರಿಯ ರಾಜಕಾರಣಿ ಡಾ:ಎನ್. ತಿಪ್ಪಣ್ಣರವರು ದಿನಾಂಕ:11.07.2025ರಂದು ನಿಧನ ಹೊಂದಿರುತ್ತಾರೆ.

ಡಾ: ಎನ್. ತಿಪ್ಪಣ್ಣರವರು ದಿನಾಂಕ:23.11.1928ರಲ್ಲಿ ಜನಿಸಿದ್ದು, ಬಿ.ಎ., ಬಿ.ಎಲ್ ಪದವಿ ಹೊಂದಿದ್ದರು. ಬಳ್ಳಾರಿ ವೀರಶೈವ ವಿದ್ಯಾವರ್ಧಕ ಸಂಘದ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದ ಶ್ರೀಯುತರು ಕರ್ನಾಟಕ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾಗಿ, ಗುಲ್ಬರ್ಗಾ ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರಾಗಿ ಸೇವೆ ಸಲ್ಲಿಸಿರುತ್ತಾರೆ. 40 ಶಿಕ್ಷಣ ಸಂಸ್ಥೆಗಳ ಸ್ಥಾಪನೆಯ ನೇತೃತ್ವ ವಹಿಸಿದ್ದ ಅವರು ಬಳ್ಳಾರಿ, ಬೆಂಗಳೂರು, ಆಂಧ್ರ ಪ್ರದೇಶ ಮತ್ತು ತಮಿಳುನಾಡಿನಲ್ಲಿ ನ್ಯಾಯವಾದಿಗಳಾಗಿ ಕಾರ್ಯನಿರ್ವಹಿಸಿದ್ದರು. ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್ತಿಗೆ ಚುನಾಯಿತರಾಗಿದ್ದ ಅವರು 1988–1994, 1994–2000 ಮತ್ತು 2006–2012ರವರೆಗೆ ವಿಧಾನ ಪರಿಷತ್ತಿನ ಸದಸ್ಯರಾಗಿದ್ದು, 2008ರಲ್ಲಿ ಹಂಗಾಮಿ ಸಭಾಪತಿಗಳಾಗಿಯೂ ಕಾರ್ಯನಿರ್ವಹಿಸಿದ್ದರು.

## 2. ಆರ್. ರಾಮಯ್ಯ, ವಿಧಾನಸಭೆಯ ಮಾಜಿ ಸದಸ್ಯರು



ಹಿರಿಯ ಸಜ್ಜನ ರಾಜಕಾರಣಿ ಶ್ರೀ ರಾಮಯ್ಯರವರು ದಿನಾಂಕ:21.08.2025ರಂದು ನಿಧನ ಹೊಂದಿರುತ್ತಾರೆ.

ಶ್ರೀಯುತ ಆರ್. ರಾಮಯ್ಯ, ಅವರು ದಿನಾಂಕ:22.05.1942ರಲ್ಲಿ ಜನಿಸಿದ್ದು, ವಿಶ್ವವಿದ್ಯಾಲಯದ ಮಟ್ಟದವರೆಗೆ ವಿದ್ಯಾಭ್ಯಾಸ ಮಾಡಿದ್ದ ಶ್ರೀಯುತರು ವೃತ್ತಿಯಲ್ಲಿ ಕೃಷಿಕರಾಗಿದ್ದರು. ಅಮೆಚೂರ್ ಕಲಾವಿದರಾಗಿದ್ದ ಅವರು 1985ರಲ್ಲಿ ಹಿರಿಯೂರು ಕ್ಷೇತ್ರದಿಂದ ಎಂಟನೇ ವಿಧಾನಸಭೆಗೆ ಚುನಾಯಿತರಾಗಿದ್ದರು.

* * * * *